ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 29 ಶುಕ್ರವಾರ 2023

ಸಂಪುಟ: 44 | ಸಂಚಿಕೆ: 252 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com


ಶ್...! ಆಪರೇಷನ್ ಕಮಲ ತಲ್ಲಣಗೊಂಡಿರುವ ಕಾಂಗ್ರೆಸ್ ನಾಯಕರು

● ಮನವೊಲಿಸುವ ಕಾರ್ಯಕ್ಕೆ ಮುಂದಾಗಿರುವ ಕೆಪಿಸಿಸಿ ಅಧ್ಯಕ್ಷರು ● ರಾಜ್ಯ ಬಿಜೆಪಿ ನಾಯಕರಿಗೆ ಅರಿವೇ ಇಲ್ಲದಂತೆ ಆಪರೇಷನ್ ನಿರತ ಕೇಂದ್ರ ಸಚಿವ ಪಿಯುಷ್ ಗೋಯಲ್, ಗೋವಾ ಸಿಎಂ ಪ್ರಮೋದ್ ಸಾವಂತ್

ಬೆಂಗಳೂರು, ಡಿ.28 (ಕೆಎಂಶಿ)–ಸದ್ದಿಲ್ಲದೆ ನಡೆಯುತ್ತಿರುವ ಆಪರೇಷನ್ ಕಮಲ ಕಾರ್ಯಾಚರಣೆಗೆ ಕಾಂಗ್ರೆಸ್ ನಾಯಕರು ತಲ್ಲಣಗೊಂಡಿದ್ದಾರೆ.

ಸಂಪುಟದಲ್ಲಿ ಅವಕಾಶ ದೊರೆಯದ, ಕೆಲವು ಉದ್ದಿಮೆಗಳನ್ನು ನಡೆಸುತ್ತಿರುವ ಪ್ರಭಾವೀ ಶಾಸಕರನ್ನು ಗುರಿಯಾಗಿಸಿಕೊಂಡು ಬಿಜೆಪಿ ಮುಖಂಡರು ತೆರೆಮರೆಯಲ್ಲಿ ಕಾರ್ಯಾಚರಣೆ ನಡೆಸಿದ್ದಾರೆ. ಆಪರೇಷನ್ ಕಮಲ ಕಾರ್ಯಾಚರಣೆಗೆ ಈ ಬಾರಿ ಯಾವುದೇ ರಾಜ್ಯ ನಾಯಕರನ್ನು ಬಳಸಿಕೊಂಡಿಲ್ಲ. ಕೇಂದ್ರ ಸಚಿವ ಪಿಯೂಷ್ ಗೋಯಲ್ ಹಾಗೂ ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಉಸ್ತುವಾರಿಯಲ್ಲಿ ನಡೆಯುತ್ತಿದೆ.

ಕರಾವಳಿ ಕಾಂಗ್ರೆಸ್‌ನ ಹಿರಿಯ ನಾಯಕರನ್ನು ಮುಂದಿಟ್ಟುಕೊಂಡು, ಸದ್ದಿಲ್ಲದೆ ಆಪರೇಷನ್ ಕಮಲಕ್ಕೆ ಬುನಾದಿ ಹಾಕುತ್ತಿದ್ದಾರೆ. ಕಾಂಗ್ರೆಸ್‌ನಿಂದ ಬಿಜೆಪಿಗೆ ಸೆಳೆಯಲ್ಪಡುವವರ ದೊಡ್ಡ ಪಟ್ಟಿಯೇ ಸಿದ್ಧಗೊಂಡಿದೆ, ಇದರ ಮಾಹಿತಿ ತಿಳಿಯುತ್ತಿದ್ದಂತೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಮ್ಮವರನ್ನು ಹಿಡಿದಿಟ್ಟುಕೊಳ್ಳಲು ಮುಂದಾಗಿದ್ದಾರೆ. ತಮ್ಮ ಶಾಸಕರನ್ನು ಬಿಜೆಪಿ ಸೆಳೆಯುತ್ತಿರುವುದನ್ನು ಪತ್ತೆ ಹಚ್ಚಿ, ಅವರ ಮನವೊಲಿಸಲು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಶಿವಕುಮಾರ್ ಅಖಾಡಕ್ಕೆ ಇಳಿದಿದ್ದಾರೆ. ಬಿಜೆಪಿ ಪಟ್ಟಿಯಲ್ಲಿರುವ ಕೆಲವು ಶಾಸಕರನ್ನು





ಪಿಯುಷ್ ಗೋಯಲ್ ಪ್ರಮೋದ್ ಸಾವಂತ್

ಮನೆಗೆ ಕರೆಸಿಕೊಂಡು ಮಾತನಾಡಿದರೆ, ಮತ್ತೆ ಕೆಲವು ಶಾಸಕರ ಮನೆಗೆ ತೆರಳಿ ಮನವೊಲಿಸುವ ಕಾರ್ಯದಲ್ಲಿ ತೊಡಗಿದ್ದಾರೆ. ಅಸಮಾಧಾನಿತ ಶಾಸಕರು ಪಕ್ಷದ ಚಟುವಟಿಕೆಗಳಿಂದ ಅಲ್ಲದೆ, ಶಾಸಕಾಂಗ ಪಕ್ಷದ ಸಭೆಗಳಿಂದಲೂ ದೂರ ಉಳಿದಿದ್ದಾರೆ. ಲೇಟೆಸ್ಟ್ ಕೃಷ್ಣಪ್ಪ ಹಾಗೂ ಅವರ ಪುತ್ರ ಪ್ರಿಯಕೃಷ್ಣ ಕೂಡ ಅಸಮಾಧಾನಿತರಲ್ಲಿ ಪ್ರಮುಖರು ಚುನಾವಣಾ ಸಂದರ್ಭದಲ್ಲಿ ಸಿದ್ದರಾಮಯ್ಯ ಹೇಳಿದ್ದನ್ನು ಚಾಚೂ ತಪ್ಪದೆ ಮಾಡಿದರೂ ತಮಗೆ ಅಧಿಕಾರ ನೀಡಲಿಲ್ಲ ಎಂಬ ಅಸಮಾಧಾನ ಅಪ್ಪ–ಮಗನಲ್ಲಿದೆ. ನೀಡಿದ ಭರವಸೆಗಳನ್ನೂ ಈಡೇರಿಸಿಲ್ಲ. ಅದು ಹೋಗಲಿ ಎಂದರೆ ಕ್ಷೇತ್ರಕ್ಕೆ ಅನುದಾನವನ್ನೂ ನೀಡುತ್ತಿಲ್ಲ ಎಂಬ ಬೇಸರದಲ್ಲಿದ್ದಾರೆ. ಇದು ಇವರದ್ದಷ್ಟೇ ಅಲ್ಲದೆ, ಬಂಡಾಯದ ಗುಂಪಿನಲ್ಲಿರುವ ಬಹುತೇಕ ಶಾಸಕರದ್ದಾಗಿದೆ. ಶಿವಕುಮಾರ್ ಹಾಗೂ ಕೃಷ್ಣಪ್ಪ ರಾಜಕೀಯವಾಗಿ ಸಮಾನಾಂತರ ದೂರ ಕಾಯ್ದುಕೊಂಡವರು, ಇಷ್ಟಾದರೂ ಕಳೆದ ಎರಡು ದಿನಗಳ ಹಿಂದೆ, ಕೃಷ್ಣಪ್ಪ ಅವರ ಮನೆಗೆ ಶಿವಕುಮಾರ್ ತೆರಳಿ ನಾಲ್ಕು ಗಂಟೆಗಳ ಕಾಲ ಚರ್ಚೆ ನಡೆಸಿದ್ದಲ್ಲದೆ, ಮನವೊಲಿಸುವ ಕಾರ್ಯವನ್ನೂ ಮಾಡಿದ್ದಾರೆ.

ತಮಗಿರುವ ಎಲ್ಲ ಬೇಸರವನ್ನು ಕೃಷ್ಣಪ್ಪ ಎಳೆ ಎಳೆಯಾಗಿ ಬಿಡಿಸಿಟ್ಟು, ಸಿದ್ದರಾಮಯ್ಯ ಹೇಳಿದ್ದೆಲ್ಲವನ್ನೂ ಮಾಡಿಯೂ ನಮಗೆ ಇಂತಹ ಸ್ಥಿತಿ ಬಂದಿದೆ. ನಮಗೂ ರಾಜಕೀಯ ಮಾಡಲು ಬರುತ್ತದೆ, ಅದನ್ನು ಮಾಡಿ ತೋರಿಸುತ್ತೇವೆ ಎಂದಿದ್ದಾರೆ. ಮಾತುಕತೆ ಮುಗಿದ ನಂತರ ಕೊನೆಯಲ್ಲಿ ಶಿವಕುಮಾರ್, ನನ್ನ ಬೆಂಬಲಕ್ಕೆ ನಿಲ್ಲಿರಪ್ಪಾ ಎಂದು ಅಪ್ಪ–ಮಗನನ್ನು ಕೋರಿದಾಗಲೂ, ಕೃಷ್ಣಪ್ಪ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ. ಶಿವಕುಮಾರ್ ಇವರನ್ನಷ್ಟೇ ಅಲ್ಲದೆ, ಇನ್ನೂ ಹಲವಷ್ಟು ಶಾಸಕರನ್ನು ಸಂಪರ್ಕಿಸಿ ಚರ್ಚೆ ಮಾಡಿದ್ದಾರೆ, ಅವರನ್ನು ಸಮಾಧಾನಪಡಿಸುವ, ಓಲೈಸುವ ಕೆಲಸವನ್ನೂ ಪಕ್ಷದ ಅಧ್ಯಕ್ಷರಾಗಿ ಮಾಡುತ್ತಿದ್ದಾರೆ. ಲೋಕಸಭಾ ಚುನಾವಣೆಗೂ ಮುನ್ನವೇ ಚೌಕಾಸಿ ನಾಯಕರೊಬ್ಬರು ಪಕ್ಷವನ್ನು ಒಡೆದು ಬಿಜೆಪಿ ಬೆಂಬಲಿಸುತ್ತಾರೆಂಬ ಜೆಡಿಎಸ್ ರಾಜ್ಯಾಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಹೇಳಿಕೆ ನೀಡಿದ ಬೆನ್ನಲ್ಲೇ ಈ ಘಟನಾವಳಿಗಳು ನಡೆಯುತ್ತಿವೆ.

ಚಾಮುಂಡಿಬೆಟ್ಟಕ್ಕೆ ರೋಪ್ ವೇ ಪ್ರಸ್ತಾಪ; ಪರಿಸರವಾದಿಗಳು, ಸಾಹಿತಿಗಳ ವಿರೋಧ

ಮುಂದಿನ ವಾರ ಮುಖ್ಯಮಂತ್ರಿ ಭೇಟಿಯಾಗಿ ವಿವರಣೆ ನೀಡಲು ನಿರ್ಧಾರ



ಮೈಸೂರಿನ ಪತ್ರಕರ್ತರ ಭವನದಲ್ಲಿ ಗುರುವಾರ ಪರಿಸರ ಬಳಗದ ಪರಿಸರವಾದಿ ಪರಶುರಾಮೇಗೌಡ ಅವರು ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು. ಬಳಗದ ಸದಸ್ಯೆ ಭಾಗ್ಯ ಶಂಕರ್, ಪ್ರಗತಿಪರ ಚಿಂತಕ ಪ್ರೊ. ಕಾಳಚನ್ನೇಗೌಡ, ಪಾರಂಪರಿಕ ತಜ್ಞ ಪ್ರೊ. ಎನ್.ಎಸ್.ರಂಗರಾಜು, ಲೇಖಕ ಪ್ರೊ. ಕಾಳೇಗೌಡ ನಾಗವಾರ, ಮಾಡೆಲ್ ಮಲ್ಲಮ್ಮ ಗಣಿಗಿ ಉಪಸ್ಥಿತರಿದ್ದಾರೆ.

ಮೈಸೂರು, ಡಿ.28(ಜಿಎ)–ಯಾರೂ ಆಕ್ಷೇಪಣೆ ವ್ಯಕ್ತಪಡಿಸದಿದ್ದರೆ ಹೋಟೆಲ್ ಮಾಲೀಕರ ಸಂಘದ ಮನವಿಯಂತೆ ಚಾಮುಂಡಿಬೆಟ್ಟಕ್ಕೆ ರೋಪ್ ವೇ ನಿರ್ಮಿಸಲು ಸಿದ್ಧವಿರುವುದಾಗಿ ಇತ್ತೀಚೆಗೆ ಮುಖ್ಯಮಂತ್ರಿ ಸಿದ್ಧರಾಮಯ್ಯ ಘೋಷಿಸಿದ್ದು, ಇದಕ್ಕೆ ಆಕ್ಷೇಪಿಸಿರುವ ನಗರದ ಪರಿಸರವಾದಿಗಳು ಮತ್ತು ಸಾಹಿತಿಗಳು ಜನವರಿ ಮೊದಲ ವಾರದಲ್ಲಿ ಬೆಂಗಳೂರಿನಲ್ಲಿ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ರೋಪ್ ವೇ ನಿರ್ಮಾಣದಿಂದ ಆಗುವ ಅನಾನುಕೂಲದ ಬಗ್ಗೆ ವಿವರಿಸಲು ನಿರ್ಧರಿಸಿದ್ದಾರೆ.

ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪರಿಸರ ಬಳಗದ ಪರಶುರಾಮೇಗೌಡರು, ರೋಪ್ ವೇ ವಿಚಾರವಾಗಿ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ವಿವರಣೆ ನೀಡಲು ಸಮಯ ಕೋರಿದ್ದೇವೆ. ಜ.2 ಅಥವಾ 3ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಭೇಟಿಗೆ ಅವಕಾಶ ನೀಡುವ ಸಾಧ್ಯತೆ ಇದ್ದು, ಮೈಸೂರು ಹೋಟೆಲ್ ಮಾಲೀಕರ ಸಂಘದ ಸದಸ್ಯರನ್ನೂ ಭೇಟಿ ಮಾಡಿ ಚಾಮುಂಡಿ ಬೆಟ್ಟದ ಪರಿಸರ ಸೂಕ್ಷ್ಮತೆಯ ಬಗ್ಗೆ ವಿವರಿಸಲಾಗುವುದು ಎಂದರು.

ಮೊದಲಿನಿಂದಲೂ ತೀವ್ರ ವಿರೋಧ: ಚಾಮುಂಡಿಬೆಟ್ಟಕ್ಕೆ ರೋಪ್ ವೇ ಅಳವಡಿಸುವುದಕ್ಕೆ ನಮ್ಮ ತೀವ್ರ ವಿರೋಧವಿದೆ. ಚಾಮುಂಡಿಬೆಟ್ಟವು ಮೈಸೂರಿನ ಅಸ್ಮಿತೆ ಮತ್ತು ಅದರ ಧಾರ್ಮಿಕ ಮಹತ್ವವನ್ನು ಕಾಪಾಡಲು ಕ್ರಮಗಳನ್ನು ತೆಗೆದುಕೊಳ್ಳಬೇಕು. ರಾಮಕೃಷ್ಣ ಹೆಗಡೆ ಮುಖ್ಯಮಂತ್ರಿಗಳಾಗಿದ್ದ ಅವಧಿಯಲ್ಲಿ ರೋಪ್ ವೇ ಪ್ರಸ್ತಾವನೆ ಮಾಡಲಾಗಿದ್ದು, ಅಂದಿನಿಂದ ಪರಿಸರ ಪ್ರೇಮಿಗಳು ಯೋಜನೆ ವಿರುದ್ಧ ಧ್ವನಿ ಎತ್ತುತ್ತಿದ್ದಾರೆ. ಮೈಸೂರಿನ ಅರಣ್ಯಾಧಿಕಾರಿಯೊಬ್ಬರು 2012ರಲ್ಲಿ ಚಾಮುಂಡಿಬೆಟ್ಟಕ್ಕೆ ರೋಪ್ ವೇ ಯೋಜನೆ ಅಗತ್ಯವಿಲ್ಲ ಎಂದು ಬೆಂಗಳೂರಿನ ಪ್ರಧಾನ ಮುಖ್ಯ ಅರಣ್ಯ ● 9ನೇ ಪುಟಕ್ಕೆ

ಫೆಬ್ರವರಿ ಅಂತ್ಯಕ್ಕೆ ಕನ್ನಡ ನಾಮಫಲಕ ಕಡ್ಡಾಯ ಜಾರಿ

● ಮುಖ್ಯಮಂತ್ರಿ ಸಿದ್ದರಾಮಯ್ಯ ಆದೇಶ; ಸುಗ್ರೀವಾಜ್ಞೆ ಮೂಲಕ ಕನ್ನಡ ಕಡ್ಡಾಯ ಮಾಡ್ತೇವೆ ● ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮ ಭಾಷೆ ● ಅಂಗಡಿ–ಮುಂಗಟ್ಟು, ವಾಣಿಜ್ಯ ಸಂಸ್ಥೆಗಳು ಸೇರಿದಂತೆ ಎಲ್ಲಾ ಫಲಕ ಶೇ. 60–40ರ ಪ್ರಮಾಣದಲ್ಲಿ ಪ್ರದರ್ಶಿತವಾಗಬೇಕು.

ಬೆಂಗಳೂರು, ಡಿ. 28(ಕೆಎಂಶಿ)–ಅಂಗಡಿ–ಮುಂಗಟ್ಟು ಹಾಗೂ ವಾಣಿಜ್ಯ ಸಂಸ್ಥೆಗಳು 2024ರ ಫೆಬ್ರವರಿ ಅಂತ್ಯದೊಳಗೆ ಕನ್ನಡ ನಾಮಫಲಕಗಳನ್ನು ಕಡ್ಡಾಯವಾಗಿ ಅಳವಡಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆದೇಶ ಮಾಡಿದ್ದಾರೆ. ಕನ್ನಡ ನಾಮಫಲಕ ಹಾಕುವಂತೆ ಒತ್ತಾಯಿಸಿ ರಾಜ್ಯಾದ್ಯಂತ ಕನ್ನಡ ಪರ ಸಂಘಟನೆಗಳು ಬೀದಿಗಿಳಿದು ಹೋರಾಟ ನಡೆಸುತ್ತಿರುವ ಬೆನ್ನಲ್ಲೇ ಮುಖ್ಯಮಂತ್ರಿ ಅವರಿಂದು ಗೃಹ ಕಚೇರಿ ಕೃಷ್ಣಾದಲ್ಲಿ ಉನ್ನತ ಮಟ್ಟದ ಸಭೆ ನಡೆಸಿ ಈ ಮಹತ್ವದ ತೀರ್ಮಾನ ಕೈಗೊಂಡಿದ್ದಾರೆ.

ಸುಗ್ರೀವಾಜ್ಞೆ ಮೂಲಕ ಕಡ್ಡಾಯ: ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮ ಭಾಷೆ, ಇದರಲ್ಲಿ ಯಾವುದೇ ರಾಜೀ ಇಲ್ಲ. ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಅಧಿನಿಯಮ 2022ರ ಸೆಕ್ಷನ್ 17 (6)ಕ್ಕೆ ಸುಗ್ರೀವಾಜ್ಞೆ ಮೂಲಕ ತಿದ್ದುಪಡಿ ತಂದು ಕನ್ನಡ ಫಲಕ ಹಾಕುವುದನ್ನು ಕಡ್ಡಾಯಗೊಳಿಸಲಾಗುವುದು ಎಂದಿದ್ದಾರೆ.

ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ



ಮಾತನಾಡಿದ ಅವರು, ಸುಗ್ರೀವಾಜ್ಞೆ ಜಾರಿ ನಂತರ ಅಂಗಡಿ–ಮುಂಗಟ್ಟುಗಳಿಗೆ ಕನ್ನಡ ನಾಮಫಲಕ ಅಳವಡಿಕೆಗೆ ಗಡುವು ನೀಡಲಾಗುವುದು ಎಂದರು. ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಅಧಿನಿಯಮದ ಪ್ರಕಾರ ಸರ್ಕಾರದ ಅಥವಾ ಸ್ಥಳೀಯ ಪ್ರಾಧಿಕಾರದ ಅನುಮೋದನೆಯೊಂದಿಗೆ ನಡೆಸುತ್ತಿರುವ ವಾಣಿಜ್ಯ ಕೈಗಾರಿಕೆ, ವ್ಯಾಪಾರ ಸಂಸ್ಥೆ, ಸಮಾಲೋಚನಾ ಕೇಂದ್ರಗಳು, ಆಸ್ಪತ್ರೆಗಳು, ಪ್ರಯೋಗಾಲಯಗಳು, ಮನೋರಂಜನಾ ಕೇಂದ್ರಗಳು ಮತ್ತು ಹೋಟೆಲ್ ಮುಂತಾದವುಗಳ ಹೆಸರನ್ನು ಪ್ರದರ್ಶಿಸುವ ಫಲಕಗಳ ಮೇಲಿನ ಅರ್ಧ ಭಾಗವು ಕನ್ನಡದಲ್ಲಿ ಇರತಕ್ಕದ್ದು ಎಂದು ತಿಳಿಸಲಾಗಿದೆ. ಇದಕ್ಕೂ ಮೊದಲು 2018ರಲ್ಲಿ ಹೊರಡಿಸಿದ ಸುತ್ತೋಲೆಯಲ್ಲಿ ನಾಮಫಲಕದಲ್ಲಿ ಶೇ.60 ಕನ್ನಡ ಭಾಷೆ ಹಾಗೂ ಶೇ.40ರಷ್ಟು ಇತರ ಭಾಷೆಯಲ್ಲಿರಬಹುದು ಎಂದು ತಿಳಿಸಲಾಗಿದೆ.

ಇದರಂತೆಯೇ ಸುಗ್ರೀವಾಜ್ಞೆ ಹೊರಡಿಸಿ, ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಅಧಿನಿಯಮ 2022ರ ಸೆಕ್ಷನ್ 17 (6)ಕ್ಕೆ ತಿದ್ದುಪಡಿ ತಂದು 2024ರ ಫೆಬ್ರವರಿ 28ರೊಳಗೆ ವಾಣಿಜ್ಯ ಮಳಿಗೆಗಳು ಅನುಷ್ಠಾನಗೊಳಿಸಲು ಗಡುವು ನೀಡಲಾಗುವುದು. ಈ ಕಾಯ್ದೆಯ ನಿಯಮ 17(8)ರಲ್ಲಿ ರಾಜ್ಯದಲ್ಲಿ ಸಾರ್ವಜನಿಕರ ● 9ನೇ ಪುಟಕ್ಕೆ

ಕನ್ನಡಪರ ಹೋರಾಟಗಾರರ ಬಗ್ಗೆ ಗೌರವ ಇದೆ, ಸಾರ್ವಜನಿಕ ಆಸ್ತಿ ಹಾನಿ ಮಾಡಿದರೆ ಸುಮ್ಮನಿರಲ್ಲ



ಬೆಂಗಳೂರು: ನಮಗೆ ಕನ್ನಡಪರ ಹೋರಾಟಗಾರರ ಬಗ್ಗೆ ಗೌರವ ಇದೆ. ಕನ್ನಡದ ಹೆಸರಿನಲ್ಲಿ ಹೋರಾಟಗಾರರು ಸಾರ್ವಜನಿಕರ ಆಸ್ತಿಪಾಸ್ತಿ ಹಾನಿ ಮಾಡಿದರೆ ಸರ್ಕಾರ ಕಣ್ಣುಮುಚ್ಚಿಕೊಂಡು ಸುಮ್ಮನೆ ಇರಲು ಸಾಧ್ಯವಿಲ್ಲ ಎಂದು ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರಿಗೆ ಡಿಸಿಎಂ ಡಿಕೆ ಶಿವಕುಮಾರ್ ಎಚ್ಚರಿಕೆ ಕೊಟ್ಟಿದ್ದಾರೆ.

ಸರ್ಕಾರ, ಕನ್ನಡಪರ ಹೋರಾಟಗಾರರನ್ನು ಹತ್ತಿಕ್ಕುವ ಕೆಲಸ ಮಾಡುತ್ತಿದೆ ಎಂದು ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ ನಾರಾಯಣಗೌಡ ಅವರ ಆರೋಪಕ್ಕೆ ಪ್ರತಿಕ್ರಿಯಿಸಿದ ಡಿ.ಕೆ.ಶಿವಕುಮಾರ್, ಕನ್ನಡಪರ ಹೋರಾಟ ಮಾಡುವವರಿಗೆ ನಮ್ಮ ಅಭ್ಯಂತರವಿಲ್ಲ. ಆದರೆ ಕಾನೂನು ಕೈಗೆತ್ತಿಕೊಳ್ಳಬಾರದು, ಬೆಂಗಳೂರು ನಗರದ ಆಸ್ತಿಪಾಸ್ತಿಗಳನ್ನು ಹಾನಿ ಮಾಡುವುದನ್ನು ಒಪ್ಪಲು ತಯಾರಿಲ್ಲ ಎಂದರು. ಕರ್ನಾಟಕದಲ್ಲಿ ಶೇ.60ರಷ್ಟು ಕನ್ನಡದಲ್ಲಿ ಬೋರ್ಡ್ ಹಾಕಬೇಕೆಂಬ ನಿಯಮ ಒಪ್ಪಿಕೊಳ್ಳೋಣ, ಹೋರಾಟ ಮಾಡುವುದಕ್ಕೆ ಇತಿಮಿತಿ ಇದೆ. ಕನ್ನಡ ಕಡ್ಡಾಯ ಮಾಡಲು ನೋಟೀಸ್ ಜಾರಿ ಮಾಡುತ್ತೇವೆ. ನಾರಾಯಣ ಗೌಡರಿಗೆ ನಾನು ಇದನ್ನೇ ಹೇಳುತ್ತೇನೆ, ಯಾರ ಆಸ್ತಿಯನ್ನೂ ನಾಶ ಮಾಡಬಾರದು ಎಂದರು.

ಮನೆ ಮಂದಿಗೆಲ್ಲಾ ಮುಡಾ ಸೈಟ್ ಕೊಡಿಸುವುದಾಗಿ ವಂಚನೆ: ವಕೀಲೆ, ಆಕೆಯ ಪತಿ ವಿರುದ್ಧ ಕೇಸ್

ಮೈಸೂರು, ಡಿ.28–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ನಿವೇಶನಗಳನ್ನು ಕೊಡಿಸುವುದಾಗಿ ನಂಬಿಸಿ ವೃದ್ಧರೊಬ್ಬರಿಗೆ 12.24 ಲಕ್ಷ ರೂ. ವಂಚಿಸಿರುವ ಆರೋಪದ ಮೇರೆಗೆ ಮೈಸೂರಿನ ವಕೀಲೆ ಹಾಗೂ ಆಕೆಯ ಪತಿ ವಿರುದ್ಧ ಪ್ರಕರಣ ದಾಖಲಾಗಿದೆ.

ಮೂಲತಃ ನಂಜನಗೂಡು ತಾಲೂಕು ದೊಡ್ಡ ಕವಲಂದೆ ಗ್ರಾಮದವರಾಗಿದ್ದು, ಹಾಲಿ ಬೆಂಗಳೂರಿನ ಕೆಂಗೇರಿಯಲ್ಲಿ ವಾಸ ಮಾಡುತ್ತಿರುವ ಮೈಕೋ ಕಂಪನಿಯ ನಿವೃತ್ತ ಉದ್ಯೋಗಿ ಎಂ.ನಾಗರಾಜು ವಂಚನೆಗೊಳಗಾದವರಾಗಿದ್ದು, ಮೈಸೂರಿನ ಜೆ.ಪಿ.ನಗರದ ವಕೀಲೆ ಎಂ.ಅನಿತಾ ಮತ್ತು ಆಕೆಯ ಪತಿ ಬಿ.ಜಿ.ದೇವೇಂದ್ರ ಆರೋಪಕ್ಕೆ ಗುರಿಯಾಗಿರುವವರು.

ಈ ಹಿಂದೆಯು ಇವರ ವಿರುದ್ಧ ವಂಚನೆ ಪ್ರಕರಣ ದಾಖಲು

ವಿವರ: ನಾಗರಾಜು ಅವರ ಪುತ್ರ ಅನಿಲ್ ಕುಮಾರ್ ಮೈಸೂರಿನ ಗಿರಿಜಾಂಬ ಎಂಬುವರನ್ನು ಮದುವೆಯಾಗಿದ್ದಾರೆ. ವಿಶ್ವೇಶ್ವರ ನಗರ ಬಸ್ ನಿಲ್ದಾಣದ ಬಳಿ ಕೌಸ್ತುಭ ಎಂಟರ್ ಪ್ರೈಸಸ್ ಎಂಬ ಹೆಸರಿನಲ್ಲಿ ಬಟ್ಟೆ ಮತ್ತು ಬಳೆ ಅಂಗಡಿಯನ್ನು ನಡೆಸುತ್ತಿದ್ದ ವಕೀಲೆ ಅನಿತಾ ಅವರು ಗಿರಿಜಾಂಬಗೆ ಪರಿಚಯಸ್ಥರಾಗಿದ್ದು, ಪರಿಶಿಷ್ಟ ಜಾತಿಯವರಿಗೆ ಮುಡಾದಿಂದ ನಿವೇಶನಗಳು ದೊರೆಯುತ್ತವೆ. ಮುಡಾ ಕಚೇರಿಯಲ್ಲಿ ತಮಗೆ ಪರಿಚಯಸ್ಥ ಅಧಿ ಕಾರಿಗಳಿರುವುದರಿಂದ ಹಣ ಕೊಟ್ಟರೆ ನಿಮ್ಮ ಮನೆಯಲ್ಲಿರುವವರೆಲ್ಲರಿಗೂ ನಿವೇಶನ ಕೊಡಿಸುತ್ತೇನೆ ಎಂದು ಗಿರಿಜಾಂಬ ಅವರಿಗೆ ಅನಿತಾ ತಿಳಿಸಿದ್ದರಂತೆ. ಈ ಹಿನ್ನೆಲೆಯಲ್ಲಿ ನಾಗರಾಜು ಅವರು ಅನಿತಾ ಅವರ ಅಂಗಡಿಗೆ ಬಂದು ● 9ನೇ ಪುಟಕ್ಕೆ

ಕಾಕನಕೋಟೆ ಸಫಾರಿ ಕೇಂದ್ರದ ಸಿಬ್ಬಂದಿಯ ಉದ್ಧಟತನ; ಸಫಾರಿಗೆ ಗಂಟೆಗಟ್ಟಲೆ ಕಾದು ನಿಂತವರ ಆಕ್ರೋಶ

ಇಂತಹ ಬೇಜವಾಬ್ದಾರಿ ಅಧಿಕಾರಿ ವರ್ಗವಿದ್ದರೆ ಪ್ರವಾಸೋದ್ಯಮ ಉದ್ಧಾರವಾದಂತೆಯೇ...!

ಮೈಸೂರು, ಡಿ.28– ಹೆಚ್.ಡಿ.ಕೋಟೆ ತಾಲೂಕು, ನಾಗರಹೊಳೆ ಅಂತರಸಂತೆ ವಲಯದ ಕಾಕನಕೋಟೆ ಸಫಾರಿ ಕೇಂದ್ರದ ಅವ್ಯವಸ್ಥೆಯಿಂದ ರೋಸಿಹೋದ ಪ್ರವಾಸಿಗರು, ಅರಣ್ಯ ಇಲಾಖೆ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ರಾಜ್ಯದ ವಿವಿಧೆಡೆ ಹಾಗೂ ಹೊರ ರಾಜ್ಯಗಳಿಂದ ಸಫಾರಿಗೆಂದು ಆಗಮಿಸಿದ್ದ ಪ್ರವಾಸಿಗರು, ಟಿಕೆಟ್ ಕೌಂಟರ್ ಮುಂದೆ ಕಾದು ನಿಂತಿದ್ದರು. ಆದರೆ ಅಲ್ಲಿ ಕಾರ್ಯ ನಿರ್ವಹಿಸಬೇಕಿದ್ದ ಅಧಿಕಾರಿ, ನ್ಯಾಯಾಲಯಕ್ಕೆ ಹೋಗಿದ್ದು ಇನ್ನೇನು ಬರುತ್ತಾರೆ ಎಂದು ಅಲ್ಲಿದ್ದ ಸಿಬ್ಬಂದಿ ಹೇಳಿದ್ದರಿಂದ ಪ್ರವಾಸಿಗರು ಬಿಸಿಲನ್ನೂ ಲೆಕ್ಕಿಸದೆ ಸರತಿಯಲ್ಲೇ ನಿಂತಿದ್ದರು.

ಎರಡು–ಮೂರು ಗಂಟೆಯ ನಂತರ ಅಲ್ಲಿದ್ದ ಸಿಬ್ಬಂದಿ ಸಫಾರಿಯ ಎಲ್ಲಾ ಟಿಕೆಟ್‌ಗಳೂ ಆನ್‌ಲೈನ್‌ನಲ್ಲಿ ಬುಕ್ ಆಗಿದ್ದು, ಈ ದಿನದ ಟಿಕೆಟ್ ಲಭ್ಯವಿಲ್ಲ ಎಂದು ಉಡಾಫೆಯಿಂದ ಹೇಳಿದ್ದಾರೆ. ಇದರಿಂದ ಸಿಟ್ಟಿಗೆದ್ದ ಪ್ರವಾಸಿಗರು, ಆತನನ್ನು ತರಾಟೆ ತೆಗೆದುಕೊಂಡಿದ್ದಾರೆ. ● 9ನೇ ಪುಟಕ್ಕೆ



ಬಿಸಿಲಲ್ಲಿ ಟಿಕೆಟ್ ಕೌಂಟರ್ ಮುಂದೆ ಸಾಲುಗಟ್ಟಿ ನಿಂತಿರುವ ಪ್ರವಾಸಿಗರು

ತಮಿಳು ಹಿರಿಯ ನಟ, ರಾಜಕಾರಣಿ 'ಕ್ಯಾಪ್ಟನ್' ವಿಜಯಕಾಂತ್ ವಿಧಿವಶ



ಚೆನ್ನೈ: ತಮಿಳು ಚಿತ್ರರಂಗದ ಸೂಪರ್ ಸ್ಟಾರ್, ಡಿಎಂಡಿಕೆ ನಾಯಕ ವಿಜಯ ಕಾಂತ್ (71) ಅವರು ಗುರುವಾರ ಚೆನ್ನೈನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

ಕೋವಿಡ್ ಸೋಂಕಿಗೆ ತುತ್ತಾಗಿದ್ದ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಇಂದು ಬೆಳಗ್ಗೆ ಅವರು ನಿಧನ ಹೊಂದಿರುವುದಾಗಿ ಕುಟುಂಬದ ಮೂಲಗಳು ಮಾಹಿತಿ ನೀಡಿವೆ. ಆಸ್ಪತ್ರೆ ಮೂಲಗಳ ಪ್ರಕಾರ ವಿಜಯ ಕಾಂತ್ ಅವರು ನ್ಯುಮೋನಿಯಾಕ್ಕೆ ತುತ್ತಾಗಿದ್ದರು. ಇದರಿಂದ ಅವರಿಗೆ ವೆಂಟಿಲೇಟರ್ ಮೂಲಕ ಚಿಕಿತ್ಸೆ ನೀಡಲಾಗುತ್ತಿತ್ತು. ವೈದ್ಯಕೀಯ ಸಿಬ್ಬಂದಿಯ ● 6ನೇ ಪುಟಕ್ಕೆ

ಮಧ್ಯರಾತ್ರಿ 1 ಗಂಟೆವರೆಗಷ್ಟೇ ಹೊಸ ವರ್ಷಾಚರಣೆ ಮಸ್ತ್ ಮಜಾ

● ಡಿ.31ರ ರಾತ್ರಿ 9 ಗಂಟೆ ನಂತರ ಚಾಮುಂಡಿಬೆಟ್ಟಕ್ಕೆ ಪ್ರವೇಶ ನಿಷಿದ್ಧ ● ಹೊಸ ವರ್ಷಾಚರಣೆ ಪಾರ್ಟಿ ಆಯೋಜಿಸುವವರು ಕೆವೈಸಿ ಶಿಷ್ಟಾಚಾರ ಪಾಲಿಸುವುದು ಕಡ್ಡಾಯ

ಮೈಸೂರು, ಡಿ.28(ಆರ್‌ಕೆ)–2023ರ ಡಿಸೆಂಬರ್ 31ರಂದು ಮಧ್ಯರಾತ್ರಿ 1 ಗಂಟೆಗೆ ಹೊಸ ವರ್ಷಾಚರಣೆ ಸಂಭ್ರಮ, ಔತಣ ಕೂಟ (New Year Party) ಮುಕ್ತಾಯಗೊಳಿಸಬೇಕೆಂದು ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ತಿಳಿಸಿದ್ದಾರೆ.

ನಜರ್‌ಬಾದಿನ ತಮ್ಮ ಕಚೇರಿ ಸಭಾಂಗಣದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ಡಿಸೆಂಬರ್ 31ರ ರಾತ್ರಿ ಆರಂಭವಾಗುವ ಹೊಸ ವರ್ಷಾಚರಣೆ ಕಾರ್ಯಕ್ರಮವನ್ನು ಅಂದು ಮಧ್ಯರಾತ್ರಿ 1 ಗಂಟೆಗೆ ಎಲ್ಲಾ ಹೋಟೆಲ್, ರೆಸ್ಟೋರೆಂಟ್, ಕ್ಲಬ್, ರೆಸಾರ್ಟ್, ಹೋಂ ಸ್ಟೇ, ಸರ್ವಿಸ್ ಅಪಾರ್ಟ್‌ಮೆಂಟ್, ಮಾಲ್‌ಗಳು ಮತ್ತು ಸಂಘ–ಸಂಸ್ಥೆಗಳು ಮುಕ್ತಾಯಗೊಳಿಸಬೇಕು ಎಂದರು.

ಸರ್ಕಾರ ನಿಗದಿಪಡಿಸಿದ ಅವಧಿಗಿಂತ ಹೆಚ್ಚಿನ ಸಮಯದಲ್ಲಿ ಕಾರ್ಯಕ್ರಮ ನಡೆಸಬೇಕಾದಲ್ಲಿ ರೆಸ್ಟೋರೆಂಟ್ ಮತ್ತು ಮದ್ಯ ಸರಬರಾಜು ಮಾಡುವ ಹೋಟೆಲ್‌ಗಳು ಅಬಕಾರಿ ಇಲಾಖೆ ಮತ್ತು ಪೊಲೀಸ್ ಘಟಕದಿಂದ ವಿಶೇಷ ಅನುಮತಿ ಪಡೆಯಬೇಕು. ತಮ್ಮ ಅಂಗಡಿ, ಹೋಟೆಲು, ರೆಸ್ಟೋರೆಂಟ್, ಕ್ಲಬ್‌ಗಳಲ್ಲಿ ಸಿಸಿ ಕ್ಯಾಮರಾಗಳು ಕಾರ್ಯ ನಿರ್ವಹಿಸುವಂತೆ ನೋಡಿಕೊಳ್ಳಬೇಕೆಂದು ಆಯುಕ್ತರು ತಿಳಿಸಿದರು.



ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಡಿಸಿಪಿಗಳಾದ ಎಂ.ಮುತ್ತುರಾಜ್, ಎಸ್.ಜಾಹ್ನವಿ ಚಿತ್ರದಲ್ಲಿದ್ದಾರೆ.



ಹೊಸ ವರ್ಷಾಚರಣೆ ಎಂದು ರಸ್ತೆಯಲ್ಲಿ ಅಸಭ್ಯವಾಗಿ ವರ್ತಿಸುವುದು ಸಲ್ಲದು. ಹಾಗೆಯೇ ಸಂತೋಷ ಕೂಟಗಳಿಗೆ ಧ್ವನಿವರ್ಧಕ ಅಳವಡಿಸಲು ಪೊಲೀಸ್ ಆಯುಕ್ತರ ಕಚೇರಿಗೆ ಅರ್ಜಿ ಸಲ್ಲಿಸಿ ಪೂರ್ವಾನುಮತಿ ಪಡೆದುಕೊಳ್ಳಬೇಕು ಎಂದು ರಮೇಶ್ ತಿಳಿಸಿದರು. ಸಾಂಸ್ಕೃತಿಕ ಕಾರ್ಯಕ್ರಮದ ನೆಪದಲ್ಲಿ ಅಶ್ಲೀಲ, ಅರೆಬೆತ್ತಲೆ ನೃತ್ಯ ಪ್ರದರ್ಶನ, ಮಾದಕ ವಸ್ತು ಸೇವನೆ, ಜೂಜಾಟ ನಿಷೇಧಿಸಲಾಗಿದೆ. ರಸ್ತೆಯಲ್ಲಿ ಅನಗತ್ಯವಾಗಿ ಓಡಾಡುವುದು, ಸಾರ್ವಜನಿಕರನ್ನು ಬಲವಂತವಾಗಿ ತಡೆದು ಅವರ ಇಚ್ಛೆಗೆ ವಿರುದ್ಧವಾಗಿ ವರ್ತಿಸಿ, ಕಿರಿಕಿರಿ ಉಂಟು ಮಾಡಬಾರದು ಎಂದು ಅವರು ಎಚ್ಚರಿಕೆ ನೀಡಿದ್ದಾರೆ. ಡಿಸೆಂಬರ್ 31ರಂದು ರಾತ್ರಿ 9 ಗಂಟೆ ನಂತರ ತಾವರೆಕಟ್ಟೆ ಗೇಟ್ ಮೂಲಕ ಚಾಮುಂಡಿಬೆಟ್ಟಕ್ಕೆ ಪ್ರವೇಶ ನಿರ್ಬಂಧಿಸಲಾಗಿದೆ. ಆ ಸಮಯದಲ್ಲಿ ಬೆಟ್ಟಕ್ಕೆ ● 6ನೇ ಪುಟಕ್ಕೆ

ಕಾನೂನು–ಸುವ್ಯವಸ್ಥೆ ಪಾಲನೆಗೆ 334 ಸಿಸಿ ಕ್ಯಾಮರಾ ಕಣ್ಗಾವಲು

ಮೈಸೂರು, ಡಿ.28(ಆರ್‌ಕೆ)–ಹೊಸ ವರ್ಷಾಚರಣೆ ಹಿನ್ನೆಲೆಯಲ್ಲಿ ಡಿಸೆಂಬರ್ 31ರಂದು ಮೈಸೂರು ನಗರ ಹಾಗೂ ಹೊರ ವಲಯದ ಚೆಕ್‌ಪೋಸ್ಟ್‌ಗಳಲ್ಲಿ ಕಟ್ಟುನಿಟ್ಟಿನ ನಿಗಾ ವಹಿಸಲಾಗುವುದು ಎಂದು ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ತಿಳಿಸಿದ್ದಾರೆ.

ಮೈಸೂರಿನ ಹೊರ ವಲಯದಲ್ಲಿ 12 ಕಡೆ, ನಗರದ ವಿವಿಧೆಡೆ 18 ಕಡೆ ಚೆಕ್‌ಪೋಸ್ಟ್‌ಗಳನ್ನು ನಿರ್ಮಿಸಿ ತೀವ್ರ ತಪಾಸಣೆ ಮಾಡಲಾಗುತ್ತದೆ. ರಿಂಗ್ ರಸ್ತೆಯಲ್ಲಿ 8, ಹೈವೇ ಪೆಟ್ರೋಲ್ ವಾಹನಗಳು ಕಾರ್ಯ ನಿರ್ವಹಿಸಲಿದ್ದು, 18 ಗರುಡಾ ಹಾಗೂ 112 ವಾಹನಗಳು ಮೈಸೂರು ನಗರದಾದ್ಯಂತ ಸಂಚರಿಸಿ ಕಿಡಿಗೇಡಿಗಳ ಮೇಲೆ ತೀವ್ರ ಕಟ್ಟೆಚ್ಚರ ವಹಿಸಲಾಗುವುದು ಎಂದು ಪೊಲೀಸ್ ಆಯುಕ್ತರು ತಿಳಿಸಿದರು. ಶುಭಾಶಯ ಕೋರುವ ನೆಪದಲ್ಲಿ ಅಸಭ್ಯವಾಗಿ ವರ್ತಿಸುವುದನ್ನು ತಡೆಯಲು ಮೈಸೂರು ನಗರದಲ್ಲಿ 36 ವಿಶೇಷ ಕಾರ್ಯಪಡೆ ತಂಡ ರಚಿಸಲಾಗಿದ್ದು, 8 ಸುರಕ್ಷಾ ಪಿಂಕ್ ಗರುಡಾ (ಚಾಮುಂಡಿ ಪಡೆ) ಪಡೆಗಳು, 4 ಶ್ವಾನ ದಳ ಮತ್ತು ವಿಧ್ವಂಸಕ ಕೃತ್ಯ ತಡೆ ತಂಡದಿಂದ ತಪಾಸಣೆ ನಡೆಸಲಾಗುವುದು ಎಂದು ಪೊಲೀಸ್ ಆಯುಕ್ತರು ತಿಳಿಸಿದ್ದಾರೆ. ಹೊಸ ವರ್ಷಾಚರಣೆ ನೆಪದಲ್ಲಿ ವ್ಹೀಲಿಂಗ್, ಡ್ರ್ಯಾಗ್ ರೇಸ್, ಕರ್ಕಶ ಶಬ್ದ ಮಾಡುವುದನ್ನು ತಡೆಯಲು ಸಂಚಾರ ಪೊಲೀಸ್, ತಜ್ಞರನ್ನೊಳಗೊಂಡ ಕ್ಷಿಪ್ರ ಕಾರ್ಯಪಡೆ ರಚಿಸಲಾಗಿದೆ. ಮದ್ಯಪಾನ ಮಾಡಿ ವಾಹನ ಚಾಲನೆ ಬಗ್ಗೆ ನಿಗಾ ವಹಿಸಲು 5 ಸಂಚಾರ ಕ್ಷಿಪ್ರ ಕಾರ್ಯಪಡೆ ರಚಿಸಲಾಗಿದ್ದು, ಅಂದು ರಾತ್ರಿ ಅವರು ನಗರದಾದ್ಯಂತ ಗಸ್ತು ತಿರುಗಿ ಕಾರ್ಯಾಚರಣೆ ನಡೆಸುವರು ಎಂದರು.

ಅಂದು ಬಂದೋಬಸ್ತ್ ಕರ್ತವ್ಯಕ್ಕಾಗಿ 3 ಡಿಸಿಪಿ, 12 ಎಸಿಪಿಗಳು, 30 ಇನ್ಸ್‌ಪೆಕ್ಟರ್‌ಗಳು, 42 ಸಬ್ ಇನ್ಸ್‌ಪೆಕ್ಟರ್‌ಗಳು, 70 ಎಎಸ್‌ಪಿಗಳು, 550 ಸಿಬ್ಬಂದಿ ಮತ್ತು 80 ಮಹಿಳಾ ಪೊಲೀಸ್ ಕಾನ್‌ಸ್ಟೇಬಲ್‌ಗಳನ್ನು ನಿಯೋಜಿಸಲಾಗಿದ್ದು, ತೀವ್ರ ಕಾರ್ಯಾಚರಣೆ ನಡೆಸಲಾಗುವುದು ಎಂದ ಪೊಲೀಸ್ ಆಯುಕ್ತರು, 12 ಸಿಎಆರ್, 4 ಕೆಎಸ್‌ಆರ್‌ಪಿ ತುಕಡಿ, 4 ಕಮಾಂಡೋ ಪಡೆ, 1 ಶ್ವಾನದಳ ಹಾಗೂ 4 ಎಎಸ್‌ಪಿ ತಂಡಗಳನ್ನು ಹೊಸ ವರ್ಷಾಚರಣೆ ಬಂದೋಬಸ್ತ್ ಕರ್ತವ್ಯಕ್ಕೆ ನಿಯೋಜಿಸಲಾಗಿದೆ ಎಂದರು.



ಕೆವೈಸಿ ಶಿಷ್ಟಾಚಾರ: ಡಿ.31ರಂದು ರಾತ್ರಿ ಹೊಸ ವರ್ಷಾಚರಣೆ ಪ್ರಯುಕ್ತ ಆಯೋಜಿಸುವ ● 6ನೇ ಪುಟಕ್ಕೆ

ಮೈಸೂರಲ್ಲಿ ಕಾಂಗ್ರೆಸ್ ಪಕ್ಷದ 138ನೇ ಸಂಸ್ಥಾಪನಾ ದಿನಾಚರಣೆ

ಕಾಂಗ್ರೆಸ್ ಮತ್ತೆ ಪುಟಿದೇಳಲಿದೆ: ಸಚಿವ ಡಾ.ಹೆಚ್.ಸಿ.ಮಹದೇವಪ್ಪ ವಿಶ್ವಾಸ



ಮೈಸೂರಿನಲ್ಲಿ ಗುರುವಾರ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಆಯೋಜಿಸಿದ್ದ ಕಾಂಗ್ರೆಸ್ ಪಕ್ಷದ 138ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟಿಸಿದರು. ಎಂಎಲ್‌ಸಿ ಡಾ.ಡಿ.ತಿಮ್ಮಯ್ಯ, ಮಾಜಿ ಸಂಸದ ಕಾಗಲವಾಡಿ ಶಿವಣ್ಣ, ಡಾ.ಬಿ.ಜೆ.ವಿಜಯಕುಮಾರ್, ಆರೀಫ್ ಹುಸೇನ್, ಪುಷ್ಪಲತಾ ಚಿಕ್ಕಣ್ಣ ಇನ್ನಿತರರಿದ್ದಾರೆ.

ಮೈಸೂರು,ಡಿ.28(ಬಿಎಲ್‌ಯು)– ಮೈಸೂರಿನಲ್ಲಿ ಇಂದು ಕಾಂಗ್ರೆಸ್ ಪಕ್ಷದ 138ನೇ ಸಂಸ್ಥಾಪನಾ ದಿನ ಆಚರಿಸಲಾಯಿತು. ಈ ವೇಳೆ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಕೆಲವು ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಸೋಲಾಗಿ ಜಾರುಗತಿಯಲ್ಲಿ ಸಾಗಿದರೂ ಮುಂದಿನ ದಿನಗಳಲ್ಲಿ ಮತ್ತೆ ಪುಟಿದೇಳಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕಾಂಗ್ರೆಸ್ ಪಕ್ಷದ ಸಂಸ್ಥಾಪನಾ ದಿನಾಚರಣೆ ಹಿನ್ನೆಲೆಯಲ್ಲಿ ಮೈಸೂರಿನಲ್ಲಿ ಇಂದು ಸಂಸ್ಥಾಪನಾ ರ‍್ಯಾಲಿ ಆಯೋಜಿಸಲಾಗಿತ್ತು. ನಗರದ ರಾಮಸ್ವಾಮಿ ವೃತ್ತದಲ್ಲಿರುವ ಸ್ವಾತಂತ್ರ್ಯ ಹೋರಾಟಗಾರ ರಾಮಸ್ವಾಮಿ ಸ್ಮಾರಕಕ್ಕೆ ಮಾಲಾರ್ಪಣೆ ಮಾಡಿ ಆರಂಭವಾದ ಸಂಸ್ಥಾಪನಾ ರ‍್ಯಾಲಿ ಜೆಎಲ್‌ಬಿ ರಸ್ತೆ ಮುಖೇನ ದಾಸಪ್ಪ ವೃತ್ತದ ಬಳಿಯ ಇಂದಿರಾ ಗಾಂಧಿ ಕಾಂಗ್ರೆಸ್ ಭವನ ತಲುಪಿತು. ಸೇವಾದಳದವರು ಸೇರಿದಂತೆ ನೂರಾರು ಕಾಂಗ್ರೆಸ್ ಕಾರ್ಯಕರ್ತರು ರ‍್ಯಾಲಿಯಲ್ಲಿ ಭಾಗಿಯಾಗಿದ್ದರು.

ಕಾಂಗ್ರೆಸ್ ಕಚೇರಿ ಮುಂಭಾಗ ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ ಧ್ವಜಾರೋಹಣ ನೆರವೇರಿಸಿದರು. ಈ ವೇಳೆ ರಾಷ್ಟ್ರಗೀತೆ ಹಾಡಿ, ಸಂವಿಧಾನದ ಪೀಠಿಕೆ ಓದಲಾಯಿತು. ತರುವಾಯ ಕಾಂಗ್ರೆಸ್ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾಗಿಯಾಗಿ ಮಾತನಾಡಿದ ಡಾ.ಮಹದೇವಪ್ಪ, ದೇಶಕ್ಕೆ ಸ್ವಾತಂತ್ರ್ಯ ತಂದು ಕೊಡುವಲ್ಲಿ ಕಾಂಗ್ರೆಸ್ ಪಕ್ಷದ ಕೊಡುಗೆ ಅಪಾರ. ಸ್ವಾತಂತ್ರ್ಯ ಚಳುವಳಿಯಲ್ಲಿ ಅಹಿಂಸಾ ಹೋರಾಟದ ಮೂಲಕ ದೇಶದ ಜನರಲ್ಲಿ ಜಾಗೃತಿ ಮೂಡಿಸಿದ ಕಾಂಗ್ರೆಸ್, ಸ್ವಾತಂತ್ರ್ಯದ ಮಹತ್ವವನ್ನು ಜನರಿಗೆ ಮನವರಿಕೆ ಮಾಡಿಕೊಟ್ಟಿತು ಎಂದು ಹೇಳಿದರು.

ಕಾಂಗ್ರೆಸ್ ದೇಶ ಕಟ್ಟುವ ಕೆಲಸ ಮಾಡುತ್ತಿದ್ದರೆ, ಕೋಮುವಾದಿಗಳು ದೇಶ ವಿಭಜಿಸುವ ಕೃತ್ಯದಲ್ಲಿ ತೊಡಗಿದ್ದಾರೆ. ಇದರ ನಡುವೆ ಪ್ರಾದೇಶಿಕ ಪಕ್ಷಗಳ ಪ್ರಾಬಲ್ಯ ಸೇರಿದಂತೆ ಕೆಲವು ಸಂಗತಿಗಳಿಂದ ಕಾಂಗ್ರೆಸ್‌ಗೆ ಕೆಲವೊಂದು ಚುನಾವಣೆಯಲ್ಲಿ ಸೋಲಾಗಿರಬಹುದು. ಇದರಿಂದ ಕಾಂಗ್ರೆಸ್ ಜಾರುಗತಿಯಲ್ಲಿ ಸಾಗುತ್ತಿದೆ ಎಂದರೂ ಮುಂದಿನ ಚುನಾವಣೆಯಲ್ಲಿ ಭರ್ಜರಿ ಗೆಲುವು ಸಾಧಿಸುವ ಮೂಲಕ ಪುಟಿದೇಳಲಿದೆ ಎಂದು ಆಶಯ ವ್ಯಕ್ತಪಡಿಸಿದರು.

ಪ್ರಜಾಪ್ರಭುತ್ವದಲ್ಲಿ ಮತದಾರನೇ ಪ್ರಭು. ಮತದಾರನಿಗೆ ಗೆಲ್ಲಿಸುವುದು ಗೊತ್ತಿದೆ. ಹಾಗೆಯೇ ಸೋಲಿಸುವುದು ಗೊತ್ತಿದೆ. ಈಗ ಮತದಾರ ಎಚ್ಚೆತ್ತಿದ್ದಾನೆ. ಇದರಿಂದ ದೇಶದಲ್ಲಿ ನಡೆಯುತ್ತಿರುವ ಕೋಮುವಾದಿಗಳ ಸರ್ವಾಧಿಕಾರ ಸರ್ಕಾರ ಕೊನೆಗೊಳ್ಳಲಿದೆ ಎಂದು ಬಿಜೆಪಿ ವಿರುದ್ಧ ಪರೋಕ್ಷ ವಾಗ್ದಾಳಿ ನಡೆಸಿದರು. ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ, ಮಾಜಿ ಸಂಸದ ಕಾಗಲವಾಡಿ ಶಿವಣ್ಣ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಮಾಜಿ ಮೇಯರ್ ಆರೀಫ್ ಹುಸೇನ್, ಪುಷ್ಪಲತಾ ಚಿಕ್ಕಣ್ಣ, ಮುಖಂಡರಾದ ಜೆ.ಜೆ.ಆನಂದ್, ಶಿವಮಲ್ಲು ಇತರರು ಕಾರ್ಯಕ್ರಮದಲ್ಲಿದ್ದರು.

ಮೈಸೂರಲ್ಲಿ ಐಐಟಿ ಸ್ಥಾಪನೆಯಾದರೆ ಸಂತೋಷ: ಸಚಿವ ಡಾ.ಮಹದೇವಪ್ಪ

ಮೈಸೂರು,ಡಿ.28(ಬಿಎಲ್‌ಯು)– ಈಗಾಗಲೇ ಮೈಸೂರಿನಲ್ಲಿ ಐಐಟಿ ಸ್ಥಾಪನೆ ಆಗಬೇಕಿತ್ತು. ಆದರೆ ಈತನಕ ಅದು ಸಾಧ್ಯವಾಗಿಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದ್ದಾರೆ.

ಮೈಸೂರಿನಲ್ಲಿ ಐಐಟಿ ಸ್ಥಾಪನೆ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪ್ರಸ್ತಾವನೆ ಸಲ್ಲಿಸಿರುವ ಬಗ್ಗೆ 'ಮೈಸೂರು ಮಿತ್ರ'ನ ಗುರುವಾರದ ಸಂಚಿಕೆಯ ವರದಿ ಬಗ್ಗೆ ಸಚಿವ ಡಾ.ಮಹದೇವಪ್ಪ ಪ್ರತಿಕ್ರಿಯೆ ನೀಡಿದರು.

ಮೈಸೂರಿನಲ್ಲಿ ಐಐಟಿ ಸ್ಥಾಪನೆ ಮಾಡುವಂತೆ ಹಲವು ವರ್ಷಗಳ ಬೇಡಿಕೆ ಇದೆ. ಕೇಂದ್ರ ಸರ್ಕಾರ ಕರ್ನಾಟಕಕ್ಕೆ ಮತ್ತೊಂದು ಐಐಟಿ ನೀಡುವಾಗ 2016ರಲ್ಲಿ ಅದು ಧಾರವಾಡದ ಪಾಲಾಯಿತು ಎಂದರು. ಆದರೆ ಈಗ ಸಿದ್ದರಾಮಯ್ಯ ಮೈಸೂರಿಗೆ ಐಐಟಿ ಬೇಡಿಕೆ ಬಗ್ಗೆ ಪ್ರಸ್ತಾವನೆ ಸಲ್ಲಿಸಿದ್ದಾರೆ. ಮೈಸೂರಿನಲ್ಲಿ ಐಐಟಿ ಸ್ಥಾಪನೆಯಾದರೆ ಸಂತೋಷ ಎಂದು ಹೇಳಿದರು.

ಹನುಮ ಜಯಂತಿ: ಮದ್ಯದ ಅಂಗಡಿ ಮುಚ್ಚಲು ಆದೇಶ

ಮೈಸೂರು,ಡಿ.28–ಮೈಸೂರು ತಾಲೂಕಿನ ರಮ್ಮನಹಳ್ಳಿಯಲ್ಲಿ ಡಿ.29 ರಂದು ಹನುಮ ಜಯಂತಿ ಕಾರ್ಯಕ್ರಮ ನಡೆಯಲಿರುವ ಹಿನ್ನೆಲೆಯಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ಮುನ್ನೆಚ್ಚರಿಕೆ ಕ್ರಮವಾಗಿ ಕರ್ನಾಟಕ ಅಬಕಾರಿ ಅಧಿನಿಯಮ 1965 ಕಲಂ 21ರಡಿಯಲ್ಲಿ ಡಿ.28ರ ಸಂಜೆ 5 ಗಂಟೆಯಿಂದ ಡಿ.29ರ ಮಧ್ಯರಾತ್ರಿ 12ರವರೆಗೆ ಮೈಸೂರು ತಾಲೂಕಿನ ರಮ್ಮನಹಳ್ಳಿ ಗ್ರಾಮದಲ್ಲಿರುವ ಎಲ್ಲಾ ಮದ್ಯದ ಅಂಗಡಿಯನ್ನು ಮುಚ್ಚುವಂತೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಆದೇಶಿಸಿದ್ದಾರೆ.

ಯುಪಿಎ ಸರ್ಕಾರವೇ ಎಕ್ಸ್‌ಪ್ರೆಸ್ ವೇ ಯೋಜನೆ ರೂಪಿಸಿತ್ತು; ಇದನ್ನು ಮರೆಮಾಚಿ ಈಗ ಪ್ರತಾಪ್ ಸಿಂಹ ಬುರುಡೆ ಬಿಡುತ್ತಾರೆ

ಸಚಿವ ಡಾ.ಮಹದೇವಪ್ಪ ವಾಗ್ದಾಳಿ

ಮೈಸೂರು, ಡಿ.28(ಬಿಎಲ್‌ಯು)– ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಯುಪಿಎ ಸರ್ಕಾರ ಮೈಸೂರು ಬೆಂಗಳೂರು ಎಕ್ಸ್‌ಪ್ರೆಸ್ ವೇ ಯೋಜನೆಯನ್ನು ರೂಪಿಸಿತ್ತು. ಆದರೆ ಇದನ್ನು ಮರೆಮಾಚುತ್ತಿರುವ ಸಂಸದ ಪ್ರತಾಪ್ ಸಿಂಹ ಈಗ ಬುರುಡೆ ಬಿಡುತ್ತಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಟೀಕಿಸಿದರು.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಮಾಡಿಸಲು ಪ್ರತಾಪ್ ಸಿಂಹನೇನು ಮೇಸ್ತ್ರೀನೇನ್ರಿ ಎಂದು ಖಾರವಾಗಿ ಪ್ರಶ್ನಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ 40 ವರ್ಷದ ರಾಜಕೀಯ ಜೀವನದಲ್ಲಿ ಏಳ್ಗೆಷ್ಟು ಅಭಿವೃದ್ಧಿ ಮಾಡಿಲ್ಲ ಎಂಬ ಪ್ರತಾಪ್ ಸಿಂಹ ಹೇಳಿಕೆಗೆ ತಿರುಗೇಟು ನೀಡಿದ ಡಾ.ಮಹದೇವಪ್ಪ, ಮುಖ್ಯಮಂತ್ರಿ ಸ್ಥಾನದಲ್ಲಿರುವ ಸಿದ್ದರಾಮಯ್ಯ ಹಾಗೂ ಪ್ರತಾಪ್ ಸಿಂಹ ಸಮಾನ ನಾಯಕರೆಂದು ಪರಿಗಣಿಸಲು ಸಾಧ್ಯವೇ? ಎಂದು ಪ್ರಶ್ನಿಸಿದರು. ಯುಪಿಎ ಸರ್ಕಾರದ ಅವಧಿಯಲ್ಲೇ ಎಕ್ಸ್‌ಪ್ರೆಸ್ ವೇ ಯೋಜನೆ ಘೋಷಣೆಯಾಗಿತ್ತು. ಆಗ ಪ್ರತಾಪ್ ಸಿಂಹ ಲೋಕಸಭಾ ಸದಸ್ಯರಾಗಿರಲಿಲ್ಲ. ತರುವಾಯ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಸರ್ಕಾರ ನಾವು ಘೋಷಣೆ ಮಾಡಿದ ಕೆಲಸ ಮಾಡಿದೆ. ಇದು ಆ ಸರ್ಕಾರದ ಜವಾಬ್ದಾರಿ ಆದ ಕಾರಣ ಇದರಲ್ಲಿ ಉತ್ಪ್ರೇಕ್ಷೆ ಏನಿದೆ ಎಂದು ಕೇಳಿದರು.

ಎಕ್ಸ್‌ಪ್ರೆಸ್ ವೇ ನಾನೇ ಮಾಡಿಸಿದ್ದೇನೆ ಎಂದು ಪ್ರತಾಪ್ ಸಿಂಹ ಹೇಳುತ್ತಾರೆ. ಹಾಗಾದರೆ ಎಕ್ಸ್‌ಪ್ರೆಸ್ ವೇ ಮಾಡಿಸಲು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ಪ್ರತಾಪ್ ಸಿಂಹಗೆ ಇನ್‌ಚಾರ್ಜ್ ಕೊಟ್ಟಿದ್ರಾ ಅಥವಾ ಡಿಪಿಆರ್ ಮಾಡಿಕೊಡು ಅಂತ ಕೇಳಿದ್ರಾ ಎಂದು ಪ್ರಶ್ನಿಸಿದರು.

ಒಂದು ಯೋಜನೆ ತಯಾರಾಗಲು ರಾಜ್ಯ ಸರ್ಕಾರಗಳು ಪ್ರಸ್ತಾವನೆ ಸಲ್ಲಿಸಿ ಹಲವು ಹಂತಗಳ ನಂತರ ಎಕ್ಸ್‌ಪ್ರೆಸ್ ವೇ ಆಗುತ್ತದೆ. ಆದರೆ ಆಗ ಪ್ರತಾಪ್ ಸಿಂಹ ಸಂಸದರೇ ಆಗಿರಲಿಲ್ಲ. ಹೀಗಿರುವಾಗ ಅವರ ಶ್ರಮ ಏನಿದೆ ಎಂದು ಕೇಳಿದ ಡಾ.ಮಹದೇವಪ್ಪ ನಿಜವಾಗಿಯೂ ಇವರೇ ಕೆಲಸ ಮಾಡಿದ್ದರೆ ಅಭಿನಂದಿಸುತ್ತಿದ್ದೆ. ಆದರೆ ಏನೂ ಮಾಡದೆ ಸುಮ್ಮನೆ ಬುರುಡೆ ಬಿಡುತ್ತಾರೆ ಎಂದು ಟೀಕೆ ಮಾಡಿದರು.

ಎಕ್ಸ್‌ಪ್ರೆಸ್ ವೇನಲ್ಲಿ ಮಳೆ ನೀರು ತುಂಬಿದಾಗ ನಾನು ಹೋಗಿದ್ದೆ ಎಂದು ಹೇಳುತ್ತಾರೆ. ಹಾಗೆಂದು ನೀರಿನಲ್ಲಿ ಬಿದ್ದು, ನಾನೇ ಜನರನ್ನು ರಕ್ಷಣೆ ಮಾಡಿದ್ದೇನೆ ಎಂದು ಹೇಳಿದರೆ ಹೇಗೆ? ಇಂತಹವರ ಹೇಳಿಕೆಗೆ ನೀವು ಕೂಡ ಹೆಚ್ಚಿನ ಮಹತ್ವ ನೀಡಬೇಡಿ ಎಂದು ಪತ್ರಕರ್ತರಿಗೆ ಸಲಹೆ ನೀಡಿದರು.

ಮಲ್ಲಿಕಾರ್ಜುನ ಖರ್ಗೆ ಸ್ಪರ್ಧಿಸಿದ್ರೆ ಸಂತೋಷ

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಚಾಮರಾಜನಗರದಲ್ಲಿ ಸ್ಪರ್ಧೆ ಮಾಡಿದರೆ ತುಂಬಾ ಸಂತೋಷ. ರಾಷ್ಟ್ರ ನಾಯಕರು ಬಯಸಿದರೆ ಎಲ್ಲಿ ಬೇಕಾದರೂ ಸ್ಪರ್ಧೆ ಮಾಡಬಹುದು. ಒಂದು ವೇಳೆ ಸ್ಪರ್ಧೆ ಮಾಡಿದರೆ ಮಲ್ಲಿಕಾರ್ಜುನ ಖರ್ಗೆ ಲಕ್ಷ ಮತಗಳ ಅಂತರದಿಂದ ಗೆಲ್ಲುತ್ತಾರೆ. ಆದರೆ ಈ ವಿಚಾರ ಪಕ್ಷದ ವೇದಿಕೆಯಲ್ಲಿ ಚರ್ಚೆ ಆಗಿಲ್ಲ. ಇಂತಹ ಸುದ್ದಿಗಳು ಅಂತೆ, ಕಂತೆ ಎಂದು ಡಾ.ಮಹದೇವಪ್ಪ ಸ್ಪಷ್ಟಪಡಿಸಿದರು.

ಬೆಂಗಳೂರಿನಲ್ಲಿ ಇಂಗ್ಲಿಷ್ ನಾಮಫಲಕ ತೆರವು ಮಾಡುವ ಕರ್ನಾಟಕ ರಕ್ಷಣಾ ವೇದಿಕೆ ಹೋರಾಟದ ಬಗ್ಗೆ ಪ್ರತಿಕ್ರಿಯೆ ನೀಡಿದ ಅವರು, ರಾಜ್ಯ ಸರ್ಕಾರವೇ ಕನ್ನಡ ಅನುಷ್ಠಾನಕ್ಕೆ ಮುಂದಾಗಿದೆ. ಆದರೂ ಹೋರಾಟ ಮಾಡುವುದಿದ್ದರೆ ಶಾಂತಿಯುತವಾಗಿ ಪ್ರತಿಭಟನೆ ಮಾಡಲಿ. ಆದರೆ ಕಾನೂನು ಕೈಗೆತ್ತಿಕೊಳ್ಳಬಾರದು ಎಂದು ಸಲಹೆ ನೀಡಿದರು.

ರಾಜ್ಯ ಸರ್ಕಾರದಿಂದ ಕೊರೊನಾ ನಿಯಂತ್ರಣಕ್ಕೆ ಅಗತ್ಯ ಕ್ರಮ

“ ಕೊರೊನಾ ವ್ಯಾಪಕವಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಅಗತ್ಯ ಕ್ರಮ ಕೈಗೊಂಡಿದೆ. ಈಗಾಗಲೇ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ತಾಂತ್ರಿಕ ಸಲಹಾ ಸಮಿತಿಯ ಮಹತ್ವದ ಸಭೆ ನಡೆದಿದೆ. ಜೊತೆಗೆ ಆರೋಗ್ಯಾಧಿಕಾರಿಗಳ ಸಭೆ ಕೂಡ ನಡೆಸಿದ್ದಾರೆ. ಕೊರೊನಾ ತಡೆಗಟ್ಟುವ ನಿಟ್ಟಿನಲ್ಲಿ ಮಾರ್ಗಸೂಚಿಯನ್ನೂ ಜಾರಿ ಮಾಡಿ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಕೊರೊನಾ ನಿಯಂತ್ರಣಕ್ಕಾಗಿ ಕ್ರಮ ಕೈಗೊಳ್ಳಲು ಸಚಿವ ಸಂಪುಟದ ಉಪ ಸಮಿತಿ ರಚನೆ ಮಾಡಲಾಗಿದೆ. ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ್ ಪಾಟೀಲ್, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಸೇರಿದಂತೆ ನಾನು ಸಮಿತಿಯಲ್ಲಿದ್ದೇನೆ. ಉಪ ಸಮಿತಿಗೆ ಅಗತ್ಯ ಮಾಹಿತಿ ನೀಡುವಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಸೂಚನೆ ನೀಡಲಾಗಿದೆ. ಈ ಹಿನ್ನೆಲೆ ಇಲಾಖೆಯಿಂದ ಬರುವ ಮಾಹಿತಿ ಮೇರೆಗೆ ಕೊರೊನಾ ನಿಯಂತ್ರಣಕ್ಕೆ ಸರ್ಕಾರ ಅಗತ್ಯ ಕ್ರಮ ಕೈಗೊಳ್ಳಲಿದೆ. –ಡಾ.ಮಹದೇವಪ್ಪ, ಸಮಾಜ ಕಲ್ಯಾಣ ಸಚಿವ.

ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್‌ನಲ್ಲಿ ಆಭರಣ ಪ್ರದರ್ಶನ



ಮೈಸೂರು, ಡಿ.28 (ಬಿಎಲ್‌ಯು)– ಮೈಸೂರಿನ ಜೆ.ಸಿ. ಕ್ಯಾಂಪಸ್‌ನಲ್ಲಿರುವ ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್‌ನಲ್ಲಿ ವಿಶೇಷಚೇತನರು ತಯಾರಿಸಿರುವ ಆಭರಣಗಳ ಪ್ರದರ್ಶನ ಗುರುವಾರ ನಡೆಯಿತು.

ಜೆಎಸ್‌ಎಸ್ ಮಹಾ ವಿದ್ಯಾಪೀಠದ ಸಾಮಾನ್ಯ ಆಡಳಿತ ವಿಭಾಗದ ನಿರ್ದೇಶಕ ಶಂಕರಪ್ಪ ಆಭರಣ ಪ್ರದರ್ಶನ ಉದ್ಘಾಟಿಸಿದರು. ಈ ವೇಳೆ ಮಾತನಾಡಿದ ಶಂಕರಪ್ಪ, ವಿಶೇಷಚೇತನರಿಗೆ ದೇವರು ಅಪಾರ ಕೌಶಲ್ಯ ಕೊಟ್ಟಿದ್ದಾನೆ. ಇದರಿಂದ ವಿಶೇಷಚೇತನರೆಂದರೆ ವಿಶಿಷ್ಟ ಬುದ್ಧಿವಂತಿಕೆ ಇರುವವರು ಎಂದರ್ಥ ಎಂದರು. ಇದರಿಂದ ವಿಶೇಷಚೇತನರು ಕೀಳರಿಮೆ ಹೊಂದಬಾರದು, ಅಂಜಿಕೆ ಪಡಬಾರದು, ಬೇಜಾರು ಮಾಡಿಕೊಳ್ಳಬಾರದು ಎಂದು ಸಲಹೆ ನೀಡಿದರು. ವಿಶೇಷಚೇತನರು ತಯಾರಿಸುವ ಕೆಲವು ವಿಶಿಷ್ಟ ಆಭರಣವನ್ನು ಜನರು ದೇವರಿಗೆ ಧರಿಸುತ್ತಾರೆ. ಇದರಿಂದ ನಿಮ್ಮ ಶ್ರಮ ದೇವರಿಗೂ ತಲುಪುತ್ತದೆ ಎಂದರು.

ಹತ್ತಾರು ವಿಶೇಷಚೇತನರು ಕ್ರಿಯಾತ್ಮಕವಾದ ವಿಶಿಷ್ಟ ಆಭರಣ ತಯಾರಿಸಿ ಪ್ರದರ್ಶನಕ್ಕಿಟ್ಟಿದ್ದರು. ಇದರ ಮೌಲ್ಯಮಾಪನ ಮಾಡುವ ಪರಿಣತರು ಹಲವು ಶ್ರೇಣಿ ನೀಡುವರು. ಹೀಗೆ ಬಹುಮಾನ ಪಡೆಯುವ ವಿಶೇಷಚೇತನರಿಗೆ ಉದ್ಯೋಗದಲ್ಲಿ ಮೊದಲ ಆದ್ಯತೆ ದೊರೆಯಲಿದೆ ಎಂದು ಪಾಲಿಟೆಕ್ನಿಕ್‌ನ ಜ್ಯೂವೆಲರಿ ಡಿಸೈನ್ ಮತ್ತು ಟೆಕ್ನಾಲಜಿ ಮುಖ್ಯಸ್ಥ ಶಿವಕುಮಾರಸ್ವಾಮಿ ತಿಳಿಸಿದರು.

ಪಾಲಿಟೆಕ್ನಿಕ್ ಪ್ರಿನ್ಸಿಪಾಲ್ ಬಿ.ಇಳಂಗೋವನ್, ಪತ್ರಕರ್ತ ಕೆ.ಪಿ.ನಾಗರಾಜ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮರ ಉರುಳಿ ಬಿದ್ದು ವಿದ್ಯುತ್ ಕಂಬಗಳು, ವಾಹನ ಜಖಂ

ಮೈಸೂರು, ಡಿ.28(ಆರ್‌ಕೆ)–ಭಾರಿ ಮರವೊಂದು ಬೇರು ಸಹಿತ ಉರುಳಿ ಬಿದ್ದ ಪರಿಣಾಮ ರಸ್ತೆ ಬದಿಯಲ್ಲಿ ನಿಲ್ಲಿಸಿದ್ದ ದ್ವಿಚಕ್ರ ವಾಹನಗಳು ಹಾಗೂ ಬೀದಿದೀಪದ ಕಂಬಗಳು ಜಖಂಗೊಂಡಿರುವ ಘಟನೆ ಮೈಸೂರಿನ ಟಿ.ಕೆ.ಬಡಾವಣೆ ಮತ್ತು ಜಯನಗರ ನಡುವೆ ಸಂಭವಿಸಿದೆ.

ಇಂದು ಪೂರ್ವಾಹ್ನ 11.45 ಗಂಟೆ ವೇಳೆಗೆ ಮರ ಉರುಳಿ ಬಿದ್ದಿದ್ದು, ಸುಮಾರು ಒಂದು ತಾಸು ಈ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ತೊಂದರೆಯಾಯಿತಾದರೂ, ಆ ವೇಳೆ ಮಾರ್ಗದಲ್ಲಿ ವಿದ್ಯುತ್ ಕಡಿತಗೊಂಡಿದ್ದರಿಂದ ಅದೃಷ್ಟವಶಾತ್ ಯಾವುದೇ ಅಪಾಯ ಸಂಭವಿಸಲಿಲ್ಲ.

ಈ ಹಿಂದೆಯೇ ಅಲ್ಲಿನ ಉಷಾ ಹೋಂ ಅಪ್ಲೈಯನ್ಸಸ್ ಅಂಗಡಿ ಮಾಲೀಕರು, ಮರದ ಕಾಂಡ ಟೊಳ್ಳಾಗಿದ್ದು, ಯಾವುದೇ ಸಂದರ್ಭದಲ್ಲಾದರೂ ಅದು ಬೀಳಬಹುದಾಗಿದ್ದು, ಅಪಾಯ ಸಂಭವಿಸುವ ಮೊದಲೇ ಮರ ಕಡಿದು ತೆರವುಗೊಳಿಸುವಂತೆ ಪಾಲಿಕೆ ಅಧಿಕಾರಿಗಳಿಗೆ ತಿಳಿಸಿದ್ದರಾದರೂ, ಅಲ್ಲಿಗೆ ಬಂದಿದ್ದ ಇಂಜಿನಿಯರ್ ಮಹಾಶಯರೊಬ್ಬರು, ಅದು ಇನ್ನೂ 20 ವರ್ಷ ಬೀಳುವುದಿಲ್ಲ ಎಂದು ಹೇಳಿ ಹೋಗಿದ್ದರು ಎನ್ನಲಾಗಿದೆ. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ಮೈಸೂರು ಮಹಾನಗರ ಪಾಲಿಕೆ ಅಧಿಕಾರಿಗಳು, ಅಭಯ ತಂಡ ಹಾಗೂ ಚೆಸ್ಕಾಂ ಸಿಬ್ಬಂದಿ ಉರುಳಿ ಬಿದ್ದ ಮರವನ್ನು ತೆರವುಗೊಳಿಸಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

ಸೆಸ್ಕ್ ಅಧಿಕಾರಿಗಳು ಜಖಂಗೊಂಡ ವಿದ್ಯುತ್ ಕಂಬ ತೆರವುಗೊಳಿಸಿ ಹೊಸ ಕಂಬ ನೆಟ್ಟು ಆ ಮಾರ್ಗದಲ್ಲಿ ವಿದ್ಯುತ್ ಸಂಪರ್ಕ ನೀಡುವ ಕಾರ್ಯದಲ್ಲಿ ನಿರತರಾಗಿದ್ದಾರೆ. ಸರಸ್ವತಿಪುರಂ ಠಾಣೆ ಇನ್ಸ್‌ಪೆಕ್ಟರ್ ಸಿ.ಎಂ.ರವೀಂದ್ರ ಹಾಗೂ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ನಗರಪಾಲಿಕೆ ಸಿಬ್ಬಂದಿಯ ಕಾರ್ಯಾಚರಣೆಗೆ ನೆರವಾದರು.







ಮೈಸೂರಿನ ಆದಿಚುಂಚನಗಿರಿ ಮಹಿಳಾ ಒಕ್ಕಲಿಗ ಸಮಾಜದ ವಾರ್ಷಿಕೋತ್ಸವವನ್ನು ಖಾಸಗಿ ಹೋಟೆಲ್‌ನಲ್ಲಿ ಆಚರಿಸಲಾಯಿತು. ಈ ವೇಳೆ ಸಂಘದ ಅಧ್ಯಕ್ಷೆ ಸವಿತಾಗೌಡ, ಪದಾಧಿಕಾರಿಗಳಾದ ಲತಾ ರಮೇಶ್, ರಾಣಿ ಮಹೇಶ್, ರಾಜೇಶ್ವರಿ, ವಿಜಯ, ಸಂಘದ ಸದಸ್ಯರು ಉಪಸ್ಥಿತರಿದ್ದರು.

ಇಂದು ಕುವೆಂಪು ಜಯಂತಿ

ಮೈಸೂರು: ಪಡುವಾರಹಳ್ಳಿ ಸ್ನೇಹ ಬಳಗದಿಂದ ರಾಷ್ಟ್ರಕವಿ ಕುವೆಂಪು ಜಯಂತಿಯನ್ನು ಡಿ.29ರ ಬೆಳಗ್ಗೆ 11ಕ್ಕೆ ಶ್ರೀ ಮಹರ್ಷಿ ವಾಲ್ಮೀಕಿ ರಸ್ತೆಯ ನಾಮಫಲಕದ ಬಳಿ ಏರ್ಪಡಿಸಿದ್ದು, ಮುಡಾ ಮಾಜಿ ಅಧ್ಯಕ್ಷ ಸಿ.ಬಸವೇಗೌಡರು ಪುಷ್ಪನಮನ ಸಲ್ಲಿಸಲಿದ್ದಾರೆ. ಪಡುವಾರಹಳ್ಳಿ ಎಂ.ರಾಮಕೃಷ್ಣ, ಸಿ.ಡಿ.ಕುಮಾರ್, ಕಿಟ್ಟಿ, ಸುರೇಂದ್ರ, ಕುಮಾರ್, ಸಂತೋಷ್ ಉಪಸ್ಥಿತರಿರಲಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...

■ **ಮೈಸೂರು ಅರಮನೆ ಮಂಡಳಿ :** ಅರಮನೆ ಫಲಪುಷ್ಪ ಪ್ರದರ್ಶನ, ಬೆಳಗ್ಗೆ 10ರಿಂದ ರಾತ್ರಿ 9 ರವರೆಗೆ.

■ **ಮೈಸೂರು ಮಹಾನಗರಪಾಲಿಕೆ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು:** ರಾಷ್ಟ್ರಕವಿ ಕುವೆಂಪುರವರ ಜನ್ಮ ದಿನೋತ್ಸವ, ಕುವೆಂಪು ಪುತ್ಥಳಿಗೆ ಮಾಲಾರ್ಪಣೆ: ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಅಧ್ಯಕ್ಷತೆ: ಶಾಸಕ ಟಿ.ಎಸ್.ಶ್ರೀವತ್ಸ, ಮುಖ್ಯ ಭಾಷಣ: ಹಿರಿಯ ವಿದ್ವಾಂಸರಾದ ಪ್ರೊ.ಚ.ಸರ್ವಮಂಗಳ, ಪ್ರಶಸ್ತಿ ಪ್ರದಾನ: ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ ಉಪನಿರ್ದೇಶಕ ಹೆಚ್.ಕೆ.ಪಾಂಡು, ಪ್ರತಿಭಾ ಪುರಸ್ಕಾರ : ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್, ಮುಖ್ಯ ಅತಿಥಿಗಳು : ಪಾಲಿಕೆ ಮಾಜಿ ಸದಸ್ಯ ಬಿ.ವಿ. ಮಂಜುನಾಥ್, ಪ್ರಾಸ್ತಾವಿಕ ನುಡಿ : ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸ್ಥಳ: ವಿಶ್ವಮಾನವ ಉದ್ಯಾನವನ, ಗನ್‌ಹೌಸ್ ಎದುರು, ಬೆಳಗ್ಗೆ 9.15ಕ್ಕೆ.


■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಕುವೆಂಪು ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ :** ಕುವೆಂಪು ಅವರ 120ನೇ ಜನ್ಮ ದಿನಾಚರಣೆ ಪ್ರಯುಕ್ತ ರಾಜ್ಯ ಮಟ್ಟದ ಕುವೆಂಪು ಕವನಗಳ ಭಾವಗೀತೆಗಳ ಸ್ಪರ್ಧೆ, ಉದ್ಘಾಟನೆ: ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ಕುಲಪತಿ ಪ್ರೊ. ನಾಗೇಶ್ ವಿ. ಬೆಟ್ಟಕೋಟೆ, ಅಧ್ಯಕ್ಷತೆ: ಸಂಗೀತ ವಿವಿ ಕುಲಪತಿ ಪ್ರೊ ಶರಣಪ್ಪ ವಿ. ಹಲಸೆ, ಉಪಸ್ಥಿತರು: ಕರಾಮುವಿವಿ ಕುಲಸಚಿವ ಪ್ರೊ ಕೆ.ಎಲ್.ಎನ್.ಮೂರ್ತಿ, ಪ್ರಾಸ್ತಾವಿಕ ನುಡಿ: ಕುವೆಂಪು ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ಸಂಯೋಜನಾಧಿಕಾರಿ ಡಾ.ಎನ್.ಆರ್. ಚಂದ್ರೇಗೌಡ, ಸ್ಥಳ: ಕಾವೇರಿ ಸಭಾಂಗಣ, ಕರಾಮುವಿವಿ, ಬೆಳಗ್ಗೆ 9.30ಕ್ಕೆ

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ :** ಧನುರ್ಮಾಸದ ವಿಶೇಷ ಪೂಜಾ ಲಕ್ಷಾರ್ಚನಾ ಮತ್ತು ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಹತೋಬಾರ, ಶ್ರೀ ಧರ್ಮಶಾಸ್ತಾ ಸ್ವಾಮಿಯವರಿಗೆ ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ರಾಘವೇಂದ್ರನಗರ, ಬೆಳಗ್ಗೆಯಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆಯವರೆಗೆ.

■ **ಮೈಸೂರು ವಿಶ್ವವಿದ್ಯಾನಿಲಯ, ಪ್ರಸಾರಾಂಗ :** ರಾಷ್ಟ್ರಕವಿ ಕುವೆಂಪು ಜನ್ಮ ದಿನೋತ್ಸವ ಕಾರ್ಯಕ್ರಮ, ಅಧ್ಯಕ್ಷತೆ: ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಮುಖ್ಯ ಅತಿಥಿಗಳು: ವಿದ್ವಾಂಸರಾದ ಪ್ರೊ.ಎನ್.ಎಸ್.ತಾರಾನಾಥ್, ಅಭಿನಂದನೆ: ವಿದ್ವಾಂಸ ಪ್ರೊ.ಸಿ. ನಾಗಣ್ಣ, ಪ್ರಾಸ್ತಾವಿಕ ನುಡಿ: ಪ್ರಸಾರಾಂಗ ನಿರ್ದೇಶಕ ಪ್ರೊ.ಎಂ.ನಂಜಯ್ಯ ಹೊಂಗನೂರು, ಸ್ಥಳ: ಪ್ರಸಾರಾಂಗ ಸಭಾಂಗಣ, ಬೆಳಗ್ಗೆ 10ಕ್ಕೆ.

■ **ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಶ್ರೀ ಕನಕದಾಸ ನೌಕರರ ಸಂಘ** : ಸಂತ ಶ್ರೇಷ್ಠ ಶ್ರೀ ಕನಕದಾಸರ 536ನೇ ಜಯಂತ್ಯುತ್ಸವ, ಸಾನ್ನಿಧ್ಯ: ಶ್ರೀ ಶಿವಾನಂದಪುರಿ ಸ್ವಾಮೀಜಿ, ಉದ್ಘಾಟನೆ: ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಅಧ್ಯಕ್ಷತೆ: ಶಾಸಕ ಕೆ.ಹರೀಶ್‌ಗೌಡ, ಮುಖ್ಯ ಅತಿಥಿಗಳು: ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಡಿ.ರವಿಶಂಕರ್, ಕೆ.ಮರೀಗೌಡ, ಬಿ.ಶ್ರೀನಿವಾಸ್, ಗೋಪಿ, ಎಂ.ಮಲ್ಲಯ್ಯ, ಹೆಚ್.ಎಂ.ನಾಗರಾಜಮೂರ್ತಿ, ಮಂಜುನಾಥ್, ಶ್ರೀನಿವಾಸ್, ಕೆಂಪಯ್ಯ, ಕೃಷ್ಣೇಗೌಡ, ಸ್ಥಳ: ಚಿಕ್ಕಮ್ಮಾನಿಕೇತನ ಕಲ್ಯಾಣ ಮಂಟಪ, ಕುವೆಂಪುನಗರ, ಬೆಳಗ್ಗೆ 10ಕ್ಕೆ.



ಇಂದಿನ ಪಂಚಾಂಗ

29.12.2023 ಶುಕ್ರವಾರ, ಮಳೆ ನಕ್ಷತ್ರ: ಪೂಷಾ 29.12.2023ರಿಂದ 15.01.2024 ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಕೃಷ್ಣ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ಪುಷ್ಯ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

■ **ಕನ್ನಡಾಂಬೆ ರಕ್ಷಣಾ ವೇದಿಕೆ, ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ:** ರಾಷ್ಟ್ರಕವಿ ಕುವೆಂಪು ಜಯಂತಿ ಮಹೋತ್ಸವ, ಸಾನ್ನಿಧ್ಯ: ಶ್ರೀ ಅರ್ಜುನ ಅವಧೂತರು, ಉದ್ಘಾಟನೆ: ಕವಿ ಡಾ.ಜಯಪ್ಪ ಹೊನ್ನಾಳಿ, ಅಧ್ಯಕ್ಷತೆ: ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಮುಖ್ಯ ಭಾಷಣ: ಸಾಹಿತಿ ಡಾ.ಕೆ.ಲೀಲಾಪ್ರಕಾಶ್, ಉಪಸ್ಥಿತರು: ವೇದಿಕೆ ರಾಜ್ಯಾಧ್ಯಕ್ಷ ಬಿ.ವಿ. ರಾಜಶೇಖರ್, ಸುಪೀತ್, ಶ್ವೇತಾ ಮಡಪ್ಪಾಡಿ, ಡಿ.ಪಿ.ಕೆ. ಪರಮೇಶ್, ಸ್ಥಳ: ನಮನ ಕಲಾ ಮಂಟಪ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10.30ಕ್ಕೆ.

■ **ವಿಶ್ವಮಾನವ ಮೈಸೂರು ವಿಶ್ವವಿದ್ಯಾನಿಲಯ ನೌಕರರ ವೇದಿಕೆ :** ಕುವೆಂಪು ಜಯಂತ್ಯುತ್ಸವ, ಮುಖ್ಯ ಅತಿಥಿಗಳು : ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ಡಾ.ಬಿ.ಎನ್.ನಂದಿನಿ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಜಿ.ಎಸ್.ಗಜೇಂದ್ರಪ್ರಸಾದ್, ಶಾಂತಮಲ್ಲಪ್ಪ, ಡಾ.ಕೆ.ಎಂ.ಮಹದೇವನ್, ಡಾ.ಬಿ.ಜೆ.ವಿಜಯಕುಮಾರ್, ಡಾ.ಇ.ಸಿ. ನಿಂಗರಾಜೇಗೌಡ, ಪ್ರೊ.ಎಸ್. ಮಹದೇವಮೂರ್ತಿ, ಪ್ರೊ.ಎಸ್.ಶಿವರಾಜಪ್ಪ, ಡಾ.ಹೆಚ್.ಪಿ.ಜ್ಯೋತಿ, ಉಮೇಶ್, ಸ್ಥಳ: ವಿವಿ ಸಂಜೆ ಕಾಲೇಜು, ಬೆಳಗ್ಗೆ 10.30ಕ್ಕೆ.

■ **ವ್ಯವಸ್ಥಾಪಕರು:** ರಂಗ ನಿರ್ದೇಶಕಿ ಎಂ.ಎಂ.ಸುಗುಣ ಅವರಿಗೆ ರಂಗರತ್ನ ಪ್ರಶಸ್ತಿ ಪ್ರದಾನ, ಉಪಸ್ಥಿತರು: ರಂಗಕರ್ಮಿ ಡಾ.ನ.ರತ್ನ, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ತರ್ನೀವ್, ಎನ್.ಎಸ್.ಆನಂದ್, ಸ್ಥಳ: ಜಿಲ್ಲಾ ಪತ್ರಕರ್ತರ ಸಂಘದ ಆವರಣ, ಮಧ್ಯಾಹ್ನ 12.30ಕ್ಕೆ.

■ **ಗಂಗೋತ್ರಿ ಪಬ್ಲಿಕ್ ಸ್ಕೂಲ್ ಮತ್ತು ಪಿಯು ಕಾಲೇಜು:** ಬೆಳ್ಳಿ ಮಹೋತ್ಸವ, ಮುಖ್ಯ ಅತಿಥಿಗಳು: ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಂ. ಮರಿಸ್ವಾಮಿ, ಅಧ್ಯಕ್ಷತೆ: ಗಂಗೋತ್ರಿ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಟಿ. ರಂಗಪ್ಪ, ಅತಿಥಿಗಳು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪನಿರ್ದೇಶಕ ಹೆಚ್.ಕೆ. ಪಾಂಡು, ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಎನ್. ರಾಜು, ಆಡಳಿತಾಧಿಕಾರಿ ಶ್ರೀಮತಿ ಕಾಂತಿನಾಯಕ್, ಪ್ರಾಂಶುಪಾಲ ಎಂ.ಎಸ್. ಸುನೀಲ್‌ಕುಮಾರ್, ಮುಖ್ಯೋಪಾಧ್ಯಾಯ ಮೊಹಮ್ಮದ್ ಫಾರೂಕ್, ಸ್ಥಳ: ಕರಾಮುವಿವಿ ಘಟಿಕೋತ್ಸವ ಭವನ, ಹುಣಸೂರು ರಸ್ತೆ, ಮಧ್ಯಾಹ್ನ 2 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಬಣ್ಣದ ಬಾನಾಡಿಗಳು– ಬಾನುಲಿ ಸರಣಿ, ರಚನೆ– ಲೀಲಾ ಅಪ್ಪಾಜಿ, ಪ್ರಸ್ತುತಿ– ಜಿ.ಶಾಂತಕುಮಾರ್,6.40 ಪದ ಸಂಸ್ಕೃತಿ, ಪ್ರಸ್ತುತಿ– ಡಾ.ಸಂಗಮೇಶ ಸವದತ್ತಿ ಮಠ್, 6.50 ರೈತರಿಗೆ ಸಲಹೆ, 8.30 ಆರೋಗ್ಯ ಧಾರೆ–ಪ್ರಾಯೋಜಿತ ಕಾರ್ಯಕ್ರಮ, 9.00 ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, 10.00 ಡಾ. ಶ್ರೀಪಾದ ಪಿನಾಕಪಾಣಿ–ಹಾಡುಗಾರಿಕೆ, 10.30 ಆರೋಗ್ಯ ಧಾರೆ–ಪ್ರಾಯೋಜಿತ ನೇರ ಫೋನ್ ಇನ್ ಕಾರ್ಯಕ್ರಮ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ, 12.45 ಕಾದಂಬರಿ ವಿಹಾರ–ನಾ ಕಸ್ತೂರಿ ಅವರ ರಂಗನಾಯಕಿ ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ– ಉಮೇಶ್, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆ–ಟಿ.ಎಸ್. ಸ್ನೇಹಾ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಚಿಟ್ಟಿ ಬಾಬು–ವೀಣಾವಾದನ, 4.00 ಮಹಿಳಾರಂಗ– ಸಖೀಸಂವಾದ–ಹೊಸ ವರ್ಷದ ನಿಮ್ಮ ಯೋಜನೆಗಳೇನು? ಪ್ರಸ್ತುತಿ– ಕೆ.ಬಿ.ಮೀನಾ, 4.30 ವೃತ್ತಿ ಮಾರ್ಗದರ್ಶನ, 6.50 ಕೃಷಿರಂಗ, 8.00 ಗ್ರಾಹಕ ಚಳುವಳಿ ಎಲ್ಲಿದೆ? ಚರ್ಚೆಯಲ್ಲಿ ಭಾಗವಹಿಸುವವರು ಡಾ. ಭಾಮಿ. ವಿ.ಶೆಣೈ, ಗೀತಾ ವೇಲುಮಣಿ, ಹರ್ಷಿತಾ, ಸ್ಮೃತಿ, ನಡೆಸಿಕೊಡುತ್ತಾರೆ ದಿವಾಕರ ಹೆಗಡೆ, 9.30 ಬಾಂಬೆ ಸಹೋದರಿಯರು–ಹಾಡುಗಾರಿಕೆ, 10.00ತತ್ವ ಸಂಚಾರ–ಜನಪದ ಗಾಯಕರ ತತ್ವ ಗಾಯನ, ಭಾಗವಹಿಸುವವರು ದುದ್ದ ಹೋಬಳಿ ಹೊಳಲು ಗ್ರಾಮದ ಹೆಚ್.ವಿ. ಶಿವಪ್ರಕಾಶ್ ಮತ್ತು ಸಂಗಡಿಗರು. ಪ್ರಸ್ತುತಿ–ಡಾ.ಮೈಸೂರು ಉಮೇಶ್

■ **ಮೈಸೂರು ವಿವಿ, ಮೈವಿವಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿದ್ಯಾರ್ಥಿಗಳ ಸಂಘ:** ಕಾಲೇಜು ಗ್ರಂಥಾಲಯಗಳಲ್ಲಿ ಕರ್ತವ್ಯ ನಿರ್ವಹಣೆ: ಅವಕಾಶಗಳು ಮತ್ತು ಸವಾಲುಗಳು ಕುರಿತು ಉಪನ್ಯಾಸ, ಉಪನ್ಯಾಸಕರು: ಪ್ರಾಂಶುಪಾಲರಾದ ಡಾ.ಎನ್.ವಸಂತರಾಜು, ಅಧ್ಯಕ್ಷತೆ: ಗ್ರಂಥಾಲಯ ಅಧ್ಯಯನ ವಿಭಾಗದ ಅಧ್ಯಕ್ಷ ಪ್ರೊ.ಎಂ.ಚಂದ್ರಶೇಖರ, ಸ್ಥಳ: ಡಾ. ಎಸ್.ಆರ್.ರಂಗನಾಥನ್ ಸಭಾಂಗಣ, ಮಾನಸಗಂಗೋತ್ರಿ, ಸಂಜೆ 4ಕ್ಕೆ

■ **ವನಿತಾ ಸದನ, ಶ್ರೀಮತಿ ಸುಶೀಲಾಬಾಯಿ ಶ್ರೀ ನಾಗೇಶರಾವ್ ಎಜುಕೇಷನಲ್ ಅಂಡ್ ಚಾರಿಟೆಬಲ್ ಟ್ರಸ್ಟ್:** ವಾರ್ಷಿಕೋತ್ಸವ, ಅಧ್ಯಕ್ಷತೆ: ವನಿತಾ ಸದನ ಅಧ್ಯಕ್ಷೆ ಎನ್.ಭಾರತಿ, ಮುಖ್ಯ ಅತಿಥಿಗಳು: ಶಿಕ್ಷಣ ಇಲಾಖೆ ನಿವೃತ್ತ ಉಪನಿರ್ದೇಶಕರಾದ ಶ್ರೀಮತಿ ಮಂಜುಳಾ, ಸ್ಥಳ: ವನಿತಾ ಸದನ ಆವರಣ, ಕೃಷ್ಣಮೂರ್ತಿಪುರಂ, ಸಂಜೆ 4.30ಕ್ಕೆ.

■ **ಮಹಾಜನ ಪ್ರೌಢಶಾಲೆ:** ಶಾಲಾ ವಾರ್ಷಿಕೋತ್ಸವ, ಮುಖ್ಯ ಅತಿಥಿಗಳು: ಕೈಗಾರಿಕೋದ್ಯಮಿ ಅಶೋಕ್ ಗೋವಿಂದೇಗೌಡ, ಕ್ಷೇತ್ರ ಶಿಕ್ಷಣಾಧಿಕಾರಿ ಕೃಷ್ಣ, ಅಧ್ಯಕ್ಷತೆ: ಶಾಲೆ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮಿ ಮುರಳೀಧರ್, ಸ್ಥಳ: ವಿವೇಕಾನಂದ ಸಭಾಂಗಣ, ಜಯಲಕ್ಷ್ಮಿಪುರಂ, ಸಂಜೆ 5ಕ್ಕೆ

■ **ಹೆಬ್ಬಾರ್ ಶ್ರೀ ವೈಷ್ಣವ ಸಭಾ, ಬೆಂಗಳೂರು ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ :** ತಿರುಪ್ಪಾವೈ ಪ್ರವಚನ, ವಿದ್ವಾನ್ ಎಂ.ಕೆ. ಶೆಲ್ವನಾರಾಯಣ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಕೃಷ್ಣಮೂರ್ತಿಪುರಂ ಶ್ರೀರಾಮ ಮಂದಿರ, ಸಂಜೆ 6.15ರಿಂದ 7.30ರವರೆಗೆ.

■ **ಶ್ರೀ ಶ್ರೀ 101 ಗಣಪತಿ ದೇವಸ್ಥಾನ ಟ್ರಸ್ಟ್:** ಸಂಕಷ್ಟಹರ ಚತುರ್ಥಿ ವ್ರತದ ಸಾಮೂಹಿಕ ಉದ್ಯಾಪನೆ ಅಂಗವಾಗಿ ಪಂಚ ಸಹಸ್ರಮೋದಕ ಹೋಮ ಮತ್ತು ಅಷ್ಟೋತ್ತರ ಶತ ಕಳಸ ಕುಂಭಾಭಿಷೇಕ ಮಹೋತ್ಸವ, 101 ಗಣಪತಿ ಸ್ವಾಮಿಯಲ್ಲಿ ಅನುಜ್ಞೆ, ಶ್ರೀ ವೀರಭದ್ರೇಶ್ವರ ಸನ್ನಿಧಾನದಿಂದ ವೀರಗಾಸೆ, ಶ್ರೀ ಗುರುಮಲ್ಲೇಶ್ವರ ನಂದಿಕಂಬ, ಮಂಗಳವಾದ್ಯ, ಸಮೇತ ಅಗ್ರತೀರ್ಥ ಸಂಗ್ರಹ, ಗೋಪೂಜೆ, ಯಾಗಶಾಲೆ ಪ್ರವೇಶ, ದೀಪಾರಾಧನೆ, ಗಣಪತಿ ಪೂಜೆ, ಪುಣ್ಯಾಹವಾಚನ, ಮಹಾಸಂಕಲ್ಪ, ರಕ್ಷಾಬಂಧನ, ಋತ್ವಿಗ್ವರಣ, ಸಂಜೆ ಮೃತ್ಯುಂಗ್ರಹಣ, ಅಂಕುರಾರ್ಪಣ ವಾಸ್ತು ಮತ್ತು ಅಘೋರ ಅಸ್ತ್ರ ಹೋಮ, ನವಗ್ರಹ ಮೃತ್ಯುಂಜಯ ಪೂಜೆ ಹೋಮ, ಅಷ್ಟೋತ್ತರ ಶತಕಲಸ ಸ್ಥಾಪನೆ ಸ್ಥಳ: ದೇವಸ್ಥಾನ, ತ್ಯಾಗರಾಜ ವೃತ್ತ.


■ **ಜೆಎಸ್‌ಎಸ್ ಪಬ್ಲಿಕ್ ಸ್ಕೂಲ್ :** ಶಾಲಾ ವಾರ್ಷಿಕೋತ್ಸವ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ: ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯದರ್ಶಿ ಪ್ರೊ.ಎಸ್.ಪಿ.ಮಂಜುನಾಥ್, ಮುಖ್ಯ ಅತಿಥಿಗಳು : ಜಿಪಂ ಸಿಇಓ ಕೆ.ಎಂ. ಗಾಯಿತ್ರಿ, ಸಮಾರೋಪ ಭಾಷಣ : ಶಾಲಾ ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕ ಹೆಚ್.ಕೆ. ಪಾಂಡು, ಸ್ಥಳ: ಶಾಲೆ ಆವರಣ, ಸಿದ್ದಾರ್ಥನಗರ, ಸಂಜೆ 5.30ಕ್ಕೆ.

■ **ಗಾನಭಾರತೀ :** ಬಿ.ವಿ. ಶ್ರೀನಿವಾಸ ರಾಘವನ್ ಮತ್ತು ಶ್ರೀಮತಿ ಲಲಿತಾ ರಾಘವನ್ ಸಂಸ್ಮರಣಾ ಕರ್ನಾಟಕ ಶಾಸ್ತ್ರೀಯ ಗಿಟಾರ್ ವಾದನ ಕಾರ್ಯಕ್ರಮ, ಡಾ. ರಂಜನ್ ವಾಸುದೇವನ್–ಗಿಟಾರ್, ವಿದ್ವಾನ್ ಕೇಶವಮೋಹನಕುಮಾರ್–ಪಿಟೀಲು, ವಿದ್ವಾನ್ ವಿ.ಎ. ರಾಧೇಶ್–ಮೃದಂಗ, ವಿದ್ವಾನ್ ಕಾರ್ತಿಕ್–ಖಂಜರಿ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ :** ಸಂವಿಧಾನ ದಿನಾಚರಣೆ ಅಂಗವಾಗಿ ವಿಶೇಷ ಉಪನ್ಯಾಸಗಳ ಮಾಲಿಕೆ, ವಕೀಲರಾದ ಶ್ರೀಮತಿ ಸುಮನ ಅವರಿಂದ ಭಾರತದ ಸಂವಿಧಾನ ಮತ್ತು ದುಡಿಯುವ ಮಹಿಳೆಯರು ಕುರಿತು ಉಪನ್ಯಾಸ, ಅಧ್ಯಕ್ಷತೆ : ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶನಾಲಯದ ನಿರ್ದೇಶಕ ಪ್ರೊ. ಬಿ.ಎಸ್. ಚಂದ್ರಶೇಖರ್, ಸ್ಥಳ: ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯ ಆವರಣ, ಮಾನಸಗಂಗೋತ್ರಿ, ಸಂಜೆ 7ಕ್ಕೆ

ಶಿಕ್ಷಣ ಸಚಿವ ಮಧು ಬಂಗಾರಪ್ಪ ಸಂಚರಿಸುತ್ತಿದ್ದ ಕಾರು ಅಪಘಾತ

ಪ್ರಾಣಾಪಾಯದಿಂದ ಸಚಿವರು ಪಾರು



ತುಮಕೂರು: ಶಿಕ್ಷಣ ಸಚಿವ ಮಧು ಬಂಗಾರಪ್ಪ ಪ್ರಯಾಣಿಸುತ್ತಿದ್ದ ಕಾರು ಅಪಘಾತವಾಗಿದ್ದು, ಸಚಿವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ತುಮಕೂರಿನ ನಂದಿಹಳ್ಳಿಯ ಹೆದ್ದಾರಿಯಲ್ಲಿ ಬುಧವಾರ ಮಧ್ಯರಾತ್ರಿ ಸುಮಾರಿಗೆ ಅಪಘಾತವಾಗಿದೆ. ಚಲಿಸುತ್ತಿದ್ದ ಲಾರಿಗೆ ಕಾರು ಹಿಂಭಾಗದಿಂದ ಗುದ್ದಿದ್ದು, ಪರಿಣಾಮ ಕಾರಿನ ಮುಂಭಾಗ ಸಂಪೂರ್ಣ ಜಖಂ ಆಗಿದೆ.

ಕಾರಿನಲ್ಲಿ ಸಚಿವರು ಸೇರಿ ಮೂವರು ಪ್ರಯಾಣಿಸುತ್ತಿದ್ದು, ಎಲ್ಲರೂ ಬಚಾವ್ ಆಗಿದ್ದಾರೆ. ಶಿವಮೊಗ್ಗದಿಂದ ಬೆಂಗಳೂರಿಗೆ ಪ್ರಯಾಣಿಸುತ್ತಿದ್ದಾಗ ಮಾರ್ಗಮಧ್ಯೆ ಈ ದುರಂತ ಸಂಭವಿಸಿದ್ದು ಬದಲಿ ವಾಹನ ವ್ಯವಸ್ಥೆ ಮಾಡಿಕೊಂಡು ಸಚಿವರು ಬೆಂಗಳೂರಿಗೆ ತೆರಳಿದ್ದಾರೆ. ತುಮಕೂರಿನ ಕ್ಯಾತಸಂದ್ರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೇರಳದ ಗುತ್ತಿಗೆದಾರನ ಹನಿಟ್ರ್ಯಾಪ್; 5.46 ಲಕ್ಷ ನಗದು, ಚಿನ್ನಾಭರಣ ಸುಲಿಗೆ

ಮೂವರು ಬಂಧನ

ಮೈಸೂರು, ಡಿ.28– ಕೇರಳದ ಲೋಕೋಪಯೋಗಿ ಇಲಾಖೆಯ ಗುತ್ತಿಗೆದಾರರನ್ನು ಹನಿಟ್ರ್ಯಾಪ್ ಮಾಡಿ 5.46 ಲಕ್ಷ ರೂ. ನಗದು ಹಾಗೂ ಚಿನ್ನಾಭರಣ ಸುಲಿಗೆ ಮಾಡಿದ ಪ್ರಕರಣದಲ್ಲಿ ಮೈಸೂರು ಗ್ರಾಮಾಂತರ ಠಾಣೆ ಪೊಲೀಸರು ಮಹಿಳೆ ಸೇರಿದಂತೆ ಮೂವರನ್ನು ಬಂಧಿಸಿರುವುದು ತಡವಾಗಿ ವರದಿಯಾಗಿದೆ. ಕೇರಳದ ಗುತ್ತಿಗೆದಾರನ ಹನಿಟ್ರ್ಯಾಪ್ ಪ್ರಕರಣ ಕಳೆದ ಮಾರ್ಚ್‌ನಲ್ಲಿ ನಡೆದಿದ್ದು, ಈ ಸಂಬಂಧ ಕೇರಳದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿ ಅದು ಕಳೆದ ಜುಲೈ ತಿಂಗಳಿನಲ್ಲಿ ಮೈಸೂರಿನ ಗ್ರಾಮಾಂತರ ಠಾಣೆಗೆ ವರ್ಗಾವಣೆಯಾಗಿತ್ತು.

ವಿವರ: ಕೇರಳದ ವೈನಾಡು ಜಿಲ್ಲೆಯ ಕಾಂಹಿರಂಗಾಡು ಗ್ರಾಮದ ಪಿಡಬ್ಲ್ಯುಡಿ ಗುತ್ತಿಗೆದಾರ ಎಂ.ಪಿ.ಸನ್ನಿ(45) ಎಂಬುವರು ಚೆನ್ನೈನಲ್ಲಿ ಹೆಚ್.ಡಿ.ಪೈಪ್‌ಗಳನ್ನು ಖರೀದಿಸುವ ಸಲುವಾಗಿ ತಮ್ಮ ಕಾರಿನಲ್ಲಿ (ಕೆಎಲ್ 25 ಸಿ 30) ಚಾಲಕ ಅಬ್ದುಪಾಸ್ತಾನೊಂದಿಗೆ ಕಳೆದ ಮಾ.19ರಂದು ಮೈಸೂರಿಗೆ ಬಂದು ರೈಲ್ವೆ ನಿಲ್ದಾಣದಲ್ಲಿ ಕಾರನ್ನು ಪಾರ್ಕ್ ಮಾಡಿ, ಚೆನ್ನೈಗೆ ತೆರಳಿ ಮಾ.21ರಂದು ಮೈಸೂರಿಗೆ ಹಿಂದಿರುಗಿದ್ದಾರೆ.

ಅಂದು ಬೆಳಗ್ಗೆ 6.40ರ ಸುಮಾರಿನಲ್ಲಿ ಇವರ ಕಾರು ಮಾನಂದವಾಡಿ ರಸ್ತೆಯಲ್ಲಿ ಹೋಗುತ್ತಿದ್ದಾಗ ಪರಸಯ್ಯನಹುಂಡಿ ಗೇಟ್ ಬಳಿ ಮೊದಲಿಗೆ ಒಬ್ಬ ವ್ಯಕ್ತಿ ಬೈಕ್‌ನಲ್ಲಿ ಬಂದು ಇವರ ಕಾರಿನ ಬಲ ಭಾಗಕ್ಕೆ ಗುದ್ದಿದ್ದಾನೆ. ಕಾರು ನಿಲ್ಲುತ್ತಿದ್ದಂತೆಯೇ ಮತ್ತೆ ಮೂವರು ಓಡಿ ಬಂದು ಕಾರನ್ನು ಸುತ್ತುವರೆದು ಅವಾಚ್ಯ ಪದಗಳಿಂದ ನಿಂದಿಸುತ್ತಾ ಸನ್ನಿ ಮತ್ತು ಅವರ ಚಾಲಕನ ಮೇಲೆ ಹಲ್ಲೆ ನಡೆಸಿ, ಚಾಲಕನನ್ನು ಹಿಂದಿನ ಸೀಟಿನಲ್ಲಿ ಕುಳ್ಳಿರಿಸಿ ಅವರಲ್ಲಿ ಓರ್ವ ಕಾರು ಚಾಲನೆ ಮಾಡಿಕೊಂಡು ಶ್ರೀನಗರದಲ್ಲಿರುವ ಮನೆಯೊಂದಕ್ಕೆ ಇವರಿಬ್ಬರನ್ನು ಕರೆದೊಯ್ಯುತ್ತಾರೆ.

ಸನ್ನಿ ಮತ್ತು ಚಾಲಕನನ್ನು ನಗ್ನಗೊಳಿಸಿ, ರೂಮಿನಲ್ಲಿ ಕೂಡಿ ಹಾಕಿ ಎಲ್ಲರೂ ಹೊರಟು ಹೋಗುತ್ತಾರೆ. ಸ್ವಲ್ಪ ಸಮಯದ ನಂತರ ಮಹಿಳೆಯೊಬ್ಬಳನ್ನು ರೂಮ್‌ಗೆ ಕರೆತಂದು ಆಕೆಯನ್ನೂ ನಗ್ನಗೊಳಿಸಿ, ಸನ್ನಿ ಮತ್ತು ಚಾಲಕನೊಂದಿಗೆ ಆಕೆಯ ಫೋಟೋ ಮತ್ತು ವೀಡಿಯೋ ಮಾಡಿದ ನಂತರ ಆಕೆಯನ್ನು ಕರೆದೊಯ್ಯುತ್ತಾರೆ.



ಸ್ವಲ್ಪ ಸಮಯದ ನಂತರ ಇವರನ್ನು ಕೂಡಿ ಹಾಕಿದ್ದ ರೂಮ್‌ಗೆ ಕೇವಲ ಒಳ ಉಡುಪು ಧರಿಸಿದ್ದ ವ್ಯಕ್ತಿಯೊಬ್ಬರನ್ನು ಕರೆತಂದು ಬಿಡುತ್ತಾರೆ. ಜೊತೆಗೆ ಮತ್ತೊಬ್ಬ ವ್ಯಕ್ತಿ ತಾನು ಸಬ್‌ಇನ್ಸ್‌ಪೆಕ್ಟರ್ ಎಂದು ಹೇಳಿಕೊಂಡು ಕೆಲ ಸಮಯದ ಹಿಂದೆ ಚಿತ್ರೀಕರಿಸಿದ್ದ ವೀಡಿಯೋ ಮತ್ತು ಫೋಟೋ ತೋರಿಸಿ ಮೊದಲಿಗೆ 10 ಲಕ್ಷ ರೂ. ಕೊಡುವಂತೆ ಒತ್ತಾಯಿಸುತ್ತಾನೆ. ಕೊನೆಗೆ ಆತ 6 ಲಕ್ಷ ರೂ.ಗೆ ಬೇಡಿಕೆ ಇಟ್ಟಾಗ ಸನ್ನಿ ಅವರು 5 ಲಕ್ಷ ರೂ. ಕೊಡಲು ಒಪ್ಪುತ್ತಾರೆ.

ಸನ್ನಿ ಅವರು ತಮ್ಮ ನೆಟ್‌ಬ್ಯಾಂಕ್ ಖಾತೆಯಿಂದ ಸಬ್‌ಇನ್ಸ್‌ಪೆಕ್ಟರ್ ಎಂದು ಹೇಳಿಕೊಂಡ ವ್ಯಕ್ತಿ ನೀಡಿದ ಬ್ಯಾಂಕ್ ಖಾತೆಗೆ 1.70 ಲಕ್ಷ ರೂ.ಗಳನ್ನು ವರ್ಗಾವಣೆ ಮಾಡಿದ್ದಲ್ಲದೇ, ಸ್ನೇಹಿತ ನಾಸರ್ ಗಫೂರ್ ಮತ್ತು ಸಹೋದರರಿಗೆ ಕರೆ ಮಾಡಿ, ಅದೇ ಖಾತೆಗೆ ಉಳಿದ ಹಣವನ್ನು 3.30 ಲಕ್ಷ ರೂ.ಗಳನ್ನು ವರ್ಗಾಯಿಸುವಂತೆ ತಿಳಿಸಿದ್ದಾರೆ.

ಅಂದು ಸಂಜೆ 5 ಗಂಟೆವರೆಗೂ ಸನ್ನಿ ಮತ್ತು ಅವರ ಚಾಲಕನನ್ನು ರೂಮ್‌ನಲ್ಲೇ ಕೂಡಿ ಹಾಕಿದ್ದ ಅಪಹರಣಕಾರರು ನಂತರ ಕಾರಿನಲ್ಲಿ ಅವರನ್ನು ಹುಣಸೂರು ಹತ್ತಿರ ಬಿಟ್ಟು ಡೀಸೆಲ್‌ಗೆಂದು 1 ಸಾವಿರದ ಜೊತೆಗೆ ಸನ್ನಿ ಮತ್ತು ಚಾಲಕನಿಂದ ಕಸಿದುಕೊಂಡಿದ್ದ ಮೊಬೈಲ್‌ಗಳನ್ನು ಕೊಟ್ಟು, ಸನ್ನಿ ಬಳಿ ಇದ್ದ ಚಿನ್ನದ ಉಂಗುರ ಮತ್ತು ವಾಲೆಟ್, 46 ಸಾವಿರ ರೂ. ನಗದನ್ನು ಕಿತ್ತುಕೊಂಡು ಪರಾರಿಯಾಗಿದ್ದಾರೆ. ಮರು ದಿನ ಮಾ.22ರಂದು ಬೆಳಗಿನ ಜಾವ ಕೇರಳ ತಲುಪಿದ ಸನ್ನಿ ಹಾಗೂ ಚಾಲಕ ಕಲ್ಪೆಟ್ಟ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ನಂತರ ಕೇರಳದ ತಿರುನೆಲ್ಲಿ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದರು.

ಪ್ರಕರಣ ದಾಖಲಿಸಿಕೊಂಡಿದ್ದ ಕೇರಳ ಪೊಲೀಸರು ಕೃತ್ಯ ಕರ್ನಾಟಕದಲ್ಲಿ ನಡೆದಿದ್ದ ಕಾರಣ ಪ್ರಕರಣವನ್ನು ಕರ್ನಾಟಕ ಡಿಜಿಪಿ ಅವರ ಕಚೇರಿಗೆ ಕಳುಹಿಸಿದ್ದು, ಡಿಜಿಪಿ ಅವರು ಮೈಸೂರು ಗ್ರಾಮಾಂತರ ಠಾಣೆಗೆ ಈ ದೂರನ್ನು ಜುಲೈ 6ರಂದು ರವಾನಿಸಿದ್ದು, ಅಂದು ಮೈಸೂರಿನಲ್ಲಿ ಪ್ರಕರಣ ದಾಖಲಾಗಿತ್ತು. ಬ್ಯಾಂಕ್ ಖಾತೆ ಹಾಗೂ ಕೆಲ ತಾಂತ್ರಿಕ ಆಧಾರಗಳನ್ನಾಧರಿಸಿ ಮೈಸೂರು ಗ್ರಾಮಾಂತರ ಠಾಣೆ ಪೊಲೀಸರು ಕಳೆದ ನವೆಂಬರ್ ತಿಂಗಳಿನಲ್ಲಿ ಪ್ರಮುಖ ಆರೋಪಿ ಫಜಲುಲ್ಲಾ ರೆಹಮಾನ್, ರಿಜ್ವಾನ್, ಮಹಿಳೆ ಮೋನಿಕಾ ಸೇರಿದಂತೆ ಮೂವರನ್ನು ಬಂಧಿಸಿದ್ದರು.

ಈ ತಂಡವು ಶ್ರೀಮಂತರನ್ನು ಗುರಿಯಾಗಿಸಿಕೊಂಡು ಹನಿಟ್ರ್ಯಾಪ್ ಮಾಡುವುದನ್ನೇ ಕಾಯಕವಾಗಿಸಿಕೊಂಡಿದೆ. ಇತ್ತೀಚೆಗೆ ಕೇರಳದ ಉದ್ಯಮಿಯೊಬ್ಬರ ಬಳಿ ಚಾಲಕನಾಗಿದ್ದ ರಿಜ್ವಾನ್, ಅವರಿಗೆ ಮದುವೆ ಮಾಡಿಸುವುದಾಗಿ ಮಡಿಕೇರಿಗೆ ಕರೆತಂದು ಇತರರೊಂದಿಗೆ ಸೇರಿ ಹನಿ ಟ್ರ್ಯಾಪ್ ಮಾಡಿ 10 ಲಕ್ಷ ಸುಲಿಗೆ ಮಾಡಲಾಗಿತ್ತು. ಆರೋಪಿಗಳನ್ನು ಮಡಿಕೇರಿ ಪೊಲೀಸರು ಬಂಧಿಸಿದ್ದಾಗ ರಿಜ್ವಾನ್ ಈ ಪ್ರಕರಣದಲ್ಲಿ ಬಂಧಿತನಾಗಿ ಜೈಲಿನಲ್ಲಿದ್ದ.

ಇಂದು ಸಂಸದ ಪ್ರತಾಪ್ ಸಿಂಹರಿಂದ ಫಲಾನುಭವಿಗಳಿಗೆ ಸವಲತ್ತು ವಿತರಣೆ

ಮೈಸೂರು, ಡಿ.28– ಮೈಸೂರು ಹಾಗೂ ಕೊಡಗು ಸಂಸದ ಪ್ರತಾಪ್ ಸಿಂಹ ಶುಕ್ರವಾರ ವಿವಿಧ ಕಾರ್ಯಕ್ರಮಗಳಲ್ಲಿ ಭಾಗಿಯಾಗಲಿದ್ದಾರೆ.




ಶಾರದಾದೇವಿನಗರದಲ್ಲಿ ಬೆಳಗ್ಗೆ 10ಕ್ಕೆ ಕೇಂದ್ರ ಸರ್ಕಾರದ ವಿಕಸಿತ ಭಾರತ ಸಂಕಲ್ಪ ಯಾತ್ರೆಯ ಭಾಗವಾಗಿ ವಿವಿಧ ಯೋಜನೆಯಡಿ ಫಲಾನುಭವಿಗಳಿಗೆ ಸವಲತ್ತು ವಿತರಣೆ ಹಾಗೂ ಪ್ರಧಾನ ಮಂತ್ರಿ ಉಜ್ವಲ ಯೋಜನೆಯಡಿ ಅರ್ಹ ಫಲಾನುಭವಿಗಳಿಗೆ ಉಚಿತ ಗ್ಯಾಸ್ ವಿತರಿಸಲಾಗುವುದು. ಈ ವೇಳೆ ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಮೇಯರ್ ಶಿವಕುಮಾರ್ ಹಾಗೂ ಬಿಜೆಪಿ ಮುಖಂಡರು ಭಾಗವಹಿಸಲಿದ್ದಾರೆ.

ಬಳಿಕ ಬೆಳಗ್ಗೆ 10.30ಕ್ಕೆ ಶಾಸಕ ಶ್ರೀವತ್ಸ ಹಾಗೂ ಮಾಜಿ ಮೇಯರ್ ಶಿವಕುಮಾರ್ ಹಾಗೂ ಪಕ್ಷದ ಮುಖಂಡರೊಂದಿಗೆ ಜಲ ದರ್ಶಿನಿ ಅತಿಥಿ ಗೃಹದಲ್ಲಿ ಭಾರತ ಸಂಕಲ್ಪ ಯಾತ್ರೆ ಕಾರ್ಯಕ್ರಮ ಹಾಗೂ ಕೇಂದ್ರ ಸರ್ಕಾರದ ವಿವಿಧ ಯೋಜನೆಗಳ ಸಂಬಂಧ ವಿವರಣೆ ನೀಡಲಿದ್ದಾರೆ. ನಂತರ ಮೈಸೂರು ವಿಮಾನ ನಿಲ್ದಾಣದ ಉನ್ನತೀಕರಣ ಹಾಗೂ ವಿಸ್ತರಣೆಗೆ ಸಂಬಂಧಿಸಿದಂತೆ ಮೈಸೂರು ವಿಮಾನ ನಿಲ್ದಾಣದ ನಿರ್ದೇಶಕರು, ಕೆಐಎಡಿಬಿ ಹಾಗೂ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಭೆ ನಡೆಸಲಿದ್ದಾರೆ ಎಂದು ಸಂಸದರ ಆಪ್ತ ಸಹಾಯಕ ತಿಳಿಸಿದ್ದಾರೆ.

ಕೆಎಸ್‌ಆರ್‌ಟಿಸಿ ಅಪಘಾತ ಪರಿಹಾರ 10 ಲಕ್ಷಕ್ಕೆ ಹೆಚ್ಚಳ

ಮೈಸೂರು,ಡಿ.28(ಪಿಎಂ)– ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ (ಕೆಎಸ್‌ಆರ್‌ಟಿಸಿ) ಬಸ್ಸುಗಳು ಅಪಘಾತಕ್ಕೀಡಾಗಿ ಮೃತಪಟ್ಟ ಪ್ರಯಾಣಿಕರ ಕುಟುಂಬಕ್ಕೆ ಹೆಚ್ಚಿನ ಆರ್ಥಿಕ ನೆರವು ನೀಡುವ ಸದುದ್ದೇಶದಿಂದ ಪರಿಹಾರ ಮೊತ್ತವನ್ನು 3 ಲಕ್ಷ ರೂ.ನಿಂದ 10 ಲಕ್ಷ ರೂ.ಗೆ ಹೆಚ್ಚಳ ಮಾಡಲಾಗಿದೆ. 49 ರೂ.ಗಿಂತಲೂ ಕಡಿಮೆ ಮುಖ ಬೆಲೆಯ ಟಿಕೆಟ್‌ಗೆ ಯಾವುದೇ ಅಪಘಾತ ಪರಿಹಾರ ನಿಧಿ ವಂತಿಕೆ ಇರುವುದಿಲ್ಲ. 50 ರೂ.ನಿಂದ 100 ರೂ.ವರೆಗಿನ ಮುಖ ಬೆಲೆ ಟಿಕೆಟ್‌ಗೆ 1 ರೂ. ಹಾಗೂ 100 ರೂ.ಗಿಂತಲೂ ಹೆಚ್ಚು ಮುಖಬೆಲೆ ಟಿಕೆಟ್‌ಗೆ 2 ರೂ. ಅಪಘಾತ ಪರಿಹಾರ ನಿಧಿ ವಂತಿಕೆಯಾಗಿ ಸಂಗ್ರಹಿಸಲಾಗುತ್ತದೆ. 2024ರ ಜ.1ರಿಂದ ಇದು ಜಾರಿಯಾಗಲಿದೆ ಎಂದು ವಾರ್ತಾ ಇಲಾಖೆ ಪ್ರಕಟಣೆ ತಿಳಿಸಿದೆ.



ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ವೈಭವದಿಂದ ನೆರವೇರಿದ

ಶ್ರೀ ರಾಜರಾಜೇಶ್ವರಿದೇವಿ ಪ್ರತಿಷ್ಠಾಪನೆ; ಶ್ರೀಹರಿ ಸನ್ನಿಧಿ ಉದ್ಘಾಟನೆ





ಮೈಸೂರು,ಡಿ.28(ಪಿಎಂ)– ನಂಜನಗೂಡು ರಸ್ತೆಯಲ್ಲಿರುವ ಅವಧೂತ ದತ್ತಪೀಠದ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಆವರಣದಲ್ಲಿ ಶ್ರೀ ರಾಜರಾಜೇಶ್ವರಿದೇವಿ ಪ್ರತಿಷ್ಠಾಪನೆ ಮತ್ತು ಶ್ರೀಹರಿ ಸನ್ನಿಧಿ ಉದ್ಘಾಟನೆ ಗುರುವಾರ ವೈಭವದಿಂದ ನೆರವೇರಿತು.

ಇಂದು ಬೆಳಗ್ಗೆ ಪ್ರತಿಷ್ಠ ಹೋಮ, ಶಾಂತಿ ಪೌಷ್ಟಿಕ ಹೋಮ, ಮೂಲ ಮಂತ್ರ ಹೋಮ, ದುರ್ಗಾ ಸಪ್ತಶತಿ ನಡೆಯಿತು. ಬೆಳಗ್ಗೆ 9.05ಕ್ಕೆ ಮಕರ ಲಗ್ನದಲ್ಲಿ ಸಹಸ್ರ ಸಾಲಿಗ್ರಾಮ ಸ್ಥಾಪನೆ ನೆರವೇರಿತು. ಮಧ್ಯಾಹ್ನ 12 ಗಂಟೆಗೆ ಮೀನ ಲಗ್ನದಲ್ಲಿ ರಾಜರಾಜೇಶ್ವರಿ ಯಂತ್ರ ಪ್ರತಿಷ್ಠಾನ ಮಾಡಲಾಯಿತು. ಶ್ರೀ ಹರಿಸನ್ನಿಧಿಯು ಅತ್ಯಂತ ವಿಶೇಷವಾಗಿದೆ, ಇಲ್ಲಿ ಎಲ್ಲೂ ನೋಡಲಾಗದಂತಹ ವಿಶಿಷ್ಟ ಸಾಲಿಗ್ರಾಮಗಳನ್ನು ಶೇಖರಿಸಿ ಇಡಲಾಗಿದೆ. ಆಶ್ರಮದ ಪ್ರಾರ್ಥನಾ ಮಂದಿರದ ಪ್ರಧಾನ ದ್ವಾರದ ಬಳಿ ಶ್ರೀಹರಿ ಸನ್ನಿಧಿ ಇದ್ದು, ಅನಂತನಾಗ ಶಯನದಲ್ಲಿ 2108 ಅತ್ಯಪರೂಪದ ಸಾಲಿಗ್ರಾಮಗಳನ್ನು ಸಂಗ್ರಹಿಸಿ ಇಡಲಾಗಿದೆ.

ಇದರ ಒಳಗೆ 300 ಕೆಜಿ ತೂಕದ ತ್ರಿವಿಕ್ರಮ ಸಾಲಿಗ್ರಾಮ ಮತ್ತು ಮನೋರಥ ಕೂರ್ಮ ಸಾಲಿಗ್ರಾಮಗಳನ್ನು ಇಡಲಾಗಿದೆ. ಹರಿ ಸನ್ನಿಧಿ ಮೇಲ್ಭಾಗದಲ್ಲಿ ವಿಶೇಷವಾದ ಸುದರ್ಶನ ಯಂತ್ರವನ್ನು ಮಾಡಿದ್ದು, ಇದನ್ನು ಪೂಜ್ಯ ಸ್ವಾಮೀಜಿಯವರ ಪರಿಕಲ್ಪನೆಯಂತೆ ನಿರ್ಮಿಸಲಾಗಿದೆ.

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರು ಶ್ರೀಹರಿ ಸನ್ನಿಧಿಯಲ್ಲಿ ಇಂದು ವಿಶೇಷ ಪೂಜೆ ಸಲ್ಲಿಸಿದರು. ವಿಶ್ವಕ್ ಸೇನಾ ಸಾಲಿಗ್ರಾಮ, ಮೀನು ಮಾದರಿ ಸಾಲಿಗ್ರಾಮ, ಕೂರ್ಮ ಸಾಲಿಗ್ರಾಮ, ಲಕ್ಷ್ಮಿನರಸಿಂಹ ಸಾಲಿಗ್ರಾಮ, ಪರುಶುರಾಮ ಸಾಲಿಗ್ರಾಮ, ಶ್ರೀರಾಮ ಸಾಲಿಗ್ರಾಮ, ಮುರಾರಿ ಕೃಷ್ಣ ಸಾಲಿಗ್ರಾಮ ಹೀಗೆ ಹಲವು ಸಾಲಿಗ್ರಾಮಗಳನ್ನು ಇಟ್ಟು ಶ್ರೀಗಳು ಪೂಜಿಸಿದರು.

ಶ್ರೀಮಾತಾ ರಾಜರಾಜೇಶ್ವರಿ ಮೂರ್ತಿ ಪ್ರತಿಷ್ಠಾಪನೆ ಮಾಡಿ, ದೇವಿಗೆ ವಿವಿಧ ಅಭಿಷೇಕವನ್ನು ಶ್ರೀಗಳು ನೆರವೇರಿಸಿದರು. ಇದೇ ವೇಳೆ ವಿವಿಧ ಹೋಮ ಕಾರ್ಯಗಳನ್ನೂ ನೆರವೇರಿಸಲಾಯಿತು. ಹರಿ ಸನ್ನಿಧಿಯಲ್ಲಿ ಶ್ರೀಗಳು ಪೂರ್ಣಾಹುತಿ ನೆರವೇರಿಸಿದರು. ನಂತರ ಶಿಂಶುಮಾರ ಧ್ರುವ ಮೂರ್ತಿಗೆ ಶ್ರೀಗಳು ಹೋಮ ರಕ್ಷೆ ಅರ್ಪಿಸಿದರು. ನಂತರ ಕುಂಬಾಭಿಷೇಕ, ಬ್ರಹ್ಮ ಕಳಶ ಅಭಿಷೇಕ ನೆರವೇರಿಸಲಾಯಿತು. ಮಧ್ಯಾಹ್ನದಿಂದ ಧರ್ಮದರ್ಶನ ಇದ್ದುದರಿಂದ ಸಾವಿರಾರು ಭಕ್ತರು ಶ್ರೀಮಾತಾ ರಾಜರಾಜೇಶ್ವರಿ ಮೂರ್ತಿ ಹಾಗೂ ಶ್ರೀ ಹರಿಸನ್ನಿಧಿ ದರ್ಶನ ಪಡೆದರು.

ಭಕ್ತರಿಗೆ ದೇವಿ ಕೃಪೆಯಿಂದ ಯಾವ ಭಯವೂ ಇರದು; ಗಣಪತಿ ಶ್ರೀಗಳು

ಮೈಸೂರು,ಡಿ.28(ಪಿಎಂ)– ಶ್ರೀ ಮಾತಾ ರಾಜರಾಜೇಶ್ವರಿ ದೇವಿಯ ಆಶ್ರಯಲ್ಲಿ ಭಕ್ತರಿಗೆ ಯಾವ ಭಯವೂ ಇರುವುದಿಲ್ಲ ಎಂದು ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ತಿಳಿಸಿದರು.

ಆಶ್ರಮದ ಆವರಣದಲ್ಲಿಂದು ಶ್ರೀ ರಾಜರಾಜೇಶ್ವರಿ ದೇವಿ ಪ್ರತಿಷ್ಠಾಪನೆ ಮತ್ತು ಕುಂಭಾಭಿಷೇಕ ನೆರವೇರಿಸಿ, ಶ್ರೀಗಳು ಭಕ್ತರಿಗೆ ಆಶೀರ್ವಚನ ನೀಡಿದರು. ಎಲ್ಲಾ ರೋಗ–ರುಜಿನಗಳಿಂದ ಜನರನ್ನು ಪಾರುಮಾಡು, ನೀನು ಇಲ್ಲೇ ನೆಲೆ ನಿಂತು ಈ ಕ್ಷೇತ್ರ ಪ್ರಸಿದ್ಧಿಯಾಗುವಂತೆ ಮಾಡು ಎಂದು ದೇವಿಯಲ್ಲಿ ಪ್ರಾರ್ಥಿಸಿದರು. ಅಷ್ಟ ಪೀಠಗಳಲ್ಲಿ ಒಂದಾದ ಚಾಮುಂಡಿಬೆಟ್ಟದಲ್ಲಿ ಶ್ರೀ ಚಾಮುಂಡೇಶ್ವರಿ ದೇವಿಯು ನೆಲೆಸಿದ್ದಾಳೆ. ಇಲ್ಲಿ ಶ್ರೀ ರಾಜರಾಜೇಶ್ವರಿ ತಾಯಿ ನೆಲೆಸಿದ್ದಾಳೆ ಎಂದರು.

ತಾಯಿಯು ಶ್ರೀದೇವಿ, ಸಚ್ಚಿದಾನಂದೇಶ್ವರ, ಲಕ್ಷ್ಮೀನರಸಿಂಹ ಸಹಿತ ಇಲ್ಲಿ ನೆಲೆಸಿದ್ದಾಳೆ. ಎಲ್ಲಾ ಕಷ್ಟಗಳಿಂದ ಪಾರು ಮಾಡುತ್ತಾಳೆ. ಸತ್ಯ ಮತ್ತು ಧರ್ಮಕ್ಕೆ ಎಂದಿಗೂ ವಿಜಯವಾಗಲಿದೆ ಎಂದರಲ್ಲದೆ, ಸತ್ಯ, ಧರ್ಮ, ವೇದಗಳು, ಉಪನಿಷತ್ತುಗಳಿಗೆ ಜಯವಾಗಲಿ ಎಂದು ಶ್ರೀಗಳು ಹೇಳಿ, ಭಕ್ತರಿಂದಲೂ ಹೇಳಿಸಿದ್ದು ವಿಶೇಷವಾಗಿತ್ತು. ಲೋಕ ಕಲ್ಯಾಣವಾಗಲಿ ಜನರಿಗೆ ನಿನ್ನ ಆಶ್ರಯ ಇರಲೆಂದು ಹೇಳಿ, ಶ್ರೀ ರಾಜರಾಜೇಶ್ವರಿ ಕುಂಭಕ್ಕೆ ಹಣೆ ಇಟ್ಟು ಸ್ವಾಮೀಜಿ ಪ್ರಾರ್ಥಿಸಿದರು. ಅಲ್ಲದೆ, ತಾಯಿ ರಾಜರಾಜೇಶ್ವರಿ ಈಗ ಮೈಸೂರಿನಲ್ಲಿ ನೆಲೆಸಿದ್ದು, ಮೈಸೂರಿನ ಜನರು ಮತ್ತು ಸುತ್ತಮುತ್ತಲಿನವರು ಕೂಡ ಆಶ್ರಮಕ್ಕೆ ಆಗಮಿಸಿ ತಾಯಿ ಕೃಪೆಗೆ ಪಾತ್ರರಾಗಬೇಕೆಂದು ಕರೆ ನೀಡಿದರು.



ಮೈಸೂರಿನ ಹೂಟಗಳ್ಳಿ ಗ್ರಾಮಾಭಿವೃದ್ಧಿ ಶ್ರೀರಾಮ ಸೇವಾ ಸಂಘದ ವತಿಯಿಂದ 2024ನೇ ಸಾಲಿನ ಕ್ಯಾಲೆಂಡರ್ ಬಿಡುಗಡೆಗೊಳಿಸಲಾಯಿತು. ಈ ಸಂದರ್ಭದಲ್ಲಿ ಸಂಘದ ಪದಾಧಿಕಾರಿಗಳು, ಕಾರ್ಯಕರ್ತರು ಹಾಜರಿದ್ದರು.

ಬ್ಯಾಟಿಂಗ್ ವೈಫಲ್ಯ: ಭಾರತಕ್ಕೆ ಹೀನಾಯ ಸೋಲು

ಸೆಂಚೂರಿಯನ್, ಡಿ.28– ಬ್ಯಾಟ್ಸ್‌ಮನ್‌ಗಳ ಬ್ಯಾಟಿಂಗ್ ವೈಫಲ್ಯಕ್ಕೆ ಬೆಲೆತೆತ್ತ ಭಾರತ ಆತಿಥೇಯ ದಕ್ಷಿಣ ಆಫ್ರಿಕಾ ವಿರುದ್ಧ ಇನ್ನಿಂಗ್ಸ್ ಹಾಗೂ 32 ರನ್‌ಗಳ ಹೀನಾಯ ಸೋಲು ಅನುಭವಿಸಿದೆ. ಆ ಮೂಲಕ 2 ಪಂದ್ಯಗಳ ಟೆಸ್ಟ್ ಸರಣಿಯಲ್ಲಿ 1–0 ಅಂತರ ಹಿನ್ನಡೆ ಅನುಭವಿಸಿದೆ.



ಇಲ್ಲಿನ ಸೂಪರ್ ಸ್ಪೋರ್ಟ್ಸ್ ಮೈದಾನದಲ್ಲಿ ನಡೆದ ಮೊದಲ ಟೆಸ್ಟ್ ಪಂದ್ಯದ 2ನೇ ದಿನದಂತ್ಯಕ್ಕೆ 5 ವಿಕೆಟ್ ನಷ್ಟಕ್ಕೆ 256 ರನ್ ಗಳಿಸಿದ್ದ ದಕ್ಷಿಣ ಆಫ್ರಿಕಾ ಮೂರನೇ ದಿನ 108.4 ಓವರ್‌ಗಳಲ್ಲಿ 408 ರನ್‌ಗಳಿಗೆ ಆಲೌಟಾಯಿತು.

ಮೊದಲ ಇನಿಂಗ್ಸ್‌ನಲ್ಲಿ 163 ರನ್‌ಗಳ ಭಾರೀ ಹಿನ್ನಡೆ ಅನುಭವಿಸಿದ ಭಾರತ 2ನೇ ಇನಿಂಗ್ಸ್‌ನಲ್ಲೂ ದಿಟ್ಟ ಆಟವಾಡಲು ವಿಫಲವಾಯಿತು. ತಂಡದ ಪರ ಏಕಾಂಗಿ ಹೋರಾಟ ನಡೆಸಿದ ವಿರಾಟ್ ಕೊಹ್ಲಿ 76 ರನ್ ಬಾರಿಸಿದರೆ, ಶುಭ್‌ಮನ್ ಗಿಲ್ 26 ರನ್ ಗಳಿಸಿದರು. ಉಳಿದವರು ಎರಡಂಕಿ ಮೊತ್ತ ದಾಖಲಿಸಲು ಸಾಧ್ಯವಾಗದೇ ಪೆವಿಲಿಯನ್ ಪರೇಡ್ ನಡೆಸಿದರು. ಅಂತಿಮವಾಗಿ ಭಾರತ 34.1 ಓವರ್‌ಗಳಲ್ಲಿ 131 ರನ್‌ಗಳಿಗೆ ಸರ್ವಪತನವಾಯಿತು. ದಕ್ಷಿಣ ಆಫ್ರಿಕಾ ಪರ ನಂಡ್ರೆ ಬರ್ಗರ್ 4, ಮಾರ್ಕೊ ಯೆನ್ಸನ್ 3, ಕಗಿಸೊ ರಬಾಡ 2 ವಿಕೆಟ್ ಪಡೆದರು. 2ನೇ ದಿನ 140 ರನ್‌ಗಳಿಸಿ ಅಜೇಯರಾಗಿದ್ದ ಡೀನ್ ಎಲ್ಗರ್ ಇಂದು 185 ರನ್ ಗಳಿಸಿ ಔಟಾದರೆ, ಮಾರ್ಕೊ ಯೆನ್ಸನ್ 84 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಡೀನ್ ಎಲ್ಗರ್ ಪಂದ್ಯಶ್ರೇಷ್ಠ ಗೌರವಕ್ಕೆ ಪಾತ್ರರಾದರು. ವಿಶ್ವದ ಎಲ್ಲಾ ಭಾಗಗಳಲ್ಲಿ ಟೆಸ್ಟ್ ಸರಣಿ ಗೆದ್ದಿರುವ ಭಾರತಕ್ಕೆ ಹರಿಣಗಳ ನಾಡಲ್ಲಿ ಮಾತ್ರ ಟೆಸ್ಟ್ ಸರಣಿ ಗೆಲುವು ಸಿಕ್ಕಿಲ್ಲ. ಈ ಕನಸನ್ನು ನನಸನ್ನಾಗಿಸಿ ಕೊಳ್ಳುವ ಉತ್ತಮ ಅವಕಾಶ ಭಾರತ ತಂಡದ ಕೈಲಿತ್ತು. ಆದರೆ, ಬ್ಯಾಟಿಂಗ್ ವೈಫಲ್ಯದ ಕಾರಣ ಇದು ಸಾಧ್ಯವಾಗಲಿಲ್ಲ. ಸರಣಿಯ ಎರಡನೇ ಹಾಗೂ ಅಂತಿಮ ಪಂದ್ಯದಲ್ಲಿ ಭಾರತ ಕಮ್‌ಬ್ಯಾಕ್ ಮಾಡಿ ಜಯ ದಾಖಲಿಸಿದರೂ ಸರಣಿ 1–1 ಅಂತರದಲ್ಲಿ ಸಮಬಲ ಕಾಣಲಿದೆ. 2ನೇ ಟೆಸ್ಟ್ ಪಂದ್ಯ 2024ರ ಜ.3ರಿಂದ 7ರವರೆಗೆ ಕೇಪ್‌ಟೌನ್‌ನ ನ್ಯೂಲ್ಯಾಂಡ್ಸ್ ಕ್ರೀಡಾಂಗಣದಲ್ಲಿ ನಡೆಯಲಿದೆ.

ಸಂಕ್ಷಿಪ್ತ ಸ್ಕೋರ್

ಭಾರತ ಮೊದಲ ಇನ್ನಿಂಗ್ಸ್ 245/10
ದಕ್ಷಿಣ ಆಫ್ರಿಕಾ ಮೊದಲ ಇನ್ನಿಂಗ್ಸ್ 408/10
ಭಾರತ ಎರಡನೇ ಇನ್ನಿಂಗ್ಸ್ 131/10

ಮಧ್ಯಪ್ರದೇಶದಲ್ಲಿ ಬಸ್, ಟ್ರಕ್ ನಡುವೆ ಅಪಘಾತ; 12 ಮಂದಿ ಸಜೀವ ದಹನ

ಗುನ: ಮಧ್ಯಪ್ರದೇಶದಲ್ಲಿ ಬುಧವಾರ ತಡರಾತ್ರಿ ಖಾಸಗಿ ಬಸ್ ಹಾಗೂ ಡಂಪರ್ ಟ್ರಕ್ ನಡುವೆ ಅಪಘಾತ ಸಂಭವಿಸಿ, 12 ಮಂದಿ ಸಜೀವ ದಹನವಾಗಿದ್ದಾರೆ.

ಈ ಘಟನೆ ಗುನ ಜಿಲ್ಲೆಯ ಗುಣ–ಅರೋನ್ ಮಾರ್ಗದಲ್ಲಿ ಸಂಭವಿಸಿದೆ. ಬಸ್ ಹಾಗೂ ಟ್ರಕ್ ನಡುವಿನ ಅಪಘಾತದಲ್ಲಿ ಬಸ್ ಹೊತ್ತಿ ಉರಿದಿದೆ. ಬಸ್ಸಿನಲ್ಲಿದ್ದ 12 ಪ್ರಯಾಣಿಕರು ಸಜೀವ ದಹನಗೊಂಡು, 17 ಜನ ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ಗುನ ಜಿಲ್ಲೆಯ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಐವರ ಪರಿಸ್ಥಿತಿ ಚಿಂತಾಜನಕವಾಗಿದೆ. ಉಳಿದವರು ಚೇತರಿಸಿಕೊಳ್ಳುತ್ತಿದ್ದಾರೆ. ಪ್ರಸ್ತುತ 17 ಮಂದಿ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಬಸ್ ಮತ್ತು ಟ್ರಕ್ ಅಪಘಾತದಲ್ಲಿ 12 ಜನರು ಪ್ರಾಣ ಕಳೆದುಕೊಂಡಿದ್ದಾರೆ.

ಸೇವಾವಧಿಯಲ್ಲಿ ಅಕ್ರಮ, ಸರ್ಕಾರಕ್ಕೆ ವಂಚನೆ ನಿವೃತ್ತ ಪಿಡಿಓಗೆ 5 ವರ್ಷ ಜೈಲು ಶಿಕ್ಷೆ

ಮೈಸೂರು, ಡಿ.28(ಎಸ್‌ಬಿಡಿ)– ಸೇವಾವಧಿಯಲ್ಲಿ ಅಕ್ರಮವೆಸಗಿ ಸರ್ಕಾರಕ್ಕೆ ವಂಚಿಸಿದ್ದ ನಿವೃತ್ತ ಪಿಡಿಓಗೆ ನ್ಯಾಯಾಲಯ 5 ವರ್ಷ ಕಠಿಣ ಕಾರಾಗೃಹ ಶಿಕ್ಷೆ ವಿಧಿಸಿದೆ.



ಬೆಳವಾಡಿ ಗ್ರಾಮ ಪಂಚಾಯಿತಿಯಲ್ಲಿ 2013 ಸೆ.13ರಿಂದ 2014ರ ಜ.6ರವರೆಗೆ ಪಿಡಿಓ ಆಗಿ ಕಾರ್ಯನಿರ್ವಹಿಸಿ, ನಿವೃತ್ತರಾಗಿರುವ ನಾಗೇಗೌಡಗೆ ಶಿಕ್ಷೆ ವಿಧಿಸಲಾಗಿದೆ. ಸರ್ಕಾರದ ಆದೇಶದಂತೆ ಭೂ ಪರಿವರ್ತನೆಯಾದ ನಂತರ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಿಂದ ಕಡ್ಡಾಯವಾಗಿ ನಕ್ಷೆ ಅನುಮೋದನೆ ಪಡೆದು, ಆದೇಶ ಸಂಖ್ಯೆ ಹಾಗೂ ಬಡಾವಣೆಯ ನಕ್ಷೆಯನ್ನು ಸ್ಕ್ಯಾನ್ ಮಾಡಿ ಇ–ಸ್ವತ್ತು ತಂತ್ರಾಂಶದಲ್ಲಿ ದಾಖಲಿಸಬೇಕು. ಆದರೆ ನಾಗೇಗೌಡ, ಸರ್ಕಾರದ ಆದೇಶ ಪಾಲಿಸದೆ ನಮೂನೆ–9ರಲ್ಲಿ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಿಂದ ನಕ್ಷೆ ಅನುಮೋದನೆ ಆಗಿರುವುದಾಗಿ ಸುಳ್ಳು ಆದೇಶ ಸಂಖ್ಯೆಯನ್ನು ನಮೂದಿಸಿ, ನಂತರ ಇ–ಸ್ವತ್ತು ತಂತ್ರಾಂಶದಲ್ಲಿ ನಕ್ಷೆ ಅನುಮೋದನೆ ಆಗಿದೆ ಎಂದು ಸುಳ್ಳು ದಾಖಲಿಸಿ, ಸರ್ಕಾರಕ್ಕೆ ವಂಚಿಸಿದ್ದ. ಇ–ಸ್ವತ್ತು ತಂತ್ರಾಂಶದಲ್ಲಿ ದ್ವಿತೀಯ ದರ್ಜೆ ಸಹಾಯಕ, ನಂತರ ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ನಂತರ ಪಿಡಿಓ ಹೀಗೆ ಸರ್ಕಾರದ ನಿಯ ಮಾವಳಿಯಂತೆ ಮೂರು ಹಂತದಲ್ಲಿ ಲಾಗಿನ್ ಬಳಸಿ, ವಿವರಗಳನ್ನು ನಮೂದಿಸಿ ನಮೂನೆ–9 ಮತ್ತು ನಮೂನೆ 11 ವಿತರಿಸಬೇಕು. ಈ ಮೂರು ಹಂತದ ಲಾಗಿನ್‌ಗಳನ್ನು ಒಬ್ಬನೇ ಬಳಸಿ, ಬೆಳವಾಡಿ ಸರ್ವೆ ನಂ.326, 69/1ಎ ಮತ್ತು 69/1ಬಿ ವ್ಯಾಪ್ತಿಯ 85 ಪ್ರಕರಣಗಳಲ್ಲಿ ಕಾನೂನುಬಾಹಿರವಾಗಿ ವಿವರಗಳನ್ನು ನಮೂದಿಸಿದ್ದ.

ವಿಚಾರಣೆ ವೇಳೆ ನಂಬಿಕೆ ದ್ರೋಹ, ಮೋಸ, ವಂಚನೆ ಮತ್ತು ದಾಖಲಾತಿಗಳನ್ನು ತಿದ್ದಿರುವುದು ದೃಢಪಟ್ಟ ಮೇರೆಗೆ ನಾಗೇಗೌಡ ವಿರುದ್ಧ ಪ್ರಕರಣವನ್ನು ದಾಖಲಿಸಿ, ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿತ್ತು. ಪ್ರಕರಣದ ವಿಚಾರಣೆ ನಡೆಸಿದ 1ನೇ ಅಧಿಕ ಸಿಜೆಎಂ ನ್ಯಾಯಾಲಯದ ನ್ಯಾಯಾಧೀಶರಾದ ಎ.ಜಿ.ಶಿಲ್ಪಾ ಅವರು, ನಾಗೇಗೌಡ ವಿರುದ್ಧದ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಆತನಿಗೆ 5 ವರ್ಷ ಕಠಿಣ ಸಜೆ ಹಾಗೂ ಒಟ್ಟು 20 ಸಾವಿರ ರೂ. ದಂಡ ವಿಧಿಸಿ, ತೀರ್ಪು ನೀಡಿದ್ದಾರೆ. ಸರ್ಕಾರದ ಪರವಾಗಿ 1ನೇ ಅಧಿಕ ಸಿಜೆಎಂ ನ್ಯಾಯಾಲಯದ ಹಿರಿಯ ಸರ್ಕಾರಿ ಅಭಿಯೋಜಕರು ವಾದ ಮಂಡಿಸಿದ್ದರು.

ನಕ್ಕರೆ ಅದೇ ಸ್ವರ್ಗ

ರೋಗಿ : "ಡಾಕ್ಟ್ರೇ, ನಾನು ತುಂಬ ಚಿಂತೆ ಮಾಡ್ತಿದ್ದೀನಿ. ರಾತ್ರಿ ನನಗೊಂದು ಕನಸು ಬಿತ್ತು. ಅದರಲ್ಲಿ ನಾನು ಐವತ್ತು ಸುಂದರವಾದ ಹುಡುಗಿಯರ ಜೊತೆ ಇದ್ದೆ. ಅಬ್ಬಾ!"

ವೈದ್ಯ : "ಒಳ್ಳೆಯದೇ ಆಯಿತು. ಅದಕ್ಕೆ ಚಿಂತೆ ಯಾಕೆ?"

ರೋಗಿ : "ಆ ಕನಸಿನಲ್ಲಿ ನಾನೂ ಹುಡುಗಿಯಾಗಿದ್ದೆ"

ಮೈಸೂರು ಮಿತ್ರ

ಶುಕ್ರವಾರ, 29 ಡಿಸೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಶಾಸನಗಳು ಸಾಯುತ್ತವೆ, ಗ್ರಂಥಗಳಿಗೆ ಸಾವಿಲ್ಲ –ಒಲಿವರ್ ಲಿಟ್ಟನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ವಿಶ್ವದಲ್ಲಿ ರೊಟ್ಟಿಗೆ ಹಸಿದವರಿಗಿಂತ ಪ್ರೀತಿಗೆ ಹಸಿದವರು ಜಾಸ್ತಿ

ನಿಮ್ಮ ಪತ್ರಗಳು

ರಾಜ್ಯದಾದ್ಯಂತ ಕನ್ನಡ ನಾಮಫಲಕಗಳು ಕಾಣಲಿ

ಮಾನ್ಯರೆ,

ಇತ್ತೀಚಿನ ದಿನಗಳಲ್ಲಿ ರಾಜ್ಯದ ಬೆಂಗಳೂರು ಸೇರಿದಂತೆ ಮತ್ತಿತರ ಜಿಲ್ಲೆಗಳಲ್ಲಿ ನಾಮಫಲಕಗಳಲ್ಲಿ ಕನ್ನಡಕ್ಕೆ ಆದ್ಯತೆ ನೀಡಬೇಕು ಎಂಬ ಸರ್ಕಾರದ ಆದೇಶ ಇದ್ದರೂ ಕೂಡ ಸರಿಯಾಗಿ ಪಾಲಿಸುತ್ತಿಲ್ಲ. ಬೆಂಗಳೂರು – ಮೈಸೂರು ನೈಸ್ ರಸ್ತೆಯ ಟೋಲ್‌ಗಳಲ್ಲಿ, ರಾಜ್ಯದ ಹೆದ್ದಾರಿಗಳಲ್ಲಿ ತಲುಪುವ ಸ್ಥಳದ ಹೆಸರನ್ನು ಬರೆಯಲಾದ ಕಲ್ಲುಗಳಲ್ಲಿ, ರಾಜ್ಯದಲ್ಲಿ ವಿವಿಧ ಬಗೆಯ ಜಾಹೀರಾತು ನೀಡುವ ಕಂಪೆನಿಗಳು ಹಾಗೂ ಇತರ ಸಾರ್ವಜನಿಕ ಸ್ಥಳಗಳಲ್ಲಿ ಕನ್ನಡ ಅಕ್ಷರಮಾಲೆಯ ನಾಮಫಲಕಗಳನ್ನು ಹಾಕದೆ ರಾಜ್ಯದ ಸರ್ಕಾರದ ಆದೇಶಕ್ಕೆ ಅಗೌರವ ತೋರುತ್ತಿರುವುದು ಹೆಚ್ಚುತ್ತಿದೆ. ರಾಜ್ಯದ ಆಡಳಿತ ಭಾಷೆಯು ಕನ್ನಡವಾಗಿರುವುದರಿಂದ ಹೆಚ್ಚಾಗಿ ಶಾಲಾ–ಕಾಲೇಜಿನಲ್ಲಿಯೂ ಸಹ ಕನ್ನಡ ಕಲಿತು ವ್ಯವಹರಿಸುವವರಿಗೆ ಬಹಳ ತೊಂದರೆಯಾಗುತ್ತಿದೆ. ರಾಜ್ಯದ ರಾಜಧಾನಿ ಬೆಂಗಳೂರು ಮತ್ತು ಪ್ರಮುಖ ನಗರಗಳಲ್ಲಿ ವಿಪರೀತ ಅನ್ಯಭಾಷೆಯ ವ್ಯಾಮೋಹ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ನಮ್ಮ ತಾಯಿ ಭಾಷೆಯೇ ಮರೆಯಾಗುತ್ತಿದೆ. ಈ ಕೂಡಲೇ ರಾಜ್ಯದ ಮುಖ್ಯಮಂತ್ರಿಗಳು ಕರ್ನಾಟಕದ ಆಡಳಿತ ಭಾಷೆಯನ್ನು ರಾಜ್ಯದ ಎಲ್ಲಾ ವಿಭಾಗಗಳಲ್ಲಿ ಕನ್ನಡ ಪದಬಳಕೆಯನ್ನು ಕಡ್ಡಾಯ ಮಾಡಿ ರಾಜ್ಯದ ಜನತೆಗೆ ಸಹಕಾರವಾಗುವಂತೆ ಅನುಕೂಲ ಮಾಡಿಕೊಡಬೇಕು.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು.

ತಂಗುದಾಣಗಳ ದುರಸ್ತಿಗೊಳಿಸಿ, ಸೌಲಭ್ಯ ಕಲ್ಪಿಸಿ

ಮಾನ್ಯರೆ,

ಮೈಸೂರಿನ ಜೆ.ಪಿ. ನಗರದ ಗೊಬ್ಬಳಿಮರ ಬಸ್ ತಂಗುದಾಣವು ಶಿಥಿಲಾವಸ್ಥೆಯಲ್ಲಿದೆ. ತಂಗುದಾಣದ ಒಳಭಾಗದ ಮೇಲ್ಛಾವಣಿಯ ಗಾರೆ ಉದುರಿ, ತಾರಸಿಯ ಕಬ್ಬಿಣದ ಸರಳುಗಳು ಕಾಣುತ್ತಿದೆ. ಸದರಿ ತಂಗುದಾಣವು ಬಡಾವಣೆಯ ಪ್ರಮುಖ ತಂಗುದಾಣವಾಗಿದ್ದು, ಯಾವಾಗಲೂ ಜನನಿಬಿಡವಾಗಿರುತ್ತದೆ. ಪ್ರಯಾಣಿಕರ ಹಿತದೃಷ್ಟಿಯಿಂದ ತುರ್ತಾಗಿ ಈ ತಂಗುದಾಣವನ್ನು ದುರಸ್ತಿಗೊಳಿಸಿ, ಬೆಳಕಿನ ಸೌಲಭ್ಯ ಕಲ್ಪಿಸಬೇಕಾಗಿ ಮನವಿ. ಎರಡನೆಯದಾಗಿ, ನಗರದ ಯಾದವಗಿರಿಯ ಮೈಸೂರು ಆಕಾಶವಾಣಿ ಕೇಂದ್ರದ ಪಕ್ಕದಲ್ಲಿರುವ ಅಂಚೆ ಕಚೇರಿಯ ಎಡಭಾಗ ಮತ್ತು ಎದುರುಗಡೆ ಇರುವ ತಂಗುದಾಣಕ್ಕೆ ಬೆಳಕಿನ ಸೌಲಭ್ಯವಿರುವುದಿಲ್ಲ. ಈ ಪ್ರದೇಶದ ಸುತ್ತಮುತ್ತ ಅನೇಕ ಕಚೇರಿಗಳು ಮತ್ತು ಕಾರ್ಖಾನೆಗಳಿದ್ದು, ಮಹಿಳಾ ಪ್ರಯಾಣಿಕರನ್ನೊಳಗೊಂಡಂತೆ ಸಾಕಷ್ಟು ಸಂಖ್ಯೆಯ ಪ್ರಯಾಣಿಕರು ಈ ತಂಗುದಾಣ ಅವಲಂಬಿತರಾಗಿದ್ದಾರೆ. ಸಂಬಂಧಪಟ್ಟವರು ಇತ್ತ ಗಮನಹರಿಸಿ ಆದಷ್ಟು ಶೀಘ್ರ ತಂಗುದಾಣಗಳಿಗೆ ಬೆಳಕಿನ ಸೌಲಭ್ಯ ಕಲ್ಪಿಸಬೇಕೆಂದು ಮನವಿ.

–ಪರಶಿವಮೂರ್ತಿ, ಜೆ.ಪಿ.ನಗರ, ಮೈಸೂರು.

ರೈತರ ಅವಹೇಳನ ಆಕ್ಷೇಪಾರ್ಹ

ಮಾನ್ಯರೆ,

ರಾಜ್ಯದ ಸಕ್ಕರೆ ಸಚಿವರು ರೈತರ ಬಗ್ಗೆ ಲಘುವಾಗಿ ಮಾತಾಡಿರುವುದು ಸಚಿವರ ಸ್ಥಾನಕ್ಕೆ ಶೋಭೆ ತರುವಂತದ್ದಲ್ಲ. ರೈತರು ಒಮ್ಮೆ ಕೈಕಟ್ಟಿ ಕೂತುಕೊಂಡರೆ ಇಡೀ ಪ್ರಪಂಚವೇ ಹಸಿವಿನಿಂದ ಇರಬೇಕಾಗುತ್ತದೆ. ಇಡೀ ಮಾನವ ಕುಲಕ್ಕೆ ಹೊಟ್ಟೆ ತುಂಬಿಸುವಂತಹ ಕಾಯಕ ಮಾಡುವ ರೈತರ ಬಗ್ಗೆ ಸಕ್ಕರೆ ಸಚಿವರಾದ ಶಿವಾನಂದ್ ಪಾಟೀಲ್ ಅವರು ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಸುಟ್ಟ ಗ್ರಾಮದಲ್ಲಿ ಗ್ರಾಮೀಣ ಕೃಷಿ ಸ್ವಸಹಾಯ ಸಂಘದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತಾಡುತ್ತಾ, ರೈತರು ಬರಗಾಲ ಬರಲಿ, ಸಾಲಮನ್ನಾ ಆಗಲಿ ಎಂದು ಕಾಯುತ್ತಾರೆ ಎಂದು ಹೇಳಿರುವುದು ಆಕ್ಷೇಪಾರ್ಹ.

ಹಳ್ಳಿಗಳಿಂದ ಕೂಡಿರುವ ಈ ನಮ್ಮ ದೇಶ ಜನ ಜೀವನಕ್ಕಾಗಿ ಕೃಷಿಯನ್ನು ಅವಲಂಬಿತವಾದ ದೇಶ. ರೈತರು ಬೆಳೆ ಬೆಳೆದ ಆಹಾರವೇ ಜನರ ಹೊಟ್ಟೆ ತುಂಬಿಸುವುದು. ಅಂತಹ ಅನ್ನದಾತನಿಗೆ ಅವಹೇಳನದ ಮಾತು ದುರದೃಷ್ಟಕರ. ರೈತರು ಎಲ್ಲಾ ದಿಕ್ಕಿನಲ್ಲಿಯೂ ಸಂಕಷ್ಟವನ್ನು ಎದುರಿಸಬೇಕಾಗುತ್ತದೆ. ಪ್ರಕೃತಿ ವಿಕೋಪದ ಸಂಕಷ್ಟ, ವನ್ಯಜೀವಿಗಳಿಂದಲೂ, ಬ್ಯಾಂಕ್‌ನವರ ಸಾಲ ವಸೂಲಿ ಸಂಕಷ್ಟ, ಅನ್ನ ಹಾಕುವ ಅನ್ನದಾತನಿಗೆ ಮಾರುಕಟ್ಟೆಯಲ್ಲಿ ಬೆಳೆದ ಬೆಳೆಗೆ ಬೆಂಬಲ ಬೆಲೆ ಇಲ್ಲದೆ ಆತ್ಮಹತ್ಯೆಗಳು ಮತ್ತೆ ಆಗಾಗ ಕೆಲವು ರಾಜಕಾರಣಿಗಳು ಲಘುವಾಗಿ ಮಾತಾಡಿ ರೈತಾಪಿ ವರ್ಗ ನೋಯಿಸುವುದು ಎಷ್ಟು ಸರಿ. ರೈತರ ಪರ ನಿಲ್ಲಬೇಕಾದದ್ದು ನಮ್ಮೆಲ್ಲರ ಕರ್ತವ್ಯ. ಈ ರೀತಿ ಆಕ್ಷೇಪಾರ್ಹ ಹೇಳಿಕೆ ಮತ್ತೊಮ್ಮೆ ಮರುಕಳಿಸದಂತೆ ಎಚ್ಚರ ವಹಿಸಲಿ.

–ಪಿ ಸಿ ಕಂಗಾಣಿಸೋಮು, ಕ್ಯಾತಮಾರನಹಳ್ಳಿ, ಮೈಸೂರು

ಕಾರ್ಮಿಕರ ಮೇಲಿನ ದೌರ್ಜನ್ಯಕ್ಕೆ ಕೊನೆ ಇಲ್ಲವೆ?

ಮಾನ್ಯರೆ,

ರಾಮನಗರದ ರೇಷ್ಮೆ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕನೊಬ್ಬ ಕೆಲಸಕ್ಕೆ ಸರಿಯಾಗಿ ಬರುತ್ತಿಲ್ಲ ಎಂಬ ಕಾರಣಕ್ಕಾಗಿ ರೇಷ್ಮೆ ಕಾರ್ಖಾನೆಯ ಮಾಲೀಕ ಆತನ ಕಾಲಿಗೆ ಸರಪಳಿ ಕಟ್ಟಿ 9 ದಿನಗಳಿಂದ ಹಗಲು–ರಾತ್ರಿ ದುಡಿಸಿಕೊಳ್ಳುತ್ತಿದ್ದ ಘಟನೆ ಮಾಧ್ಯಮಗಳಲ್ಲಿ ವರದಿಯಾಗಿದೆ. ಇನ್ನೂ ಸಮಾಜದಲ್ಲಿ ಅಮಾನವೀಯ ಜೀತ ಪದ್ಧತಿ ಇದೆ ಎಂಬುದಕ್ಕೆ ಇದು ಒಂದು ಉದಾಹರಣೆ. ಇಂತಹ ನೂರಾರು ಪ್ರಕರಣಗಳು ತೆರೆ– ಮರೆಯಲ್ಲಿ ನಡೆಯುತ್ತಲೇ ಇವೆ. ಅಲ್ಲೊಂದು– ಇಲ್ಲೊಂದು ಇಂತಹ ಪ್ರಕರಗಳು ವರದಿಯಾಗುತ್ತವೆ. ಶ್ರೀರಂಗಪಟ್ಟಣ ಬಳಿ ಹಂಗರಹಳ್ಳಿಯಲ್ಲಿ ಕ್ವಾರಿ ಮಾಲೀಕ ಕೆಲಸಗಾರರು ಕದ್ದು ಹೋಗುತ್ತಾರೆಂದು, ಅವರ ಕಾಲಿಗೆ ಸರಪಳಿ ಕಟ್ಟಿ ದುಡಿಸಿಕೊಳ್ಳುತ್ತಿದ್ದನ್ನು ನಾವು ನೋಡಿದ್ದೇವೆ. ಕೆಲವು ಮಾಲೀಕರು, ಜಮೀನ್ದಾರರು, ಧಣಿಗಳಿಂದ ಕೂಲಿ ಕಾರ್ಮಿಕರ ಮೇಲೆ ನಡೆಯುವ ದಬ್ಬಾಳಿಕೆ, ದೌರ್ಜನ್ಯಕ್ಕೆ ಕೊನೆ ಇಲ್ಲವೇ.

–ಬೂಕನಕೆರೆ ವಿಜೇಂದ್ರ, ಕುವೆಂಪು ನಗರ, ಮೈಸೂರು

ಹರುಷವಿರಲಿ ಹೊಸ ವರ್ಷದಲಿ

ಮಾನ್ಯರೆ,

ಬಂದೇ ಬಂತು ಮತ್ತೇ ಮರಳಿ ಹೊಸ ವರ್ಷವು
ಲೆಕ್ಕಕ್ಕೆ ಸೇರಿ ಏರಿತು ವರ್ಷ ಬಾಳಿನ ಪುಟದಲಿ
ಹತ್ತಿರವಾಯಿತು ಕಾಲನ ಕರೆಗೆ ಮತ್ತೊಂದು ಮೈಲಿ, ಎಲ್ಲವ ಮರೆತೂ.....
ಕುಣಿದು ಕುಪ್ಪಳಿಸುವ ರಾತ್ರಿಯ ಮಜದ ಪರಿಯೇನು?
ಕುಡಿದು ತೂರಾಡುವ ಪಡ್ಡೇಹೈಕಳ ಆಲಿಂಗನ ಸುಖ!,
ಕಳೆದ ವರ್ಷ ಕಂಡ ಕನಸುಗಳು ನೆನಸಾದವೆ ತರುಣರೆ?,
ಬಿಡಿ ಬಿಡಿ ಆಗದಿದ್ದರೂ.....
ಹೊಸ ವರ್ಷದ ಹೊಸ ನಿರ್ಣಯಗಳಿಗೆ ಅದೇ ತುಡಿತ
ಹಳೆಯದು ಹಳಸಾಯಿತು ಹೊಸದರ ಹುಡುಕಾಟದಲಿ,
ಮತ್ತದೇ ಚಿಂತೆ ಮುಂದಿನ ಹೊಸ ವರ್ಷದ ಸ್ವಾಗತಕೆ
ಏಕೀ ತುಡಿತ ಏಕೀ ಭ್ರಮೆ ಯುವಕರೆ ಗುರಿ ಜೀವನಕಿರಲಿ,
ಕಡಿತಾ ತುಡಿತಾ ಮಿಡಿತಗಳೇಕೆ?, ಗುರಿ ಇರಲಿ ಸಾಧನೆಗೆ,
ಹೊಸಹೊಸತು ತರುವ ವರ್ಷ ಇದಾಗಲಿ, ಹೊಸ ವರ್ಷಕೆ
ನಮ್ಮಯ ಹರುಷ ಮುಗಿಲನು ಮುಟ್ಟಿ ಹುಟ್ಟಲಿ ನವಚೇತನ!.

–ಮಿರ್ಲೆ ಚಂದ್ರಶೇಖರ, ಮೈಸೂರು.



ಜೆ.ಬಿ.ರಂಗಸ್ವಾಮಿ
ನಿವೃತ್ತ ಪೊಲೀಸ್ ಅಧಿಕಾರಿ
ಮೊ: 94490–10009

ಪ್ರಸ್ತುತ

ನಾನೊಬ್ಬ ಶುದ್ಧ ಭಾರತೀಯ ಹಿಂದು!; ಶ್ರೀರಾಮನದೇ ಪ್ರೇರಣೆ!!


2023 ನನ್ನಲ್ಲೊಂದು ಅಗಾಧ ಬದಲಾವಣೆ ತಂದ ವರ್ಷ. ಯಾವುದನ್ನು ನಾನು ಎಂದು ಹೇಳಿಕೊಳ್ಳಲು ಮುಜಗರ, ಅವಮಾನ, ಅಸಹ್ಯ ಪಡುತ್ತಿದ್ದೆನೋ ಅದನ್ನು ಹೇಳಿಕೊಳ್ಳಲು ಇಂದು ಹೆಮ್ಮೆ ಅನ್ನಿಸುತ್ತಿದೆ. ನನ್ನ ಸ್ವಂತ ತಾಯಿಯನ್ನು ಅಮ್ಮಾ ಎಂದು ಕರೆಯುವಷ್ಟು ಈಗ ನಾಲಗೆ ತೇವವಾಗಿದೆ. ಆರ್ದ್ರಗೊಂಡಿದೆ.

ಅನೇಕ ದಶಕಗಳ ಕಾಲ ನಾನು ಕಮ್ಯುನಿಸ್ಟ್, ಸಮಾಜವಾದಿ, ವಿಚಾರವಾದಿ, ದೀನ ದಲಿತರನ್ನು ಮೇಲೆತ್ತುವ ಎಡಪಂಥೀಯ ಎಂಬೆಲ್ಲ ನಾನಾ ಹಣೆಪಟ್ಟಿಗಳಿಂದ ವಿಜೃಂಭಿತನಾಗಿದ್ದೆ. ಈ ನೆಪದಲ್ಲಿ ಹಿಂದೂ ಧರ್ಮದ, ಇತಿಹಾಸ, ಪರಂಪರೆ, ಆಚಾರ, ವಿಚಾರ, ನಂಬಿಕೆ, ಶ್ರದ್ಧೆಗಳನ್ನೆಲ್ಲಾ ಲೇವಡಿ ಮಾಡಿದ್ದೇ ಮಾಡಿದ್ದು. ಕಾಲ ಸರಿದಂತೆ ಅನುಭವ, ಅಧ್ಯಯನ, ಪ್ರವಾಸ ವಿಸ್ತರಿಸಿದಂತೆ ಕಣ್ಣಿನ ಪೊರೆ ಕಳಚಿತು. ನೋಡುವ ದೃಷ್ಟಿ ಮಾರ್ಪಾಡಾಯಿತು.

ಎಂಬತ್ತರ ದಶಕದಲ್ಲಿ ರಾಮಮಂದಿರ ಕಟ್ಟಲು ಇಟ್ಟಿಗೆ ಯಾತ್ರೆ ಶುರು ಮಾಡಿದರಲ್ಲಾ, ಅದೆಲ್ಲವೂ ದೇಶದ ಐಕ್ಯತೆ, ಒಗ್ಗಟ್ಟನ್ನು ಒಡೆಯುವ ಹುನ್ನಾರ ಎಂದೇ ತೋರಿತ್ತು. ಆ ಕುರಿತ ನಾನಾ ಟೀಕೆಗಳು ನನ್ನವೂ ಆಗಿದ್ದವು. ಆದರೆ ಆ ಹೋರಾಟಗಳು ನಿನ್ನೆ ಮೊನ್ನೆಯದಲ್ಲ. ಐನೂರು ವರ್ಷಗಳಿಂದ ಸಾಗಿ ಬಂದದ್ದು. ದಬ್ಬಾಳಿಕೆ, ದೌರ್ಜನ್ಯಗಳಿಂದ ನೊಂದು ಬೆಂದಿದ್ದ ಜನಗಳ ಆರ್ತತೆಯ ಕೂಗು ಅದಾಗಿತ್ತು. ಆ ಜನಗಳಿಗೆ ಯಾವುದೇ ರಾಜಕೀಯ ಲಾಭದ ಆಸೆಗಳು ಇರಲಿಲ್ಲ. ತಮ್ಮ ಪೂರ್ವಿಕರ ಮೇಲೆ ನಡೆದ ಕ್ರೌರ್ಯದ ಬರೆಗಳನ್ನು ಅವರ‍್ಯಾರೂ ಮರೆತಿರಲಿಲ್ಲ. ಕುಟುಂಬಗಳೇ ಸರ್ವನಾಶವಾಗಿದ್ದವು. ಜೀವಿತವಿಡೀ ಕೊರಗಿ ನರಳಿ ಸತ್ತವರ ಆತ್ಮಕ್ಕೆ ಶಾಂತಿ ದೊರಕಿಸಬೇಕಿತ್ತು. ನೆಲ ಸಮವಾದ ಜಾಗದಲ್ಲೇ ದೇವಾಲಯ ಕಟ್ಟಿದರೆ ಅವರಿಗೆ ಶಾಂತಿ ಸಿಕ್ಕೀತೆಂಬ ಬಯಕೆ. ಹೋರಾಡಿ ದಕ್ಕಿಸಿಕೊಳ್ಳೋಣವೆಂದರೆ ಇವರೇ ವಿದೇಶಿಯರ ಗುಲಾಮರು. ದೈನೇಸಿ ಬದುಕು. ನಿರಾಶ್ರಿತ ಸ್ಥಿತಿ. ಆದರೂ ತಮ್ಮ ಅಸ್ಮಿತೆ ಅಸ್ತಿತ್ವ ಉಳಿಸಿಕೊಳ್ಳುವ ಆಕಾಂಕ್ಷೆ ನಿಲ್ಲಲಿಲ್ಲ. ಆಗೀಗ ದಂಗೆ ಎದ್ದರೂ ಒಡೆದಾಳುವ ಅಧಿಕಾರಸ್ಥರು ಅದನ್ನು ಹೊಸಕಿ ಹಾಕಿದ್ದರು.

ಸ್ವಾತಂತ್ರ್ಯ ಬಂದ ಮೇಲಾದರೂ ನಮ್ಮ ಪೂರ್ವಿಕರ ಪೂಜಾಸ್ಥಳಗಳು ಸಿಕ್ಕಬಹುದೇ, ಅವರ ಆತ್ಮಗಳಿಗೆ ಶಾಂತಿ ದೊರಕಿಸಬಹುದೇ ದಾರುಣ ಅತ್ಯಾಚಾರಕ್ಕೆ ತುತ್ತಾಗಿ ಅಗ್ನಿಪ್ರವೇಶ ಮಾಡಿದ್ದ ಅಸಹಾಯಕ ತಾಯಂದಿರ ಆಕ್ರಂದನಕ್ಕೆ ಮುಕ್ತಿ ದೊರಕಿಸಬೇಕಿತ್ತು. ರಾಮಲಲ್ಲಾನ ಪ್ರತಿಷ್ಠಾಪನೆ ಮಾಡಿದರೆ ಶಾಂತಿ ಸಿಕ್ಕಾತು. ಹೋರಾಟ ನಡೆಯಿತು. ಅವುಗಳನ್ನು ಅಲ್ಲಲ್ಲೇ ಹೊಸಕಿ ಹಾಕಿದರು. ಐನೂರು ವರ್ಷದ ಅವಧಿಯಲ್ಲಿ ಹೋರಾಟಗಳು ನಿಲ್ಲಲಿಲ್ಲ. 20–30 ವರ್ಷಗಳಿಗೆ ಒಂದಿಲ್ಲೊಂದು ದಂಗೆ ನಡೆಯುತ್ತಲೇ ಇತ್ತು. "ರಾಮ–ಕೃಷ್ಣ" ಇಬ್ಬರೂ ಈ ದೇಶದ ಅಸ್ಮಿತೆಗಳು. ಇವರಿಬ್ಬರ ಜನ್ಮಸ್ಥಾನಗಳ ಮೇಲೂ ದಬ್ಬಾಳಿಕೆ, ದೌರ್ಜನ್ಯ ನಡೆದಿತ್ತು. ಅವುಗಳ ಮೇಲೇ ಕಟ್ಟಡ ಕಟ್ಟಿದ್ದರು. ಅವು ನಿತ್ಯ ನೋಡುವ ಅವಮಾನಕರ ಸ್ಮಾರಕಗಳಾಗಿದ್ದವು. ಸ್ವಾತಂತ್ರ್ಯ ಬಂದಾಗ ಕೂಗು ಜೀವತಳೆದು ಜೋರಾಯಿತು. ಅವುಗಳನ್ನು ಕೆಡವಿದರೆ ದೇಶಾದ್ಯಂತ ದೊಡ್ಡ ಗಲಭೆ, ದಂಗೆಯಾಗುತ್ತದೆ ಎಂದು ಯಾವ ಸರ್ಕಾರವೂ ತೆರವಿಗೆ ಮುಂದಾಗಲಿಲ್ಲ.

ಕೊನೆಗೆ ಉಳಿದದ್ದು ಕೋರ್ಟಿನಲ್ಲಿ ಕಾನೂನು ಬದ್ಧ ಹೋರಾಟ. ನಾನಾ ಐತಿಹಾಸಿಕ ಸಮಸ್ತ ಸಾಕ್ಷ್ಯಾಧಾರಗಳನ್ನು ಒದಗಿಸಿದ ಮೇಲೆ ಕೋರ್ಟು ಅಸ್ತು ಎಂದಿತು. ಇಷ್ಟೆಲ್ಲ ಆಗಲು ಬರೋಬ್ಬರಿ ಐನೂರು ವರ್ಷ ಹಿಡಿಯಿತು. ಹದಿನೇಳು ವರ್ಷಗಳ ಹಿಂದೆ ಅಯೋಧ್ಯೆಗೆ ಹೋಗಿದ್ದೆ. ಒಂದಷ್ಟು





> ಈ ದೇಶವನ್ನು ಜಾತಿ ಜಾತಿಯಿಂದ ಒಡೆಯಬಹುದು. ಆದರೆ ಧರ್ಮವನ್ನು ಒಡೆಯಲಾಗದು. ಹಿಂದೂಧರ್ಮ ಇಡೀ ಭಾರತೀಯರಲ್ಲಿ ಅಡಗಿದೆ, ಹುದುಗಿದೆ. ಆ ಶ್ರದ್ಧೆಯನ್ನು ಮಾತ್ರ ಛಿದ್ರಗೊಳಿಸಲಾಗದು, ವಿಭಜಿಸಲಾಗದು. ಈಗ ಎಲ್ಲೆಡೆಯಿಂದ ಸಾಗರದಂತೆ ಹರಿದುಬರುತ್ತಿರುವ ದೇಣಿಗೆಗಳನ್ನು ಅರಗಿಸಿಕೊಳ್ಳಲು ಟ್ರಸ್ಟಿಗೇ ಸಾಧ್ಯವಾಗುತ್ತಿಲ್ಲವಂತೆ. ರಾಮಸೇತು ಕಟ್ಟುವಾಗಿನ ಅಳಿಲು ಸೇವೆಯ ನೀತಿಯನ್ನು ಜನಸಾಮಾನ್ಯ ಮರೆತಂತಿಲ್ಲ. ಇಲ್ಲದಿದ್ದರೆ ನಮ್ಮದೂ ಒಂದು ಕಾಣಿಕೆ ಹಾಕೋಣ ಎಂಬ ಪ್ರೇರಣೆ ಬರುತ್ತಿರಲಿಲ್ಲ. ಶ್ರೀರಾಮನ ಮೂಲಕ ಹಿಂದೂಗಳು ತಮ್ಮ ಜಾತಿ ಜಾತಿಗಳನ್ನು ಮರೆತು ಒಂದಾಗುತ್ತಾರೆ ಎಂದರೆ ಅದಕ್ಕಿಂತ ಸಂತಸದ ಸಂಗತಿ ಮತ್ತಾವುದು? ಯಾವೆಲ್ಲ ನೀತಿ ಕತೆ ಹೇಳಿದರೂ ಭಾರತೀಯರೆಲ್ಲ ನಾವೆಲ್ಲರೂ ಒಂದು ಎಂಬ ಕನಿಷ್ಠ ಭಾವವೂ ಮೂಡದಿರುವಾಗ ಅಯೋಧ್ಯೆಯ ರಾಮ ನಮ್ಮೆಲ್ಲರನ್ನೂ ಬೆಸೆಯುತ್ತಿದ್ದಾನೆ ಎಂಬುದೇ ಆಶ್ಚರ್ಯಕರ ಸಂಗತಿ.

ಜಾಗದಲ್ಲಿ ಕಲ್ಲುಗೆಲಸ ಕ್ಷೀಣವಾಗಿ ನಡೆಯುತ್ತಿತ್ತು. ಭಿಕ್ಷುಕರಂತಿದ್ದ ಕೊಳಕು ಬಟ್ಟೆಯ ಗಡ್ಡದ ನಾಮಧಾರಿಗಳು ಬಿಸಿಲಿನಲ್ಲಿ ಉಸ್ತುವಾರಿ ಮಾಡುತ್ತಾ ನಿಂತಿದ್ದರು. ದೇಶದ ನಾನಾ ಭಾಗಗಳಿಂದ ಬಂದು ಒಟ್ಟಿದ್ದ ಇಟ್ಟಿಗೆಗಳು ಪಾಚಿಗಟ್ಟಿದ್ದವು.

ಇವರೆಲ್ಲಾ ಮಂದಿರವನ್ನು ಈ ಕಾಲಕ್ಕೆ ಕಟ್ಟಿ ಮುಗಿಸುತ್ತಾರಾ?. ಅಷ್ಟರಲ್ಲಿ ಯಾವನೋ ತಲೆಕೆಟ್ಟ ಉಗ್ರನೊಬ್ಬ ಮಂದಿರವನ್ನೇ ಉಡಾಯಿಸುತ್ತಾನೆ. ಪುನಃ ಗಲಭೆ ಶುರುವಾಗುತ್ತದೆ. ಈ ಶತಮಾನವಿರಲಿ ಇನ್ನೈದು ಕಳೆದರೂ ಪೂರ್ಣಗೊಳ್ಳೋದಿಲ್ಲ ಎಂದು ಮೂಗು ಮುರಿದಿದ್ದೆ.

2018ಕ್ಕೆ ಹೋದಾಗಲೂ ನಿರ್ಮಾಣ ಇದ್ದಂತೆಯೇ ಇತ್ತು. ಟ್ರಸ್ಟಿನವರು ಏನೇ ಒದ್ದಾಡಿದರೂ ಧನ ಸಂಗ್ರಹವಾಗುತ್ತಿಲ್ಲ. ಜನ ಇವರನ್ನು ನಂಬುತ್ತಿಲ್ಲ. ಯಾರಿಗೂ ಆಸಕ್ತಿಯೇ ಇಲ್ಲ. ಕೇವಲ ದುಡ್ಡು ಹೊಡೆಯುವ ಟ್ರಸ್ಟ್ ಇದಾಗಿದೆ ಎಂದರು ಕೆಲವರು. ಹಿಂದೂಧರ್ಮದ ಯೋಗ್ಯತೆಯೇ ಇಷ್ಟು. ಯಾವನಿಗೂ ಇದು ತನ್ನ ದೇಶ, ತನ್ನ ಧರ್ಮ ಎಂಬ ಅಭಿಮಾನವೇ ಇಲ್ಲದಿರುವಾಗ ಈ ಕಾಲಕ್ಕೆ ಇದು ಮುಗಿಯೋದಿಲ್ಲ. ಬಿಜೆಪಿಯ ಎಲೆಕ್ಷನ್ ಸ್ಟಂಟಿಗೆ ಇದೊಂದು ದಾಳ ಅಷ್ಟೇ ಎಂದು ಹಿಂತಿರುಗಿದೆ.

2024ರ ಜನವರಿ 22ಕ್ಕೆ ಪ್ರಾರಂಭೋತ್ಸವವಂತೆ ಎಂದಾಗ ವ್ಯಂಗ್ಯಭರಿತ ಕಿರುನಗೆ ಮೂಡಿತು. ಇದೇ ಸ್ಟಂಟನ್ನು ಇನ್ನೂ ಎಷ್ಟು ದಿನಾ ಅಂತ ಮಾಡ್ತಾರೋ? ಇತ್ತೀಚೆಗೆ ಟೀವಿಗಳಲ್ಲಿ ನಿತ್ಯದ ಪ್ರಗತಿ ವರ್ಣರಂಜಿತವಾಗಿ ಬಿತ್ತರವಾಗುತ್ತಿದೆ. ನಾಲ್ಕು ಸಾವಿರ ಕೋಟಿಗೂ ಮಿಕ್ಕಿ ದೇಣಿಗೆ ದಿಕ್ಕು ದಿಕ್ಕುಗಳಿಂದ ಹರಿದು ಬರುತ್ತಿದೆಯಂತೆ. ಯಾವ್ಯಾವುದೋ ಮೂಲೆ ಊರುಗಳ ಒಬ್ಬೊಬ್ಬ ವ್ಯಕ್ತಿ ಗಂಟೆಗಳನ್ನೋ, ಕಂಭಗಳನ್ನೋ, ಗೋಪುರವನ್ನೋ ನಿರ್ಮಿಸುವ ಜವಾಬ್ದಾರಿ ಹೊತ್ತಿರುವ ಕಥೆಗಳನ್ನು ಕೇಳುತ್ತಿದ್ದಂತೆ ದಿಗ್ಭ್ರಮೆಯಾಗುತ್ತಿದೆ. ಜನಮಾನಸದಲ್ಲಿ ಹುದುಗಿರುವ ರಾಮಭಕ್ತಿ ಇಷ್ಟು ಆಳವಾಗಿದೆಯೇ? ನಿಜಕ್ಕೂ ಆಶ್ಚರ್ಯಕರ. ಇವೆಲ್ಲವನ್ನೂ ನೋಡ ನೋಡುತ್ತ ನಾನೂ ಹಿಂದೂ ಎಂಬುದು ನೆನಪಾಗುತ್ತಿದೆ. ಶ್ರೀರಾಮಚಂದ್ರ ನಮ್ಮೆಲ್ಲರ ಆದರ್ಶ ಪುರುಷ ಎಂದು ನನಗೇ ಅನ್ನಿಸತೊಡಗಿದೆ!.

ಈ ದೇಶವನ್ನು ಜಾತಿ ಜಾತಿಯಿಂದ ಒಡೆಯಬಹುದು. ಆದರೆ ಧರ್ಮವನ್ನು ಒಡೆಯಲಾಗದು. ಹಿಂದೂಧರ್ಮ ಇಡೀ ಭಾರತೀಯರಲ್ಲಿ ಅಡಗಿದೆ, ಹುದುಗಿದೆ. ಆ ಶ್ರದ್ಧೆಯನ್ನು ಮಾತ್ರ ಛಿದ್ರಗೊಳಿಸಲಾಗದು, ವಿಭಜಿಸಲಾಗದು. ಈಗ ಎಲ್ಲೆಡೆಯಿಂದ ಸಾಗರದಂತೆ ಹರಿದುಬರುತ್ತಿರುವ ದೇಣಿಗೆಗಳನ್ನು ಅರಗಿಸಿಕೊಳ್ಳಲು ಟ್ರಸ್ಟಿಗೇ ಸಾಧ್ಯವಾಗುತ್ತಿಲ್ಲವಂತೆ. ರಾಮಸೇತು ಕಟ್ಟುವಾಗಿನ ಅಳಿಲು ಸೇವೆಯ ನೀತಿಯನ್ನು ಜನಸಾಮಾನ್ಯ ಮರೆತಂತಿಲ್ಲ. ಇಲ್ಲದಿದ್ದರೆ ನಮ್ಮದೂ ಒಂದು ಕಾಣಿಕೆ ಹಾಕೋಣ ಎಂಬ ಪ್ರೇರಣೆ ಬರುತ್ತಿರಲಿಲ್ಲ. ಶ್ರೀರಾಮನ ಮೂಲಕ ಹಿಂದೂಗಳು ತಮ್ಮ ಜಾತಿ ಜಾತಿಗಳನ್ನು ಮರೆತು ಒಂದಾಗುತ್ತಾರೆ ಎಂದರೆ ಅದಕ್ಕಿಂತ ಸಂತಸದ ಸಂಗತಿ ಮತ್ತಾವುದು? ಯಾವೆಲ್ಲ ನೀತಿ ಕತೆ ಹೇಳಿದರೂ ಭಾರತೀಯರೆಲ್ಲ ನಾವೆಲ್ಲರೂ ಒಂದು ಎಂಬ ಕನಿಷ್ಠ ಭಾವವೂ ಮೂಡದಿರುವಾಗ ಅಯೋಧ್ಯೆಯ ರಾಮ ನಮ್ಮೆಲ್ಲರನ್ನೂ ಬೆಸೆಯುತ್ತಿದ್ದಾನೆ ಎಂಬುದೇ ಆಶ್ಚರ್ಯಕರ ಸಂಗತಿ. ಇದರಿಂದ ಬಿಜೆಪಿಗೆ ರಾಜಕೀಯ ಲಾಭವಾಗುತ್ತದೆ ಎಂಬುದು ವಿಪಕ್ಷಗಳ ಹೊಟ್ಟೆಯುರಿ. ಆಗುತ್ತೋ ಬಿಡುತ್ತೋ ಅದು ಮತದಾರನ ತೀರ್ಮಾನ.

ರಾಮಮಂದಿರದ ಜಾಗವನ್ನು ಹೋರಾಡಿ ಗೆದ್ದಿರೋದು, ಧನ ಸಂಗ್ರಹಿಸಿ ದೇವಾಲಯ ಕಟ್ಟಿರೋದು ಅದರ ಟ್ರಸ್ಟ್. ಅದರಲ್ಲಿಯ ಸಂತರು, ಕರಸೇವಕರು, ಭಜರಂಗಿ, ವಿಹಿಂಪ ಮುಂತಾದವರು. ಹೆಚ್ಚಿನವರಿಗೆ ಬಿಜೆಪಿ ಒಲವಿದ್ದರೂ ಮೂಲತಃ ಅವರೆಲ್ಲರೂ ಹಿಂದೂಭಕ್ತರು. ಶ್ರೀ ರಾಮನ ಆರಾಧಕರು. ಅದೇ ಅವರ ಆದ್ಯತೆ. ಬಿಜೆಪಿಯಲ್ಲ. ಅವರ ಜೀವನದ ಏಕೈಕ ಗುರಿ ರಾಮ ಮಂದಿರ ನಿರ್ಮಾಣ. ಹಿಂದೂಗಳ ಭಾವೈಕ್ಯ. ಅದಕ್ಕಾಗಿ ತುಡಿತ. ಮಿಡಿತ. ದುಡಿತ. ಈ ಭಾವನೆಯನ್ನು ಬಿಜೆಪಿ ಎನ್‌ಕ್ಯಾಶ್ ಮಾಡಿಕೊಳ್ಳುತ್ತದೆ ಎಂಬ ಆತಂಕ ವಿಪಕ್ಷಗಳದ್ದು. ಆದ್ದರಿಂದ ಎಲ್ಲರೂ ರಾಮಮಂದಿರದ ಆಹ್ವಾನವನ್ನು ತಿರಸ್ಕರಿಸಿದ್ದಾರೆ. ತನ್ಮೂಲಕ ಅನ್ಯ ಜಾತಿಗಳ ಮತವನ್ನು ಸೂರೆ ಹೊಡೆಯಬಹುದು ಎಂಬ ಲೆಕ್ಕಾಚಾರ. ಯಾರ.. ಯಾರ... ತಂತ್ರ–ಕುತಂತ್ರಗಳು ಎಷ್ಟೆಷ್ಟು ಫಲ ಕೊಡುತ್ತೋ ನಮಗದು ಬೇಕಿಲ್ಲ. ಯಾವುದೇ ಪಕ್ಷ ಬಂದರೂ ದೇಶವನ್ನು ಕೆರೆ ಕೆರೆದು ಗೋರುವುದೇ ಘನೋದ್ದೇಶ. ಅವರ ದೋಚುವ, ಬಾಚುವ ಕೆಲಸ ಅವರು ಮಾಡಲಿ. ಆದರೆ ಮಂದಿರದ ಈ ನೆಪದಲ್ಲಿ ಹಿಂದೂಗಳು ಒಂದಾದರಲ್ಲ. ಅದಷ್ಟೇ ಮುಖ್ಯ ನಮ್ಮಂಥವರಿಗೆ. ಈ ಒಗ್ಗಟ್ಟನ್ನು ಜಾತಿಯ ವಿಷಬೀಜಗಳು ಬತ್ತಿಸದಿರಲಿ.

ಬಾಲಂಗೋಚಿ

2024ರ ಜನವರಿ 24ನೇ ತಾರೀಖು ಮುಂಬೈ–ಗೋವಾ–ತಿರುವನಂತಪುರಂ ಕ್ರೂಸ್ ಹೋಗುವುದೆಂದು ಅಂತಿಮ ತೀರ್ಮಾನವಾಗಿತ್ತು. ನನ್ನ ಪತ್ನಿಯೊಂದಿಗೆ ಹೀಗೇ ಮಾತಾಡುತ್ತಾ ಕುಳಿತಿದ್ದೆ. ಬೆಂಗಳೂರಿನ ಉದ್ಯಮಿಯೊಬ್ಬರು 24 ಬೃಹತ್ ಗಂಟೆಗಳನ್ನು ರಾಮಮಂದಿರಕ್ಕೆ ಕಳುಹಿಸಿಕೊಟ್ಟ ಸುದ್ದಿ ಟೀವಿಯಲ್ಲಿ ಬರುತ್ತಿತ್ತು. ನಮ್ಮ ಕ್ರೂಸ್‌ನ ಅದೇ ದುಡ್ಡನ್ನು ರಾಮಮಂದಿರಕ್ಕೆ ಕೊಡಬಾರದೇಕೇ? ಎಂದು ನಮ್ಮಿಬ್ಬರಿಗೂ ಅನ್ನಿಸಿತು. ಯಾರ ಬೋಧನೆಯೂ ಇಲ್ಲ. ಚಿತಾವಣೆಯೂ ಇಲ್ಲ. ಕ್ರೂಸ್ ಪ್ರವಾಸ ತಂತಾನೇ ರದ್ದಾಯಿತು. ಶ್ರೀರಾಮನದೇ ಪ್ರೇರೇಪಣೆ! ಸದ್ಯ ನಾನೊಬ್ಬ 'ಶುದ್ಧ ಭಾರತೀಯ ಹಿಂದು' ಎಂಬುದು ನನಗೇ ಅರಿವಾಯಿತಲ್ಲ?!

ಯೋಗಕ್ಕೆ ಆಧುನಿಕ ಸ್ಪರ್ಶ ನೀಡಿದವರು ಡಾ.ಬಿಕೆಎಸ್ ಅಯ್ಯಂಗಾರ್

ಮೈಸೂರು,ಡಿ.28(ಎಂಕೆ)–ಕಠಿಣ ಪರಿಶ್ರಮ ಹಾಗೂ ಅರ್ಪಣಾ ಮನೋಭಾವದಿಂದ ಯೋಗಕ್ಕೆ ಆಧುನಿಕತೆಯ ಸ್ಪರ್ಶ ನೀಡಿದ ಯೋಗಗುರು ಡಾ.ಬಿಕೆಎಸ್ ಅಯ್ಯಂಗಾರ್ ಎಲ್ಲರಿಗೂ ಪ್ರೇರಣೆಯಾಗಿದ್ದಾರೆ ಎಂದು ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಹೇಳಿದರು.

ಮೈಸೂರಿನ ಕೆಆರ್‌ಎಸ್ ರಸ್ತೆಯಲ್ಲಿರುವ ಸರ್ಕಾರಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಕಾಲೇಜಿನ ಪತಂಜಲಿ ಸಭಾಂಗಣದಲ್ಲಿ ಹಿಮಾಲಯ ಪ್ರತಿಷ್ಠಾನ ವತಿಯಿಂದ ಆಯೋಜಿಸಿದ್ದ ಯೋಗಗುರು ಡಾ.ಬಿ.ಕೆ.ಎಸ್.ಐಯ್ಯಂಗಾರ್ ಸಂಸ್ಮರಣೋತ್ಸವ ಕಾರ್ಯಕ್ರಮದಲ್ಲಿ ಯೋಗ ಶಿಕ್ಷಕ ಎನ್.ಅನಂತ ಸಂಪಾದಿತ 'ಯೋಗಭೀಷ್ಮ' ಕೃತಿ ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.


ಸಾಮಾನ್ಯವಾಗಿ ಯೋಗ ಸಾಧನೆಯಲ್ಲಿ ಉತ್ತುಂಗಕ್ಕೆ ಏರಿದವರೆಲ್ಲಾ ಒಂದು ಕಾಲದಲ್ಲಿ ರೋಗಿಗಳಾಗಿ ಕಷ್ಟ–ಕಾರ್ಪಣ್ಯ ಅನುಭವಿಸಿದವರಾಗಿದ್ದು, ಬಿಕೆಎಸ್ ಅಯ್ಯಂಗಾರ್ ಅವರು ಕೂಡ ಒಂದು ಕಾಲದಲ್ಲಿ ರೋಗಿಯಾಗಿದ್ದರು. ರೋಗದಿಂದ ಬಿಡುಗಡೆ ಹೊಂದಲು ಯೋಗದ ಮೊರೆ ಹೋಗಿ, ಸತತ ಸಾಧನೆಯಿಂದ ಆರೋಗ್ಯವಂತರಾದರಲ್ಲದೆ ಯೋಗದ ಮಹತ್ವವನ್ನು ಜನತೆಗೆ ಸಾರುವ ಮೂಲಕ ಯೋಗಾಚಾರ್ಯರಾದರು ಎಂದು ಸ್ಮರಿಸಿದರಲ್ಲದೆ ಯೋಗ ಶಿಕ್ಷಕ ಎನ್.ಅನಂತ ಅವರ 'ಯೋಗಭೀಷ್ಮ' ಕೃತಿಯಲ್ಲಿ ಬಿಕೆಎಸ್ ಅಯ್ಯಂಗಾರ್ ಅವರ ಬಗ್ಗೆ ಅತ್ಯುತ್ತಮ ಮಾಹಿತಿಗಳನ್ನು ಕಲೆಹಾಕಿದ್ದಾರೆ ಎಂದು ಶ್ಲಾಘಿಸಿದರು.



ಸಮಾಜಸೇವಕ ಡಾ.ಕೆ.ರಘುರಾಮ್ ವಾಜಪೇಯಿ ಮಾತನಾಡಿ, ಮೈಸೂರು ಕೃಷ್ಣಮಾಚಾರ್ಯರ ಯೋಗ ಪರಂಪರೆಯಿಂದ ಬಂದ ಬಿಕೆಎಸ್ ಅಯ್ಯಂಗಾರ್, ತಮ್ಮದೇ ಆದ ಹೊಸ ಶೈಲಿಯಿಂದ ಜನಮಾನಸಗೊಂಡರು. ಇಂದಿಗೂ ಅಯ್ಯಂಗಾರ್ ಯೋಗ ಎಂಬುದು ಪ್ರಸಿದ್ಧವಾಗಿದೆ ಎಂದರು. ಇದಕ್ಕೂ ಮುನ್ನ ಯೋಗ ಗುರು ಬಿಕೆಎಸ್ ಅಯ್ಯಂಗಾರ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು. ಅಂತರಾಷ್ಟ್ರೀಯ ಯೋಗ ಗುರು ಡಾ.ರಮೇಶ್ ಶೆಟ್ಟಿ, ಯೋಗರಾದ ಶಿಕ್ಷಕ ಎಂ ಮಲ್ಲೇಶ್, ಎನ್.ಅನಂತ, ಡಾ.ಹರಿ ಗಣೇಶ್, ಡಾ.ಸಂದೀಪ್ ಮತ್ತಿತರರು ಉಪಸ್ಥಿತರಿದ್ದರು.

ಕಲ್ಲಡ್ಕ ಪ್ರಭಾಕರ್ ಭಟ್‌ಗೆ ಮಧ್ಯಂತರ ಜಾಮೀನು

ಶ್ರೀರಂಗಪಟ್ಟಣ,ಡಿ.28–ಆರ್‌ಎಸ್‌ಎಸ್ ಮುಖಂಡ ಕಲ್ಲಡ್ಕ ಪ್ರಭಾಕರ್ ಭಟ್ ಅವರಿಗೆ ಶ್ರೀರಂಗಪಟ್ಟಣದ 3ನೇ ಅಪರ ಜಿಲ್ಲಾ ಸತ್ರ ನ್ಯಾಯಾಲಯ ಗುರುವಾರ ಮಧ್ಯಂತರ ಜಾಮೀನು ನೀಡಿದೆ. ಡಿ.24ರಂದು ಪಟ್ಟಣದ ಗಂಜಾಂನ ನಿಮಿಷಾಂಬ ದೇವಸ್ಥಾನದ ಬಳಿ ನಡೆದ ಹನುಮ ಮಾಲಾಧಾರಿಗಳ ಸಂಕೀರ್ತನಾ ಯಾತ್ರೆಯಲ್ಲಿ ಕಲ್ಲಡ್ಕ ಪ್ರಭಾಕರ್ ಭಟ್ ಒಂದು ಸಮುದಾಯದ ಮಹಿಳೆಯರ ವಿಚಾರವಾಗಿ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ ಎಂದು ಆರೋಪಿಸಿ ಸಾಮಾಜಿಕ ಕಾರ್ಯಕರ್ತೆ ಪಿರಿಯಾಪಟ್ಟಣ ತಾಲೂಕಿನ ಚಿಕ್ಕನೇರಳೆ ಗ್ರಾಮದ ನಜ್ಮಾ ನಜೀರ್ ಪಟ್ಟಣ ಪೊಲೀಸ್ ಠಾಣೆಗೆ ದೂರು ನೀಡಿದ್ದರು.



ವಕೀಲರಾದ ಚಂದ್ರೇಗೌಡ ಹಾಗೂ ಯೋಗಾನಂದ ಅವರು ಪ್ರಭಾಕರ್ ಭಟ್ ಪರ ನ್ಯಾಯಾಲಯದಲ್ಲಿ ಜಾಮೀನು ಅರ್ಜಿ ಸಲ್ಲಿಸಿದ್ದರು. ನ್ಯಾಯಾಧೀಶರಾದ ಗೋಪಾಲಕೃಷ್ಣ ರೈ ಮಧ್ಯಂತರ ಜಾಮೀನು ನೀಡಿ, ಪೊಲೀಸರು ಬಂಧಿಸದಂತೆ ಸೂಚಿಸಿದ್ದಾರೆ. ಮುಂದಿನ ವಿಚಾರಣೆಯನ್ನು ಜನವರಿ 3ಕ್ಕೆ ಮುಂದೂಡಲಾಗಿದೆ.

ಪ್ರಕಾಶ್ ಜ್ಯುವೆಲರ್ಸ್‌ನ 59ನೇ ವಾರ್ಷಿಕೋತ್ಸವ ಕೊಡುಗೆ

ಮೈಸೂರು, ಡಿ.29– ಪ್ರಕಾಶ್ ಜ್ಯುವೆಲರ್ಸ್ ತನ್ನ 59ನೇ ವಾರ್ಷಿಕೋತ್ಸವದ ಅಂಗವಾಗಿ ಚಿನ್ನದ ಆಭರಣಗಳ ಮೇಲೆ 300 ರೂ.ಗಳ ರಿಯಾಯಿತಿ ವಿಶೇಷ ಕೊಡುಗೆ (ಷರತ್ತು ಮತ್ತು ನಿಬಂಧನೆಗಳು ಅನ್ವಯ) ಪ್ರಕಟಿಸಿದೆ.

1964ರಲ್ಲಿ ಪ್ರಾರಂಭವಾದ ಪ್ರಕಾಶ್ ಜ್ಯುವೆಲರ್ಸ್ ಗುಣಮಟ್ಟ, ನಾವಿನ್ಯತೆ ಮತ್ತು ಸಾಂಪ್ರದಾಯಿಕತೆಯ ಹೆಗ್ಗುರುತಾಗಿದೆ. ಚಿನ್ನ, ಬೆಳ್ಳಿ ಮತ್ತು ವಜ್ರದ ಆಭರಣಗಳಲ್ಲಿ ವಿಶೇಷತೆಯುಳ್ಳ ಪ್ರಕಾಶ್ ಜ್ಯುವೆಲರ್ಸ್, ಗ್ರಾಹಕ ಸ್ನೇಹಿ ಸೇವೆಯನ್ನು ಎಲ್ಲಾ



ಆಭರಣಗಳ ಮೂಲಕ ಕಲ್ಪಿಸುತ್ತಾ ಬಂದಿದೆ. ವಿಶೇಷ ವಿನ್ಯಾಸದ ಬಳೆಗಳು, ನೆಕ್ಲೆಸ್‌ಗಳು, ಚೈನ್‌ಗಳು, ಡಾಬು, ಜುಮ್ಕಿಗಳು ಆಕರ್ಷಕ ಬೆಲೆಗೆ ಲಭ್ಯವಿದೆ. ಇವುಗಳ ಗುಣಮಟ್ಟಕ್ಕೆ ಖಾತರಿಯೂ ಉಂಟು. ಇದರ ಜೊತೆಗೆ ಚಿನ್ನ ಮತ್ತು ವಜ್ರಾಭರಣಗಳು ಜೊತೆಗೆ ಬೆಳ್ಳಿ ಸಂಗ್ರಹಗಳಲ್ಲಿ ಸುಂದರವಾದ ಕ್ರಾಫ್ಟೆಡ್ ಬೌಲ್‌ಗಳು, ಪ್ರತಿಮೆಗಳು, ಪ್ಲೇಟ್ಸ್‌ಗೆ ಗ್ಲಾಸ್‌ವೇರ್‌ಗಳು ಕೂಡ ಲಭ್ಯವಿದೆ. ವಾರ್ಷಿಕೋತ್ಸವದ ವಿಶೇಷ ಕೊಡುಗೆಗಾಗಿ ಮೈಸೂರು ಶಿವರಾಂಪೇಟೆಯ ಪ್ರಕಾಶ್ ಜ್ಯುವೆಲರ್ಸ್‌ಗೆ ಭೇಟಿ ನೀಡಬಹುದು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ನಾರಾಯಣಗೌಡ ಬಂಧನ ಖಂಡಿಸಿ ಪ್ರತಿಭಟನೆ



ಮೈಸೂರು, ಡಿ.28(ಜಿಎ)–ಕರ್ನಾಟಕ ರಕ್ಷಣಾ ವೇದಿಕೆ (ಕರವೇ) ರಾಜ್ಯಾಧ್ಯಕ್ಷ ನಾರಾಯಣಗೌಡ ಹಾಗೂ ಸಂಘಟನೆಯ ಕಾರ್ಯಕರ್ತರನ್ನು ಬಂಧಿಸಿರುವುದನ್ನು ಖಂಡಿಸಿ ವೇದಿಕೆ ವತಿಯಿಂದ ಗಾಂಧಿ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.

ಬೆಂಗಳೂರಿನಲ್ಲಿ ಕಡ್ಡಾಯವಾಗಿ ಕನ್ನಡದ ನಾಮಫಲಕ ಅಳವಡಿಸಬೇಕೆಂದು ಒತ್ತಾಯಿಸಿ ನಡೆದ ಪ್ರತಿಭಟನೆಯಲ್ಲಿ ಕರವೇ ರಾಜ್ಯಾಧ್ಯಕ್ಷ ನಾರಾಯಣಗೌಡ ಹಾಗೂ ಇತರರನ್ನು ಬಂಧಿಸಿರುವುದನ್ನು ಖಂಡನೀಯ. ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮ ಭಾಷೆ. ಇಲ್ಲಿನ ಮಾಲ್‌ಗಳಲ್ಲಿ, ಅಂಗಡಿ, ಮುಂಗಟ್ಟುಗಳ ಮುಂದೆ ಫಲಕವನ್ನು ಕನ್ನಡದಲ್ಲೇ ಹಾಕಬೇಕು. ಈ ಕುರಿತು ಸರ್ಕಾರವೇ ನಿಯಮ ಜಾರಿಗೊಳಿಸಿದೆ. ಆದರೆ, ದೊಡ್ಡ ದೊಡ್ಡ ಮಾಲ್‌ಗಳಲ್ಲಿ ಕನ್ನಡ ಕಡೆಗಣಿಸಿ ಬೇರೆ ಬೇರೆ ಭಾಷೆಗಳಲ್ಲಿ ಫಲಕಗಳನ್ನು ಅಳವಡಿಸಿ ಕನ್ನಡ ಕಡೆಗಣಿಸಲಾಗಿದೆ. ಇದನ್ನು ಪ್ರಶ್ನಿಸಲು ಮುಂದಾದರೆ ನಮ್ಮ ಸಂಘಟನೆಯ ರಾಜ್ಯಾಧ್ಯಕ್ಷರನ್ನೇ ಬಂಧಿಸಲಾಗಿದೆ. ಕೂಡಲೇ ನಾರಾಯಣಗೌಡ ಸೇರಿದಂತೆ ಬಂಧಿತರೆಲ್ಲರನ್ನು ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿದರು. ಕರವೇ ಬೀದಿ ಕಾರ್ಮಿಕರ ಜಿಲ್ಲಾಧ್ಯಕ್ಷ ಸುನಂದ್ ಇತರರು ಪ್ರತಿಭಟನೆಯಲ್ಲಿದ್ದರು.

ಡಿ.31ಕ್ಕೆ ಮಾರ್ಗಶಿರ ಮನರಂಜನೆ



ಮೈಸೂರು,ಡಿ.28(ಜಿಎ)–ಮೈಸೂರಿನ ಅಜ್ಜನ ಮನೆ ಕಲಾ ಪ್ರಪಂಚ ಸಂಸ್ಥೆ ವತಿಯಿಂದ ಡಿ.31ರಂದು ನಗರದ ನಾದಬ್ರಹ್ಮ ಸಂಗೀತ ಸಭಾದಲ್ಲಿ ಮಾರ್ಗಶಿರ ಮನರಂಜನೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಂಸ್ಥೆಯ ಎನ್.ಕೃಷ್ಣ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 8 ಗಂಟೆಯಿಂದ ಕಾರ್ಯಕ್ರಮ ಆರಂಭವಾಗಲಿದ್ದು, ಮೈಸೂರಿನ 9 ವಿವಿಧ ಕಲಾ ಶಾಲೆಗಳ 100 ಮಕ್ಕಳಿಂದ 10 ಗಂಟೆಗಳ ಕಾಲ ವಿವಿಧ ಕಲಾ ಪ್ರದರ್ಶನ ನಡೆಯಲಿದೆ. ವಿದ್ಯಾರ್ಥಿಗಳು ವಾದ್ಯವೃಂದ, ಭರತನಾಟ್ಯ, ಸುಗಮ ಸಂಗೀತ, ತಬಲಾ ವಾದನ, ಮಂಗಳ ವಾದ್ಯ, ತಾಳವಾದ್ಯ, ಹರಿಕಥೆ, ಗಮಕವಾಚನ ಮತ್ತು ವ್ಯಾಖ್ಯಾನ ಜೊತೆಗೆ ವಿಶೇಷವಾಗಿ ನಗರದ ಸರ್ಕಾರಿ ಅಂಧ ಮಕ್ಕಳ ಶಾಲೆ ವಿದ್ಯಾರ್ಥಿಗಳು ಚಂಡೆವಾದನ ಪ್ರದರ್ಶಿಸಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸುಮಾ ಕೃಷ್ಣಮೂರ್ತಿ ಉಪಸ್ಥಿತರಿದ್ದರು.

ನಾಳೆ ಲಯನ್ಸ್‌ನಿಂದ ಸಂವಾದ



ಲಯನ್ಸ್ ಹೆಚ್.ಜಿ. ವಿಠ್ಠಲ ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿ, ಅಂದು ನಾಯಕತ್ವದ ಮೂಲಕ ಯಶಸ್ಸು ವಿಷಯದ ಕುರಿತು

ಮೈಸೂರು,ಡಿ.28(ಜಿಎ)–ಮೈಸೂರಿನ ಲಯನ್ಸ್ ಇಂಟರ್ ನ್ಯಾಷನಲ್ ಜಿಲ್ಲೆ 317ಜಿ ವತಿಯಿಂದ ಡಿ.30ರಂದು ನಗರದ ಚಿಕ್ಕಮ್ಮ ನಿಕೇತನ ಕಲ್ಯಾಣ ಮಂಟಪದಲ್ಲಿ ಏರ್ಪಡಿಸಿರುವ ಪ್ರಾದೇಶಿಕ 7ರ ಸದಸ್ಯರ ಭೇಟಿ ಕಾರ್ಯಕ್ರಮದಲ್ಲಿ ನಾಯಕತ್ವದ ಮೂಲಕ ಯಶಸ್ಸು ಕುರಿತು ಸಂವಾದ ಆಯೋಜಿಸಲಾಗಿದೆ ಎಂದು ಪ್ರಾದೇಶಿಕ ಅಧ್ಯಕ್ಷ ಫೋಕಸ್ ಅಕಾಡೆಮಿ ಸಂಸ್ಥಾಪಕ ಡಿ.ಟಿ. ರಾಮಾನುಜ ಮಾತನಾಡಲಿದ್ದಾರೆ. ಹಾಗೇ ಸಂಸ್ಥೆ ವತಿಯಿಂದ ಸರ್ಕಾರಿ ಶಾಲೆಗಳಲ್ಲಿ ನಿರ್ಮಿಸಿರುವ ಸಂಘ, ಆರ್‌ಓ ನೀರಿನ ಘಟಕದ ಉದ್ಘಾಟನೆ ಮಾಡಲಾಗುತ್ತದೆ ಎಂದರು. ಸುದ್ದಿಗೋಷ್ಠಿಯಲ್ಲಿ ಅರ್ಜುನ್, ಎಂ.ಎನ್.ಜಯಪ್ರಕಾಶ್, ವಿನೋದ್ ರಾಜಶೇಖರ್ ಉಪಸ್ಥಿತರಿದ್ದರು.



ಕೆ.ಎಂ.ನಮ್ರತಾಗೆ ಪಿಎಚ್.ಡಿ ಪದವಿ

ಮೈಸೂರು,ಡಿ.28–ಡಾ.ಎಂ.ಮಹದೇವಸ್ವಾಮಿ ಅವರ ಮಾರ್ಗದರ್ಶನದಲ್ಲಿ ಕೆ.ಎಂ.ನಮ್ರತಾ ಅವರು ಪ್ರಾಣಿಶಾಸ್ತ್ರ ವಿಷಯ ದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಮೈಸೂರು ಜಿಪಂ ಮಾಜಿ ಅಧ್ಯಕ್ಷೆ ನಯೀಮಾ ಸುಲ್ತಾನ ವಿಧಿವಶ

ಮೈಸೂರು, ಡಿ. 28 (ಆರ್‌ಕೆ)– ತೀವ್ರ ಅನಾರೋಗ್ಯದಿಂದ ಬಳಲುತ್ತಿದ್ದ ಮೈಸೂರು ಜಿಲ್ಲಾ ಪಂಚಾಯ್ತಿ ಮಾಜಿ ಅಧ್ಯಕ್ಷೆ ನಯೀಮಾ ಸುಲ್ತಾನ (58) ಅವರು ಗುರುವಾರ ಬೆಳಗ್ಗೆ ಹೆಚ್.ಡಿ.ಕೋಟೆ ಪಟ್ಟಣದಲ್ಲಿನ ತಮ್ಮ ಸ್ವಗೃಹದಲ್ಲಿ ನಿಧನರಾದರು.



ಮೃತರು ಪತಿ ನಜೀರ್ ಅಹಮದ್, ನಾಲ್ವರು ಪುತ್ರರು, ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಹೆಚ್.ಡಿ. ಕೋಟೆ ಪಟ್ಟಣದ ಕಬರಸ್ಥಾನದಲ್ಲಿ ಇಂದು ರಾತ್ರಿ 7.30 ಗಂಟೆಗೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹೆಚ್.ಡಿ.ಕೋಟೆ ಪುರಸಭೆ ಉಪಾಧ್ಯಕ್ಷರಾಗಿ, ಅಧ್ಯಕ್ಷೆಯಾಗಿ ಸೇವೆ ಸಲ್ಲಿಸಿದ್ದ ನಯೀಮಾ ಸುಲ್ತಾನ, 2016ರಿಂದ 3 ವರ್ಷಗಳ ಕಾಲ ಮೈಸೂರು ಜಿಲ್ಲಾ ಪಂಚಾಯ್ತಿ ಅಧ್ಯಕ್ಷರಾಗಿದ್ದರು. ಜಾತ್ಯಾತೀತ ಜನತಾ ದಳದ ಸಕ್ರಿಯ ಕಾರ್ಯಕರ್ತರಾಗಿದ್ದ ಅವರು ವಿವಿಧ ಸ್ಥಾನಗಳಲ್ಲಿ ಸೇವೆ ಸಲ್ಲಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ಶಾಸಕರು, ಮಾಜಿ ಶಾಸಕರು, ಜಿಲ್ಲಾ ಪಂಚಾಯ್ತಿ ಮಾಜಿ ಅಧ್ಯಕ್ಷರು, ಜೆಡಿಎಸ್ ಮುಖಂಡರು ಹಾಗೂ ವಿವಿಧ ರಾಜಕೀಯ ಪಕ್ಷಗಳ ಮುಖಂಡರು ನಯೀಮಾ ಸುಲ್ತಾನ ಅವರ ಅಂತಿಮ ದರ್ಶನ ಪಡೆದು ಶ್ರದ್ಧಾಂಜಲಿ ಸಲ್ಲಿಸಿದರು.

ಜಗದೀಶ್



ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅವರ ಪತ್ನಿ ಶ್ರೀಮತಿ ಕುಸುಮಾ ಸೋಮಶೇಖರ್ ಅವರ ಸಹೋದರ ಜಗದೀಶ್ ಅವರು ಇಂದು ನಿಧನರಾದರು. ಕುವೆಂಪುನಗರದ ಸ್ಮಶಾನದಲ್ಲಿ ಇವರ ಅಂತ್ಯಕ್ರಿಯೆ ಇಂದು ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮೃತರು ಸರಸ್ವತಿಪುರಂ ನಿವಾಸಿಯಾಗಿದ್ದು, ಪತ್ನಿ ಸುಗುಣ, ಪುತ್ರಿ ಭಾವನ ಸೇರಿದಂತೆ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ.



ವಾಣಿ ಪಿ. ರಾವ್

ಮೈಸೂರಿನ ಜಯಲಕ್ಷ್ಮಿಪುರಂ ನಿವಾಸಿ ಶಂಕರ್ ಪ್ರಸಾದ್ ಅವರ ಪತ್ನಿ ವಾಣಿ ಪಿ.ರಾವ್ (58) ಡಿ.26ರಂದು ನಿಧನರಾದರು. ಇವರು ಸೇಂಟ್ ಜೋಸೆಫ್ ಕಾಲೇಜಿನ ಮುಖ್ಯ ಗ್ರಂಥಾಪಾಲಕರಾಗಿ ಕಾರ್ಯನಿರ್ವಹಿಸಿದ್ದರು. ಅಲ್ಲದೆ ಇಲವಾಲದ ಸೇಂಟ್ ಜೋಸೆಫ್ ಶಾಲೆ ಮತ್ತು ಬಾಸುದೇವ ಸೋಮಾನಿ ಕಾಲೇಜಿನಲ್ಲೂ ಸೇವೆ ಸಲ್ಲಿಸಿದ್ದಾರೆ. ಮೈಸೂರಿನ ಆರ್‌ಐಇ ಸಂಸ್ಥೆಯಲ್ಲೂ ಬೋಧನಾ ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಮೃತರು ಪತಿ, ಇಬ್ಬರು ಪುತ್ರಿಯರು (ಗೌರಿ ನಾಡಿಗ್ ಮತ್ತು ಸುಹಾಸಿನಿ ನಾಡಿಗ್) ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಡಿ.26ರಂದು ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಜನಾಬ್ ಅಲ್ ಹಜ್ ಮೊಹಮದ್ ಅಕ್ಬರ್ ಸಾಹೇಬ್



ಮೂಲತಃ ಮಳವಳ್ಳಿ ತಾಲೂಕು ಧನಗೂರ್ ನಿವಾಸಿ ಜನಾಬ್ ಅಲ್ ಹಜ್ ಮೊಹಮದ್ ಅಕ್ಬರ್ ಸಾಹೇಬ್ (94) ಅವರು ಗುರುವಾರ ಮೈಸೂರಿನಲ್ಲಿ ನಿಧನರಾದರು.

ಇವರ ಅಂತಿಮ ವಿಧಿ ವಿಧಾನಗಳು ಶುಕ್ರವಾರ ಮಧ್ಯಾಹ್ನ ಸರ್ಕಾರಿ ಅತಿಥಿ ಗೃಹದ ಬಳಿಯಿರುವ ಅಲ್ಲಾಹ ಮಸೀದಿಯಲ್ಲಿ ನಮಾಜ್‌ನೊಂದಿಗೆ ನೆರವೇರಲಿದೆ ಎಂದು ಮೂಲಗಳು ತಿಳಿಸಿವೆ.

ಮೈಸೂರು ಮೃಗಾಲಯದ ಪ್ರಾಣಿಗಳಿಗೆ ಕೊರೊನಾ ಎಫೆಕ್ಟ್ ಭೀತಿ!

ಮೃಗಾಲಯ ಪ್ರಾಧಿಕಾರದಿಂದ ಅಗತ್ಯ ಮುನ್ನೆಚ್ಚರಿಕಾ ಕ್ರಮ

- ಪ್ರಾಣಿ ಪಾಲಕರ ಮೇಲೆ ತೀವ್ರ ನಿಗಾ
- ಪ್ರಾಣಿಗಳಿಗೆ ಬೇಯಿಸಿದ ಆಹಾರ ಪೂರೈಕೆ
- ಪ್ರತಿಯೊಬ್ಬ ಸಿಬ್ಬಂದಿಗೆ ಥರ್ಮಲ್ ಸ್ಕ್ರೀನಿಂಗ್
- ಪ್ರತಿದಿನ ಮೃಗಾಲಯ ಆವರಣ ಸ್ಯಾನಿಟೈಸ್





ಮೈಸೂರು,ಡಿ.28(ಬಿಎಲ್‌ಯು)– ಕ್ರಿಸ್‌ಮಸ್ ರಜೆ ಹಾಗೂ ಹೊಸ ವರ್ಷಾಚರಣೆ ಹಿನ್ನೆಲೆಯಲ್ಲಿ ವಿಶ್ವವಿಖ್ಯಾತ ಪ್ರವಾಸಿ ತಾಣ ಮೈಸೂರಿಗೆ ದೇಶ–ವಿದೇಶದ ಪ್ರವಾಸಿಗರು ಲಗ್ಗೆ ಇಟ್ಟಿದ್ದಾರೆ. ಕೊರೊನಾ ವ್ಯಾಪಕವಾಗಿ ಹರಡುತ್ತಿರುವ ಕಾರಣ ಮೈಸೂರಿನ ಚಾಮರಾಜೇಂದ್ರ ಮೃಗಾಲಯದ ಪ್ರಾಣಿಗಳಿಗೆ ಕೊರೊನಾ ಸೋಂಕು ಹರಡಬಹುದಾದ ಆತಂಕ ಎದುರಾಗಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಮೃಗಾಲಯ ಪ್ರಾಧಿಕಾರ ಪ್ರಾಣಿಗಳ ಕಾಪಾಡುವ ನಿಟ್ಟಿನಲ್ಲಿ ಅಗತ್ಯ ಮುನ್ನೆಚ್ಚರಿಕಾ ಕ್ರಮ ಕೈಗೊಂಡಿದೆ.

ಮೈಸೂರಿನಲ್ಲಿ ಕೊರೊನಾ ವ್ಯಾಪಕವಾಗಿ ಹರಡುತ್ತಿದ್ದು, ಈಗಾಗಲೇ ಸೋಂಕಿಗೆ ಒಬ್ಬ ಬಲಿಯಾಗಿದ್ದಾನೆ. ಇಂತಹ ಪರಿಸ್ಥಿತಿಯಲ್ಲೂ ಮೈಸೂರಿಗೆ ದೇಶ–ವಿದೇಶದ ಲಕ್ಷಾಂತರ ಪ್ರವಾಸಿಗರು ಪ್ರತಿದಿನ ಆಗಮಿಸುತ್ತಿದ್ದಾರೆ. ಅದರಲ್ಲೂ ಮೈಸೂರಿನ ಚಾಮರಾಜೇಂದ್ರ ಮೃಗಾಲಯ ವೀಕ್ಷಣೆಗೆ ಮುಗಿ ಬೀಳುತ್ತಿದ್ದಾರೆ. ಕೊರೊನಾ ಸೋಂಕಿನ ಬಗ್ಗೆ ಕಿಂಚಿತ್ತೂ ಭಯ ಇಲ್ಲದ ಪ್ರವಾಸಿಗರು ಮಾಸ್ಕ್ ಧರಿಸದೆ, ಸಾಮಾಜಿಕ ಅಂತರ ಕಾಪಾಡಿಕೊಳ್ಳದೆ ಜಾತ್ರೆಯಲ್ಲಿ ನೆರೆಯುವಂತೆ ಮೈಸೂರು ಮೃಗಾಲಯಕ್ಕೆ ನುಗ್ಗುತ್ತಿದ್ದಾರೆ.

ಕೇರಳ ರಾಜ್ಯದ ಪ್ರವಾಸಿಗರೇ ಹೆಚ್ಚಿನ ಸಂಖ್ಯೆಯಲ್ಲಿ ಮೃಗಾಲಯಕ್ಕೆ ಬರುತ್ತಿರುವ ಕಾರಣ ಸಹಜವಾಗಿಯೇ ಆತಂಕ ಎದುರಾಗಿದೆ. ಈ ಹಿನ್ನೆಲೆಯಲ್ಲಿ ಪ್ರಾಣಿಗಳಿಗೆ ಕೊರೊನಾ ಸೋಂಕು ಹರಡದಂತೆ ಮೃಗಾಲಯ ಪ್ರಾಧಿಕಾರ ಅಗತ್ಯ ಮುನ್ನೆಚ್ಚರಿಕಾ ಕ್ರಮ ಕೈಗೊಂಡಿದೆ. ಪ್ರತಿಯೊಬ್ಬ ಪ್ರವಾಸಿಗರನ್ನು ಥರ್ಮಲ್ ಸ್ಕ್ರೀನಿಂಗ್ ಮಾಡಿ ಕಳುಹಿಸುವ ವ್ಯವಸ್ಥೆ ಮಾಡಲಾಗಿದೆ. ಆದರೆ ನೂರಾರು ಸಂಖ್ಯೆಯಲ್ಲಿ ಪ್ರವಾಸಿಗರ ದಂಡು ಒಂದೇ ಬಾರಿಗೆ ನುಗ್ಗುತ್ತಿರುವ ಕಾರಣ ಸರಿಯಾಗಿ ಥರ್ಮಲ್ ಸ್ಕ್ರೀನಿಂಗ್ ಮಾಡಲು ಸಾಧ್ಯವಾಗುತ್ತಿಲ್ಲ.

ಒಂದು ವೇಳೆ ಕೊರೊನಾ ಸೋಂಕು ಪ್ರಾಣಿಗಳಿಗೆ ತಗುಲಿದರೆ ಅದು ಪ್ರಾಣಿ ಪಾಲಕ (ಅನಿಮಲ್ ಕೀಪರ್)ನಿಂದ ಮಾತ್ರ ಈ ಹಿನ್ನೆಲೆಯಲ್ಲಿ ಮೃಗಾಲಯ ಪ್ರಾಧಿಕಾರ ಪ್ರಾಣಿ ಪಾಲಕರ ಬಗ್ಗೆ ತೀವ್ರ ನಿಗಾ ವಹಿಸಿದೆ. ಪ್ರತಿಯೊಬ್ಬ ಪ್ರಾಣಿ ಪಾಲಕನಿಗೆ ಥರ್ಮಲ್ ಸ್ಕ್ರೀನಿಂಗ್ ಮಾಡಿ ಒಳಗೆ ಬಿಡಲಾಗುತ್ತಿದೆ. ಪ್ರಾಣಿ ಪಾಲಕ ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು. ಜೊತೆಗೆ ಪ್ರಾಣಿಗಳಿಗೆ ಆಹಾರ ಹಾಕುವ ಸಂದರ್ಭದಲ್ಲಿ ಕೈಗೆ ಗ್ಲೌಸ್ ಹಾಕಿರಬೇಕು. ಒಳಗೆ ಹೋಗುವ ಮುನ್ನ ಪ್ರವೇಶ ದ್ವಾರದಲ್ಲಿರುವ ಸಾಂಕ್ರಾಮಿಕ ರೋಗಾಣು ಮುಕ್ತ ಮಾಡುವ ರಾಸಾಯನಿಕ ದ್ರವ್ಯ(ಫುಟ್ ಡಿಪ್) ದೊಳಗೆ ಕಾಲಿಟ್ಟು ಒಳಗೆ ಹೋಗುವಂತೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.

ಮೃಗಾಲಯದೊಳಗೆ ಪ್ರವೇಶಿಸುವ ಮುನ್ನ ಪ್ರತಿಯೊಬ್ಬ ಸಿಬ್ಬಂದಿಯನ್ನು ಥರ್ಮಲ್ ಸ್ಕ್ರೀನಿಂಗ್ ಗೊಳಪಡಿಸಲಾಗುತ್ತಿದೆ. ಜ್ವರ, ಕೆಮ್ಮು, ನೆಗಡಿ ಸೇರಿದಂತೆ ಕೊರೊನಾ ಲಕ್ಷಣ ಕಂಡು ಬಂದರೆ ಆ ಸಿಬ್ಬಂದಿಯನ್ನು ಮನೆಗೆ ಕಳುಹಿಸಲಾಗುತ್ತಿದೆ. ಸಂಜೆ ಮೃಗಾಲಯ ಬಂದ್ ಮಾಡಿದ ನಂತರ ಇಡೀ ಆವರಣವನ್ನು ಸ್ಯಾನಿಟೈಸ್ ಮಾಡಲಾಗುತ್ತಿದೆ. ಮೃಗಾಲಯದಲ್ಲಿರುವ ಪ್ರತಿಯೊಂದು ಶೌಚಾಲಯವನ್ನು ಸ್ವಚ್ಛ ಮಾಡಿ, ಸ್ಯಾನಿಟೈಸ್ ಮಾಡಲಾಗುತ್ತಿದೆ. ಪ್ರಾಣಿಗಳಿಗೆ ನೀಡುವ ಆಹಾರದ ಬಗ್ಗೆ ಕೂಡ ಎಚ್ಚರಿಕೆ ವಹಿಸಲಾಗಿದೆ. ಕೆಲವು ಆಹಾರವನ್ನು ಬೇಯಿಸಿ ನೀಡಲಾಗುತ್ತಿದೆ. ಹಣ್ಣು ಸೇರಿದಂತೆ ಕೆಲವು ಆಹಾರವನ್ನು ರಾಸಾಯನಿಕದಿಂದ ಶುಚಿ ಮಾಡಿ ನೀಡಲಾಗುತ್ತಿದೆ.

ಅನಿವಾರ್ಯ ಪರಿಸ್ಥಿತಿ ಬಂದರೆ ಮೃಗಾಲಯ ಬಂದ್

ಕೊರೊನಾ ಸೋಂಕಿತರ ಪ್ರಮಾಣ ಹೆಚ್ಚಾದರೆ ಪರಿಸ್ಥಿತಿ ಬಿಗಡಾಯಿಸಿದರೆ, ಅನಿವಾರ್ಯವಾದರೆ ಮೃಗಾಲಯ ಬಂದ್ ಮಾಡಲಾಗುವುದು ಎಂದು ಮೃಗಾಲಯ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಮಹೇಶ್ ಕುಮಾರ್ ತಿಳಿಸಿದ್ದಾರೆ.

ಆದರೆ ಮೃಗಾಲಯ ಬಂದ್ ಮಾಡುವ ಪರಿಸ್ಥಿತಿ ಸದ್ಯಕ್ಕೆ ಇಲ್ಲ. ಒಂದು ವೇಳೆ ಕೊರೊನಾ ಸೋಂಕಿತರ ಸಂಖ್ಯೆ ಹೆಚ್ಚಾಗಿ, ಮೃಗಾಲಯ ಬಂದ್ ಮಾಡುವಂತೆ ಸರ್ಕಾರ ಆದೇಶಿಸಿದರೆ ಬಂದ್ ಮಾಡಲಾಗುವುದು ಎಂದು ಹೇಳಿದರು.

ಆದರೆ ಈಗಿನ ಪರಿಸ್ಥಿತಿಯಲ್ಲಿ ಅಂತಹ ಯಾವುದೇ ಸಂದರ್ಭ ಎದುರಾಗಿಲ್ಲ. ಪ್ರಾಣಿಗಳಿಗೆ ಕೊರೊನಾ ಸೋಂಕು ತಗಲದಂತೆ ಅಗತ್ಯ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಲಾಗಿದೆ. ಇದರಿಂದ ಯಾರೂ ಗಾಬರಿಪಡುವಂತಿಲ್ಲ ಎಂದು ಮಹೇಶ್ ಕುಮಾರ್ ಸ್ಪಷ್ಟಪಡಿಸಿದ್ದಾರೆ. ಕಳೆದ ಬಾರಿ ಕೊರೊನಾ 2ನೇ ಅಲೆ ಸಂದರ್ಭದಲ್ಲಿ ಮೈಸೂರು ಮೃಗಾಲಯವನ್ನು ಕೆಲವು ತಿಂಗಳು ಮುಚ್ಚಲಾಗಿತ್ತು. ಆದರೆ ಈ ಬಾರಿ ಅಂತಹ ಪರಿಸ್ಥಿತಿ ಇಲ್ಲ ಎಂದು ಮಹೇಶ್‌ಕುಮಾರ್ ಹೇಳಿದ್ದಾರೆ.

ಶಾಸಕ ಯತ್ನಾಳ್‌ರಿಂದ 40 ಸಾವಿರ ಕೋಟಿ ಕೋವಿಡ್ ಹಗರಣ ಆರೋಪ: ಬಿಜೆಪಿ ಮೌನ!

ಸಚಿವ ಡಾ.ಶರಣಪ್ರಕಾಶ್ ಪಾಟೀಲ್ ತರಾಟೆ



ಬೆಂಗಳೂರು,ಡಿ.28(ಕೆಎಂಶಿ)–ಬಿಜೆಪಿ ಆಡಳಿತ ಸಂದರ್ಭದಲ್ಲಿ 40 ಸಾವಿರ ಕೋಟಿ ರೂ. ಕೋವಿಡ್ ಹಗರಣ ಕುರಿತು ಬಸನಗೌಡ ಪಾಟೀಲ್ ಯತ್ನಾಳ್ ಹೇಳಿಕೆಗೆ ಆ ಪಕ್ಷದ ನಾಯಕರು ಏಕೆ ಮೌನ ವಹಿಸಿದ್ದಾರೆ ಎಂದು ಸಚಿವ ಡಾ.ಶರಣ ಪ್ರಕಾಶ್ ಪಾಟೀಲ್ ಪ್ರಶ್ನಿಸಿದ್ದಾರೆ. ಈ ಸಂಬಂಧ ಪ್ರಕಟಣೆ ನೀಡಿರುವ ಅವರು, ಯತ್ನಾಳ್ ಹೇಳಿಕೆಯನ್ನು ಲಘುವಾಗಿ ಪರಿಗಣಿಸುವಂತಿಲ್ಲ, ಪ್ರತಿಯೊಂದಕ್ಕೂ ಕಾಂಗ್ರೆಸ್ ಸರ್ಕಾರದ ವಿರುದ್ಧ ಸುಳ್ಳು ಆರೋಪ ಮಾಡುವ ಬಿಜೆಪಿ ನಾಯಕರು ಯತ್ನಾಳ್ ಆರೋಪಕ್ಕೆ ಮೌನ ವಹಿಸಿರುವುದು ಹಲವು ಸಂಶಯಗಳಿಗೆ ಎಡೆಮಾಡಿಕೊಟ್ಟಿದೆ ಎಂದಿದ್ದಾರೆ. ಪ್ರಧಾನಿ ನರೇಂದ್ರ ಮೋದಿ 'ನಾ ಖಾವೂಂಗ, ನಾ ಖಾನೆ ದೂಂಗೆ' ಎನ್ನುತ್ತಾರೆ. ನಿಮ್ಮದೇ ಪಕ್ಷದ ನಾಯಕರು ಗಂಭೀರ ಆರೋಪ ಮಾಡಿದ್ದರೂ ತನಿಖೆಗೆ ಕೇಂದ್ರ ಸರ್ಕಾರ ಏಕೆ ಆದೇಶ ಮಾಡಿಲ್ಲ. ಭ್ರಷ್ಟಾಚಾರ ಪ್ರಕರಣವನ್ನು ತಾರ್ಕಿಕ ಹಂತಕ್ಕೆ ಕೊಂಡೊಯ್ಯುವ ಇಚ್ಛಾಶಕ್ತಿ ಇದ್ದರೆ ಯತ್ನಾಳ್ ದಾಖಲೆಗಳನ್ನು ಬಿಡುಗಡೆ ಮಾಡಬೇಕು, ಹಿಟ್ ಅಂಡ್ ರನ್ ಮಾಡಬಾರದು. ವಿಧಾನಸಭಾ ಚುನಾವಣೆಯಲ್ಲಿ ಪಾಠ ಕಲಿಸಿದಂತೆ, ಲೋಕಸಭಾ ಚುನಾವಣೆಯಲ್ಲೂ ಮತದಾರರು ಬಿಜೆಪಿಗೆ ಪಾಠ ಕಲಿಸುವುದು ಶತಃಸಿದ್ಧ ಎಂದಿದ್ದಾರೆ.



ಮೈಸೂರಿನ ಗಾಯಿತ್ರಿ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತದ 2024ನೇ ಸಾಲಿನ ಕ್ಯಾಲೆಂಡರ್ ಅನ್ನು ನಿಯಮಿತದ ಅಧ್ಯಕ್ಷ ಕೆ.ಆರ್.ಸತ್ಯನಾರಾಯಣ ಹಾಗೂ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಬಿಡುಗಡೆ ಮಾಡಿದರು. ನಿಯಮಿತದ ಕೋಶಾಧ್ಯಕ್ಷ ಕೆ.ಆರ್.ಮಂಜುನಾಥ್ ಸೇರಿದಂತೆ ಕಾರ್ಯಕಾರಿ ಮಂಡಳಿ ಸದಸ್ಯರು ಚಿತ್ರದಲ್ಲಿದ್ದಾರೆ.

ಸೇವಾ ಕೇಂದ್ರಗಳನ್ನು ತೆರೆಯಲು ಅರ್ಜಿ ಆಹ್ವಾನ

ಮೈಸೂರು,ಡಿ.28– ರಾಜ್ಯ ಸರ್ಕಾರದ ನೂತನ ಯೋಜನೆಗಳನ್ನು ಸೇವಾ ಸಿಂಧು ಪೋರ್ಟಲ್ ಮೂಲಕ ಅನುಷ್ಠಾನಗೊಳಿಸಲಾಗುತ್ತಿದ್ದು, ನಗರ ಪ್ರದೇಶಗಳಲ್ಲಿ ಸೇವಾ ಕೇಂದ್ರಗಳ ಸಂಖ್ಯೆಯ ಬೇಡಿಕೆ ಹೆಚ್ಚಾಗಿರುವುದರಿಂದ ಹಾಗೂ ಹೆಚ್ಚಿನ ನಾಗರಿಕರಿಗೆ ಸರ್ಕಾರದ ವಿವಿಧ ಸೇವೆಗಳು ಸುಲಲಿತವಾಗಿ ಸಿಗುವಂತೆ ಮಾಡುವ ಹಿತ ದೃಷ್ಟಿಯಿಂದ ಮೈಸೂರು ಜಿಲ್ಲೆಯ ಹುಣಸೂರು (cmc) ಹಾಗೂ ಹೆಚ್.ಡಿ. ಕೋಟೆ (tmc) ಯಲ್ಲಿ ತಲಾ ಒಂದು ಕೇಂದ್ರವನ್ನು ತೆರೆಯಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದೆ. ಆಸಕ್ತಿ ಇರುವ ಅಭ್ಯರ್ಥಿಗಳು ತಮ್ಮ ಅರ್ಜಿಗಳನ್ನು www.karnatakaone.gov.in/Public/Franchiseeterm ಮೂಲಕ ಅರ್ಜಿ ಸಲ್ಲಿಸುವುದು ಎಂದು ಅಪರ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮೈಸೂರಿನ ಹಿನಕಲ್ ಗ್ರಾಮದ ಶ್ರೀ ಚಾಮುಂಡೇಶ್ವರಿ ವಿವಿಧೋದ್ದೇಶ ಸಹಕಾರ ಸಂಘದ ನೂತನ ವರ್ಷದ ಕ್ಯಾಲೆಂಡರನ್ನು ಕೆ.ಆರ್. ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಬಿಡುಗಡೆಗೊಳಿಸಿದರು. ಈ ವೇಳೆ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹೇಮಂತ್‌ಕುಮಾರ್‌ಗೌಡ, ನಂಜುಂಡಸ್ವಾಮಿ, ಸಂಘದ ಅಧ್ಯಕ್ಷ ರಾಜ್‌ಕುಮಾರ್, ಉಪಾಧ್ಯಕ್ಷ ಕುಮಾರ್ ನಿರ್ದೇಶಕರಾದ ಶ್ರೀನಿವಾಸ, ಜಯರಾಮ್, ಗೋಪಾಲಗೌಡ, ಮಹದೇವ, ಹಿನಕಲ್ ಗಣೇಶ್ ಉಪಸ್ಥಿತರಿದ್ದರು.

ಸುತ್ತೂರು ಮಠದಲ್ಲಿ ಭಾರತೀಯ ಜ್ಞಾನ ಪರಂಪರೆ ಕುರಿತು ಕಾರ್ಯಕ್ರಮ

ಮೈಸೂರು,ಡಿ.28–ಸುತ್ತೂರಿನ ಶ್ರೀ ಸುತ್ತೂರು ಮಠದಲ್ಲಿ "ಭಾರತೀಯ ಜ್ಞಾನ ಪರಂಪರೆ (ಐಕೆಎಸ್) ಕುರಿತು ಒಂದು ವಾರ ಅವಧಿಯ ಅಧ್ಯಾಪಕರ ತರಬೇತಿ ಕಾರ್ಯಕ್ರಮ (ಎಫ್‌ಡಿಪಿ) ಶುಕ್ರವಾರ ಆರಂಭವಾಗಲಿದೆ. ಬೆಳಗ್ಗೆ 10 ಗಂಟೆಗೆ ಶ್ರೀ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಉದ್ಘಾಟಿಸಲಿದ್ದಾರೆ. ಒಂದು ವಾರ ಅವಧಿಯ ಈ ಕಾರ್ಯಕ್ರಮವನ್ನು ಬನಾರಸ್ ಹಿಂದೂ ವಿಶ್ವವಿದ್ಯಾಲಯ, ವಾರಣಾಸಿಯ ಅಂತರ ವಿಶ್ವವಿದ್ಯಾನಿಲಯ ಶಿಕ್ಷಕರ ತರಬೇತಿ ಕೇಂದ್ರ ಹಾಗೂ ವಿದ್ಯಾಭಾರತಿ ಉಚ್ಚ ಶಿಕ್ಷಾ ಸಂಸ್ಥಾನ, ಜೆಎಸ್‌ಎಸ್ ಮಹಾವಿದ್ಯಾಪೀಠ, ಸುತ್ತೂರು ಇದರ ಆಶ್ರಯದಲ್ಲಿ ಆಯೋಜಿಸಿವೆ.

ಗೌರವ ಅತಿಥಿಗಳಾಗಿ ಧಾರವಾಡದ ಬಹುಶಿಸ್ತೀಯ ಅಭಿವೃದ್ಧಿ ಸಂಶೋಧನಾ ಕೇಂದ್ರದ ನಿರ್ದೇಶಕ ಡಾ.ಬಸವಪ್ರಭು ಜೀರ್ಲಿ ಆಗಮಿಸುವರು. ನೃಪತುಂಗ ವಿವಿ, ಬೆಂಗಳೂರು ಇದರ ಉಪಕುಲಪತಿ ಪ್ರೊ. ಶ್ರೀನಿವಾಸ್ ಬಳ್ಳಿ ಉದ್ಘಾಟನಾ ಕಾರ್ಯಕ್ರಮದ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.



ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘದವರು ಮೈಸೂರಿನ ಚಾಮುಂಡಿಪುರಂ ವೃತ್ತದ ತಗಡೂರು ರಾಮಚಂದ್ರ ರಾಯರ ಪಾರ್ಕ್‌ನಲ್ಲಿ ಗಾಂಧಿವಾದಿ ತಗಡೂರು ರಾಮಚಂದ್ರ ರಾಯರ ಪುಣ್ಯ ಸ್ಮರಣೆ ಮಾಡಿದರು. ಈ ವೇಳೆ ಸಂಘದ ಅಧ್ಯಕ್ಷ ವಿಶ್ವನಾಥಯ್ಯ, ಮಾಜಿ ಕಾರ್ಪೋರೇಟರ್ ಮಾ.ವಿ.ರಾಮಪ್ರಸಾದ್ ಟಿ.ಎಸ್.ಗೋಪಿನಾಥ್ ಇತರರಿದ್ದರು.

ಮೈಸೂರಲ್ಲಿ ಸಿರಿಧಾನ್ಯ ಜಾಗೃತಿ ಜಾಥಾ



ಮೈಸೂರು, ಡಿ.28(ಆರ್‌ಕೆ)–ಸಾವಯವ ಕೃಷಿ ಪದ್ಧತಿಯಲ್ಲಿ ಬೆಳೆದ ಸಿರಿಧಾನ್ಯ ಬಳಸುವುದರಿಂದ ಪೌಷ್ಟಿಕಾಂಶಯುಕ್ತ ಆಹಾರ ಸಾಧ್ಯ ಎಂಬುದನ್ನು ಸಾರ್ವಜನಿಕರಿಗೆ ಅರಿವು ಮೂಡಿಸಲು ಇಂದು ಮೈಸೂರಲ್ಲಿ ಜಾಗೃತಿ ಜಾಥಾ ನಡೆಸಲಾಯಿತು.

ಮೈಸೂರು ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ, ಕೃಷಿ ಇಲಾಖೆ ಹಾಗೂ ಹಲವು ಸಂಘ–ಸಂಸ್ಥೆಗಳು ಆಯೋಜಿಸಿದ್ದ ಸಿರಿಧಾನ್ಯ ನಡಿಗೆ ಜಾಥಾ ಕಾರ್ಯಕ್ರಮವನ್ನು ಅರಮನೆ ಉತ್ತರ ದ್ವಾರದ ಶ್ರೀ ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಬಳಿ ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಹಸಿರು ನಿಶಾನೆ ತೋರುವ ಮೂಲಕ ಉದ್ಘಾಟಿಸಿದರು. ನಂತರ ಮಾತನಾಡಿದ ಅವರು, ಇತ್ತೀಚಿನ ಒತ್ತಡದಲ್ಲಿ ಕೆಲಸ ಮಾಡುವವರು ಮಾನಸಿಕ ಮತ್ತು ದೈಹಿಕ ಆರೋಗ್ಯ ಕಾಪಾಡಿಕೊಳ್ಳಲು ಪೌಷ್ಟಿಕಾಂಶಯುಕ್ತ ಸಿರಿಧಾನ್ಯಗಳಿಂದ ತಯಾರಿಸಿದ ಆಹಾರ ಸೇವಿಸುವುದು ಅತ್ಯಗತ್ಯ. ಯಾವುದೇ ರಾಸಾಯನಿಕ ಗೊಬ್ಬರ ಬಳಸದೇ ಸಾವಯವ ಕೃಷಿ ಉತ್ಪನ್ನಗಳಿಂದ ತಯಾರಿಸಿದ ಆಹಾರ ಸೇವನೆ ಅತ್ಯಗತ್ಯ ಹಾಗೂ ಸಾರ್ವಜನಿಕರಲ್ಲಿ ಈ ಬಗ್ಗೆ ಅರಿವು ಮೂಡಿಸುವ ಅಗತ್ಯವಿದೆ ಎಂದರು.

ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಿಂದ ಆರಂಭವಾದ ಜಾಥಾವು ಕೆ.ಆರ್.ಸರ್ಕಲ್, ಡಿ.ದೇವರಾಜ ಅರಸು ರಸ್ತೆ ಮೂಲಕ ಹಳೇ ಡಿಸಿ ಕಚೇರಿ ಬಳಿ ಅಂತ್ಯವಾಯಿತು. ಅಲ್ಲಿ ಸಿರಿಧಾನ್ಯಗಳಿಂದ ತಯಾರಿಸಿದ ಉಪಹಾರವನ್ನು ನಡಿಗೆಯಲ್ಲಿ ಪಾಲ್ಗೊಂಡಿದ್ದವರಿಗೆ ವಿತರಿಸಲಾಯಿತು. ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಕೃಷಿ ಇಲಾಖೆ ಜಂಟಿ ನಿರ್ದೇಶಕ ಡಾ.ಚಂದ್ರಶೇಖರ್, ಉಪ ನಿರ್ದೇಶಕರಾದ ರಾಜು, ದಯಾನಂದ, ಯೋಗೇಶ್, ಜಿಲ್ಲೆಯ ಎಲ್ಲಾ ತಾಲೂಕುಗಳ ಕೃಷಿ ಸಹಾಯಕ ನಿರ್ದೇಶಕರು, ಮೈಸೂರಿನ ಹಲವು ಶಾಲೆಗಳ 300ಕ್ಕೂ ಹೆಚ್ಚು ವಿದ್ಯಾರ್ಥಿಗಳು ಕಾಲ್ನಡಿಗೆಯಲ್ಲಿ ಪಾಲ್ಗೊಂಡು ಸಿರಿಧಾನ್ಯಗಳ ಮಹತ್ವದ ಬಗ್ಗೆ ಜನರಿಗೆ ಅರಿವು ಮೂಡಿಸಿದರು.

ನಂತರ ದಸರಾ ವಸ್ತುಪ್ರದರ್ಶನ ಆವರಣದ ಪಿ.ಕಾಳಿಂಗ ರಾವ್ ಭವನದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮ ಮತ್ತು ವಸ್ತುಪ್ರದರ್ಶನವನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಉದ್ಘಾಟಿಸಿದರು. ಸಾವಯವ ಕೃಷಿಯಲ್ಲಿ ನಿರತ ರೈತರನ್ನುದ್ದೇಶಿಸಿ ಮಾತನಾಡಿದ ಸಚಿವರು, ನಮ್ಮ ಪೂರ್ವಿಕರು ರೂಢಿಸಿಕೊಂಡಿದ್ದ ಸಾಂಪ್ರದಾಯಿಕ ಆಚರಣೆಗಳನ್ನು ಈಗಿನ ಹಾಗೂ ಮುಂದಿನ ಪೀಳಿಗೆಗೆ ಪರಿಚಯಿಸುವಂತೆ ಸಲಹೆ ನೀಡಿದರು.

ಕುರಿ, ಕೋಳಿ, ಮೇಕೆ ಸಾಗಾಣಿಕೆ, ಹಸು–ಎಮ್ಮೆಗಳೊಂದಿಗೆ ಬದುಕು ರೂಪಿಸಿಕೊಂಡು ಸಾಂಪ್ರದಾಯಿಕ ಪದ್ಧತಿಗಳು, ಪೂರ್ವಿಕರ ಆಚರಣೆ, ಕೃಷಿ ಪದ್ಧತಿಗಳಿಂದ ನಮ್ಮ ಯುವ ಪೀಳಿಗೆಗೆ ತಿಳಿಯಪಡಿಸುವ ಕೆಲಸವನ್ನು ರೈತರು, ಕೃಷಿ ಇಲಾಖೆ ಅಧಿಕಾರಿಗಳು ಹಾಗೂ ಸಂಘ–ಸಂಸ್ಥೆಗಳು ಮಾಡಬೇಕು. ಆಗ ಮಾತ್ರ ನಮ್ಮ ಪುರಾತನ ಕೃಷಿ ಪದ್ಧತಿಯನ್ನು ಜೀವಂತವಾಗಿರಿಸಲು ಸಾಧ್ಯ ಎಂದರು.

ಕುರುಬೂರು ಶಾಂತಕುಮಾರ್, ಬಡಗಲಪುರ ನಾಗೇಂದ್ರ ರೈತ ಮುಖಂಡರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸಾವಯವ ಕೃಷಿ, ದ್ವಿದಳ ಧಾನ್ಯ, ಪೌಷ್ಟಿಕಾಂಶಯುಕ್ತ ಸಿರಿಧಾನ್ಯಗಳ ಪ್ರಾಮುಖ್ಯತೆ ಬಗ್ಗೆ ಮಾಹಿತಿ ನೀಡಿದರು.

ಪರೀಕ್ಷಾ ಕೇಂದ್ರದ ಸುತ್ತಲೂ ನಿಷೇಧಾಜ್ಞೆ

ಮೈಸೂರು,ಡಿ.28– ಕರ್ನಾಟಕ ಲೋಕಸೇವಾ ಆಯೋಗದ ವತಿಯಿಂದ ನಗರದ ಜೆಎಲ್‌ಬಿ ರಸ್ತೆಯ ಮಹಾರಾಜ ಪಿಯು ಕಾಲೇಜು ಪರೀಕ್ಷಾ ಕೇಂದ್ರದಲ್ಲಿ ಸಹಕಾರ ಇಲಾಖೆ ಸಹಕಾರ ಸಂಘಗಳ ನಿಬಂಧಕರ ಕಚೇರಿಯಲ್ಲಿನ ಸಹಕಾರ ಸಂಘಗಳ ನಿರೀಕ್ಷಕರ ಹುದ್ದೆ ನೇಮಕಾತಿಗೆ ಸ್ಪರ್ಧಾತ್ಮಕ ಪರೀಕ್ಷೆಗಳು ನಡೆಯಲಿದ್ದು, ಡಿ.30ರಂದು ಪರೀಕ್ಷಾ ಕೇಂದ್ರದ ಸುತ್ತಲೂ 200 ಮೀಟರ್ ವ್ಯಾಪ್ತಿಯಲ್ಲಿ ಬೆಳಗ್ಗೆ 6 ಗಂಟೆಯಿಂದ ಸಂಜೆ 6ರವರೆಗೆ ಕಲಂ 144 ರೀತ್ಯಾ ನಿಷೇಧಾಜ್ಞೆಯನ್ನು ಜಾರಿಗೊಳಿಸಲಾಗಿದೆ. ಪರೀಕ್ಷಾ ದಿನದಂದು ಪರೀಕ್ಷಾ ಕೇಂದ್ರದ ಸುತ್ತಲೂ ಪರೀಕ್ಷಾರ್ಥಿಗಳು ಹಾಗೂ ಪರೀಕ್ಷಾ ಸಿಬ್ಬಂದಿಗಳನ್ನು ಹೊರತುಪಡಿಸಿ ಅನಧಿಕೃತ ವ್ಯಕ್ತಿಗಳು ಸಂಚರಿಸಬಾರದು. ಯಾರು ಆಕ್ಷೇಪಾರ್ಹ ವಸ್ತುಗಳನ್ನು ಒಯ್ಯಬಾರದು. ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿರುವ ಜೆರಾಕ್ಸ್ ಅಂಗಡಿಗಳನ್ನು ಪರೀಕ್ಷಾ ಅವಧಿಯಲ್ಲಿ ಮುಚ್ಚುವಂತೆ ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್ ಆದೇಶಿಸಿದ್ದಾರೆ.

ಪ್ರತಿ ಮನೆಗೂ ನೀರು: ಶಾಸಕ ಮಂಜುನಾಥ್



ಕೆ.ಆರ್.ಪೇಟೆ, ಡಿ.28–ಜಲ ಜೀವನ್ ಮಿಷನ್ (ಜೆಜೆಎಂ) ನದಿ ಮೂಲದಿಂದ ಶುದ್ಧ ಕುಡಿಯುವ ನೀರು ಪೂರೈಕೆ ಮಾಡುವ ಮೂಲಕ ಗ್ರಾಮೀಣ ಭಾಗದ ಜನರ ಆರೋಗ್ಯಕ್ಕೆ ಹೆಚ್ಚಿನ ಕಾಳಜಿ ವಹಿಸುವ ಮಹತ್ವಾಕಾಂಕ್ಷೆಯ ಯೋಜನೆ ಯಾಗಿದ್ದು, ಈ ಯೋಜನೆ ಮೂಲಕ ತಾಲೂಕಿನ ಪ್ರತಿ ಮನೆ ಮನೆಗೂ ನೀರು ಒದಗಿಸಲಾಗುವುದು ಎಂದು ಶಾಸಕ ಹೆಚ್.ಟಿ.ಮಂಜುನಾಥ್ ಹೇಳಿದರು.

ತಾಲೂಕಿನ ಸಾರಂಗಿ ಹಾಗೂ ಜಾಗಿನಕೆರೆ ಗ್ರಾಮಗಳಲ್ಲಿ ಜಲ ಜೀವನ್ ಮಿಷನ್ ಯೋಜನೆಯಡಿ ಮನೆ ಮನೆಗೆ ನಲ್ಲಿ ಅಳವಡಿಕೆ ಹಾಗೂ ಪೈಪ್‌ಲೈನ್ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ಒಂದು ಕುಟುಂಬ ಆರೋಗ್ಯವಂತಾಗಿರಬೇಕಾದರೆ ಮೊದಲು ಶುದ್ಧ ಕುಡಿಯುವ ನೀರು ಅಗತ್ಯ. ಕಾಯಿಲೆಗಳು ಅಶುದ್ಧ ಕುಡಿಯುವ ನೀರಿನಿಂದಲೇ ಹರಡುತ್ತವೆ. ಹಾಗಾಗಿ ಪ್ರತಿಯೊಬ್ಬರಿಗೂ ಶುದ್ಧ ಹಾಗೂ ಸುರಕ್ಷಿತ ನೀರಿನ ಅಗತ್ಯ ವಿದೆ. ಇದನ್ನು ಮನಗಂಡು ದೇಶಾದ್ಯಂತ ಪ್ರತಿಯೊಂದು ಕುಟುಂಬಕ್ಕೂ ಜಲ ಜೀವನ್ ಮಿಷನ್‌ನಡಿ ನದಿ ಮೂಲದಿಂದ ನೀರು ಪೂರೈಕೆ ಮಾಡುವ ಯೋಜನೆಯನ್ನು ಕೇಂದ್ರ ಸರ್ಕಾರ ಕೈಗೆತ್ತಿಕೊಂಡಿದೆ ಎಂದರು.

ರಾಜ್ಯ ಸರ್ಕಾರ ನೀರು ಮತ್ತು ನೈರ್ಮಲ್ಯ ಮಿಷನ್ ಮೂಲಕ ಈ ಯೋಜನೆಗೆ ಸಹಕಾರ ನೀಡಿ ಯೋಜನೆಯ ಯಶಸ್ವಿ ಸಾಕಾರಕ್ಕೆ ಮುಂದಾಗಿದೆ. ನೀರು ಅಮೂಲ್ಯ ಸಂಪತ್ತಾಗಿದೆ. ಹಾಗಾಗಿ ಮಿತವಾಗಿ ಬಳಕೆ ಮಾಡಬೇಕು. ನೀರಿನ ಮೂಲಗಳಾದ ಕೆರೆ, ಕಟ್ಟೆ, ನದಿ, ತೊರೆ, ಹಳ್ಳವನ್ನು ಸಂರಕ್ಷಣೆ ಮಾಡಬೇಕು. ಈ ಮೂಲಕ ಅಂತರ್ಜಲ ವೃದ್ಧಿಯಾಗುವಂತೆ ಮಾಡಬೇಕು. ಕಾಲ ಕಾಲಕ್ಕೆ ಮಳೆಯಾಗಲು ಅರಣ್ಯ ಉಳಿಸಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ತಾಲೂಕು ಆರೋಗ್ಯ ರಕ್ಷಾ ಸಮಿತಿ ಸದಸ್ಯ ಸಂತೇಬಾಚಹಳ್ಳಿ ರವಿಕುಮಾರ್, ತಾಪಂ ಮಾಜಿ ಸದಸ್ಯ ಮಲ್ಲೇನಹಳ್ಳಿ ಮೋಹನ್, ತಾಲೂಕು ಟಿಎಪಿಸಿಎಂಎಸ್ ನಿರ್ದೇಶಕ ಕೊರಟೀಕೆರೆ ದಿನೇಶ್, ಜೆಜೆಎಂ ಇಂಜಿನಿಯರ್ ಪ್ರವೀಣ್, ಸಾರಂಗಿ ಗ್ರಾಪಂ ಅಧ್ಯಕ್ಷೆ ಹೇಮಾಕ್ಷಮ್ಮ ಹೊನ್ನೇಗೌಡ, ಉಪಾಧ್ಯಕ್ಷ ನಂಜೇಗೌಡ, ಪಿಡಿಓ ಯೋಗೇಶ್, ಸದಸ್ಯರಾದ ಎನ್.ರಮೇಶ್, ಮಂಜೇಗೌಡ, ಕಿಟ್ಟಿ, ಸಣ್ಣದೇವಮ್ಮ, ಮಂಜು, ಮಹಾದೇವಮ್ಮ, ಹೇಮಾನವೀನ್, ಚಿಕ್ಕಹಾರನಹಳ್ಳಿ ರಾಜು, ಸುಲೋಚನಾ ರವಿ ಮತ್ತಿತರರು ಉಪಸ್ಥಿತರಿದ್ದರು.

ಕೋಳಿ ದೇವರಾಜು ನಿಧನ



ಕೆ.ಆರ್.ಪೇಟೆ, ಡಿ.28–ಪಟ್ಟಣದ ನಾಗಮಂಗಲ ರಸ್ತೆಯ ನಿವಾಸಿ ಕೋಳಿ ದೇವರಾಜು (ಕೋಳಿ ರಾಜಣ್ಣ (63) ಗುರುವಾರ ನಿಧನರಾದರು. ಮೃತರು ಪತ್ನಿ, ಒಬ್ಬ ಪುತ್ರಿ, ಒಬ್ಬ ಪುತ್ರ, ಅಪಾರ ಬಂಧು–ಬಳಗ ಅಗಲಿದ್ದಾರೆ. ಶುಕ್ರವಾರ ಬೆಳಗ್ಗೆ 10 ಗಂಟೆಗೆ ಪಟ್ಟಣದ ಕೆರೆಕೋಡಿ ಬಳಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶೋಷಿತ ಸಮುದಾಯಗಳ ಕೆಲ ಜನಪ್ರತಿನಿಧಿಗಳ ಮಾರಾಟ

● ಕನ್ನಡ ಪುಸ್ತಕ ಪ್ರಾಧಿಕಾರದ ಮಾಜಿ ಅಧ್ಯಕ್ಷ ಸಿದ್ದರಾಮಯ್ಯ ವಿಷಾದ ● ಮಂಡ್ಯದಲ್ಲಿ ಕೊರವಂಜಿ ಸಂಸ್ಕೃತಿ ಉತ್ಸವ



ಮಂಡ್ಯ, ಡಿ.28–ಪ್ರಸ್ತುತ ರಾಜಕಾರಣದಲ್ಲಿ ಶೋಷಿತ ಸಮುದಾಯಗಳ ಕೆಲ ಜನಪ್ರತಿನಿಧಿಗಳು ಮಾರಾಟವಾಗುತ್ತಿದ್ದಾರೆ. ಆ ಮೂಲಕ ತಮ್ಮ ಸಮುದಾಯವನ್ನು ವಂಚಿಸುತ್ತಾ ಕುಲಕಂಟಕರಾಗುತ್ತಿದ್ದಾರೆ ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹಾಗೂ ಸಂಸ್ಕೃತಿ ಚಿಂತಕ ಎಸ್.ಜಿ.ಸಿದ್ದರಾಮಯ್ಯ ವಿಷಾದಿಸಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಗುರುವಾರ ಮಂಡ್ಯ ಜಿಲ್ಲಾ ಕುಳುವ ಸಮಾಜ ಹಾಗೂ ಡ್ರೀಮ್ ಫೌಂಡೇಷನ್ ಟ್ರಸ್ಟ್ ಸಹಯೋಗದಲ್ಲಿ ಆಯೋಜಿಸಿದ್ದ ಕೊರವಂಜಿ ಸಂಸ್ಕೃತಿ ಉತ್ಸವದಲ್ಲಿ ನೆಲಮೂಲ ಸಂಸ್ಕೃತಿ ಕುರಿತು ಮಾತನಾಡಿದ ಅವರು, ನಾವಿಂದು ಸಾಂಸ್ಕೃತಿಕ ಗುಲಾಮಗಿರಿಗೆ ಸಿಲುಕಿದ್ದೇವೆ. 3500 ವರ್ಷಗಳ ಹಿಂದೆ ಕಶ್ಯಪ ಮಹರ್ಷಿಗಳು ಸಪ್ತಮಾತೃಕೆಯರನ್ನು ಗುಲಾಮರಾಗಿ ಸಿಕೊಂಡಂತೆ ಇಂದು ಮೇಲು ಜಾತಿಗಳವರು ಕೆಳ ಜಾತಿಗಳವರನ್ನು ಗುಲಾಮರಾಗಿಸಿಕೊಂಡು ಅವಕಾಶ ವಂಚಿತರನ್ನಾಗಿ ಮಾಡುತ್ತಿದ್ದಾರೆ. ಸಾಂಸ್ಕೃತಿಕ ದಾಸ್ಯದಿಂದ ಮುಕ್ತವಾಗದಿದ್ದಲ್ಲಿ ತಳ ಸಮುದಾಯಗಳು ಅಭಿವೃದ್ಧಿ ಕಾಣಲು ಸಾಧ್ಯವೇ ಇಲ್ಲ ಎಂದರು. ನಮ್ಮ ಮಕ್ಕಳು ವಿದ್ಯೆಕಲಿತವರ ಕೈಗೊಂಬೆಯಾಗಿ, ಅವರ ಕಾಲಾಳುಗಳಾಗಿ ಬಳಕೆಯಾಗುತ್ತಿದ್ದಾರೆ. ಇದಕ್ಕೆ ಕಾರಣ, ನಾವು ನಮ್ಮ ಮೂಲ ಸಂಸ್ಕೃತಿಯನ್ನು ಮರೆಯುತ್ತಿದ್ದೇವೆ. ನಮ್ಮ ಕೈಗೆ ಲೇಖನಿ ಕೊಡುವ ಬದಲು ಕತ್ತಿ ಗುರಾಣಿ ಕೊಟ್ಟು ನಮ್ಮನ್ನು ಕಿತ್ತಾಡುವಂತೆ ಮಾಡಿದ್ದಾರೆ. ಈ ದೇಶದ ಧರ್ಮ ರಾಜಕಾರಣಕ್ಕೆ ಸಿಲುಕಿದ್ದೇವೆ ವಾಸ್ತವದಲ್ಲಿ ಇಡೀ ದೇಶದ ಡಿಎನ್‌ಎ ತೆಗೆದರೆ ಎಲ್ಲರೂ ಒಂದೇ ಆಗಿದ್ದೇವೆ. ಆದರೆ, ದ್ವೇಷ ರಾಜಕಾರಣಕ್ಕೆ ಬಲಿಯಾಗಿ ನಮ್ಮ ನಮ್ಮಲ್ಲೇ ಬಡಿದಾಡಿಕೊಳ್ಳುವಂತಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಡ್ರೀಮ್ ಫೌಂಡೇಷನ್ ಅಧ್ಯಕ್ಷ ಕಿರಣ್ ಕುಮಾರ್ ಮಾತನಾಡಿ, ಜನಮೂಲ ಸಂಸ್ಕೃತಿಯನ್ನು ಅನಾವರಣಗೊಳಿಸಲು ಕೊರವಂಜಿಯ ಅಧ್ಯಯನಪೀಠ ಸ್ಥಾಪನೆ ಆಗಬೇಕು. ಮಂಡ್ಯದಲ್ಲಿ ನುಲಿಯ ಚಂದಯ್ಯ ಕೊರವಂಜಿ ಸಮುದಾಯ ಭವನ ನಿರ್ಮಾಣಕ್ಕೆ ನಿವೇಶನ ಒದಗಿಸಬೇಕು. ಎಲ್ಲಾ ಕ್ಷೇತ್ರಗಳಲ್ಲೂ ನಮ್ಮ ಜನ ಅವಕಾಶ ವಂಚಿತರಾಗಿ ತಳಮಟ್ಟದಲ್ಲಿ ಶ್ರಮಿಸುತ್ತಾ ಬಂದಿದ್ದಾರೆ. ಈ ದೇಶದ ಮೂಲ ನಿವಾಸಿಗಳಾದ ಬುಡಕಟ್ಟು ಜನಾಂಗದ ನಾವು ಇಂದಿಗೂ ತುಂಡು ಭೂಮಿ ಇಲ್ಲದಂತೆ ಬದುಕುತ್ತಿದ್ದೇವೆ ಜೊತೆಗೆ ಸಾಮಾಜಿಕವಾಗಿ ಅವಕಾಶ ವಂಚಿತರಾಗಿದ್ದೇವೆ ಎಂದು ವಿಷಾದಿಸಿದರು.

ನಮ್ಮ ಸಮುದಾಯದ ಸಮಸ್ಯೆಗಳ ಕುರಿತು ಅನುಕಂಪ ವ್ಯಕ್ತಪಡಿಸಿದ್ದ ಅಂದಿನ ಶಾಸಕ ಎಂ.ಶ್ರೀನಿವಾಸ್ ಅವರು ನುಲಿಯ ಚಂದಯ್ಯ ಕುಳುವ ಭವನ ನಿರ್ಮಾಣಕ್ಕೆ ಮಂಡ್ಯದಲ್ಲಿ ನಿವೇಶನ ಒದಗಿಸಿಕೊಡುವುದಾಗಿ ಭರವಸೆ ನೀಡಿದ್ದರು. ಆದರೆ, ನಮ್ಮ ಸಂಘಟನೆ ವೈಫಲ್ಯದಿಂದಾಗಿ ಇಂದಿಗೂ ನಿವೇಶನ ದೊರಕಿಸಿಕೊಳ್ಳಲಾಗಿಲ್ಲ. ಇಂದಗೂ ರಾಜ್ಯದಲ್ಲಿ ನಮ್ಮ ಸಮುದಾಯದ ಒಬ್ಬ ಜಿಪಂ ಸದಸ್ಯನಿಲ್ಲ ಎಂದರೆ ನಮ್ಮ ಸ್ಥಿತಿ ಹೇಗಿರಬೇಕೆಂದು ಊಹಿಸಿಕೊಳ್ಳಿ. ನಮ್ಮ ಜನ ನಮ್ಮ ಮೂಲ ಸಂಸ್ಕೃತಿಯನ್ನು ಮರೆತಿದ್ದರಿಂದಾಗಿ ನಮಗೆ ಯಾವುದೇ ಅವಕಾಶಗಳು ಸಿಗಲಿಲ್ಲ. ಈಗ ಮರಳಿ ಮನೆಗೆ–ಮೂಲ ನೆಲೆಗೆ ಎಂಬ ಆಶಯದೊಂದಿಗೆ ಕೊರವಂಜಿ ಸಂಸ್ಕೃತಿಯಡಿಯಲ್ಲಿ ಸಂಘಟಿತರಾಗುತ್ತಿದ್ದೇವೆ. ಈ ನಡುವೆ ತಳ ಸಮುದಾಯಗಳಲ್ಲಿ ಪರಸ್ಪರ ಅಪನಂಬಿಕೆ, ವಿಶ್ವಾಸದ ಕೊರತೆಯಿಂದಾಗಿ ನಾವು ಹಿಂದುಳಿಯುತ್ತಿದ್ದೇವೆ ಎಂದರು.

ಶ್ರೀರಂಗಪಟ್ಟಣ ಪಶ್ಚಿಮವಾಹಿನಿಯ ಚಂದ್ರವನ ಆಶ್ರಮದ ಡಾ.ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದರು. ವಿಧಾನಸಭೆ ಡೆಪ್ಯೂಟಿ ಸ್ಪೀಕರ್ ರುದ್ರಪ್ಪ ಲಮಾಣಿ, ಶಾಸಕ ಪಿ.ರವಿಕುಮಾರ್, ಕುಳುವ ಸಮಾಜದ ಜಿಲ್ಲಾಧ್ಯಕ್ಷ ಕೃಷ್ಣಕುಮಾರ್ ಗಣಂಗೂರು, ಕೆಪಿಸಿಸಿ ಕಾರ್ಯದರ್ಶಿ ಬಿ.ಶಿವಣ್ಣ, ತಹಶೀಲ್ದಾರ್ ಶಿವಕುಮಾರ್ ಬಿರಾದಾರ್, ಸಮುದಾಯದ ಮುಖಂಡರಾದ ಶಿವಾನಂದ ಭಜಂತ್ರಿ, ವೆಂಕಟೇಶ್, ಡಾ.ರವಿ ಮಾಕಳಿ, ಡಾ.ವಿ.ಭಾಗ್ಯಲಕ್ಷ್ಮೀ, ಭೀಮಪುತ್ರಿ ನಾಗಮ್ಮ, ವೆಂಕಟರಮಣಯ್ಯ, ಲೋಹಿತಾಶ್ವ, ಸುರೇಶ್‌ನಾಯ್ಡು ಮತ್ತಿತರರು ಉಪಸ್ಥಿತರಿದ್ದರು.

> ಕೊರವಂಜಿ ಕತೆ ಕಲ್ಪಿತವಲ್ಲ, ಇದು ಎಲ್ಲಾ ಸಮುದಾಯಗಳ ಸಂಕಥನ, ಕುಲಚರಿತ್ರೆಗಳು ನಮ್ಮ ಸಂಸ್ಕೃತಿಯನ್ನು ತೋರಿಸುತ್ತವೆ. ಆದ್ದರಿಂದ ಕುಲಶಾಸ್ತ್ರೀಯ ಅಧ್ಯಯನವಾಗಬೇಕು. ಆಗ ಎಲ್ಲಾ ಕ್ಷೇತ್ರಗಳಲ್ಲೂ ಅವಕಾಶಗಳು ತನ್ನಿಂದ ತಾನೇ ತೆರೆದುಕೊಳ್ಳುವಂತಾಗುತ್ತದೆ.
>
> -ಎಸ್.ಜಿ.ಸಿದ್ದರಾಮಯ್ಯ, ಸಂಸ್ಕೃತಿ ಚಿಂತಕ

ಕನ್ನಡ ಶಾಲೆಗೆ ಶಕ್ತಿ ತುಂಬಿದ ಚಿಣ್ಣರ ಜಾಣರ ಜಗುಲಿ



ಕಿಕ್ಕೇರಿ, ಡಿ.28–ಕನ್ನಡ ಭಾಷೆ ಉಳಿಯಲು, ಕನ್ನಡ ಶಾಲೆ ಪ್ರೋತ್ಸಾಹಿಸಲು ಚಿಣ್ಣರ ಜಾಣರ ಜಗುಲಿ ಅರಿವಿನ ವೇದಿಕೆಯಾಗಿದೆ ಎಂದು ಆದಿಚುಂಚನಗಿರಿ ಶಿಕ್ಷಣ ಸಂಸ್ಥೆಯ ಹೇಮಗಿರಿ ಶಾಖಾಮಠದ ಕಾರ್ಯದರ್ಶಿ ಜೆ.ಎನ್. ರಾಮಕೃಷ್ಣೇಗೌಡ ತಿಳಿಸಿದರು.

ಹೋಬಳಿಯ ಐಕನಹಳ್ಳಿ ಗ್ರಾಮದ ಬಸವೇಶ್ವರ ಪ್ರೌಢಶಾಲೆಯಲ್ಲಿ ಆದಿ ಚುಂಚನಗಿರಿ ಶಿಕ್ಷಣ ಸಂಸ್ಥೆ ಏರ್ಪಡಿಸಿದ್ದ ಚಿಣ್ಣರ ಜಾಣರ ಜಗುಲಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಕ್ಕಳಲ್ಲಿ ಕನ್ನಡ ಭಾಷೆ ಮಹತ್ವ ತಿಳಿಸಲು ಎಲ್ಲಾ ಮೂಲಗಳು ಸೋತಿವೆ. ಹಳ್ಳಿಗಾಡಿನ ಮಕ್ಕಳಲ್ಲಿ ಪ್ರತಿಭೆ ಇದ್ದರೂ ಗುರ್ತಿಸುವ ಕೆಲಸವಾಗುತ್ತಿಲ್ಲ. ಸಮರ್ಪಕವಾದ ಮಾರ್ಗದರ್ಶನ ಸಿಕ್ಕರೆ ಅಪರಂಜಿಯಂತೆ ಭವಿಷ್ಯದಲ್ಲಿ ಮಕ್ಕಳು ಹೊಳೆಯಲಿವೆ ಎಂದರು.

ಇಂತಹ ಮಕ್ಕಳನ್ನು ಎಕ್ಕಿ ತೆಗೆಯಲು, ಜ್ಞಾನದ ಹಸಿವು ಹೆಚ್ಚಿಸಿ, ಟಿವಿ, ಮೊಬೈಲ್ ಬಿಟಾಕಿ ಎನ್ನುವ ಸಾಂಪ್ರದಾಯಿಕ ಜಗತ್ತಿಗೆ ತರಲು ಸಂಸ್ಥೆ ಯತ್ನಿಸುತ್ತಿದೆ. ಭೈರವೈಕ್ಯಶ್ರೀಗಳಿಗೆ ನಾವು ನೀಡಬೇಕಾದ ಕೊಡುಗೆ ಎಂದರೆ ಉತ್ತಮ ಸಮಾಜ. ಅದು ಮಕ್ಕಳ ಮೂಲಕ ಎಂದು ತಿಳಿದು ದೇಶೀಯ ಕಲೆ ಉಳಿಸುವ ಕೆಲಸ ಮಾಡಲಾಗುತ್ತಿದೆ ಎಂದು ತಿಳಿಸಿದರು.

'ಕನ್ನಡ ಮಾಧ್ಯಮ ಮುಖ್ಯವೋ, ಆಂಗ್ಲ ಮಾಧ್ಯಮ ಮುಖ್ಯವೋ' ಎಂಬ ಜಾಣರ ಜಗುಲಿ ವಿಷಯದಲ್ಲಿ ವಿದ್ಯಾರ್ಥಿ ರತ್ನ, ಎ.ಎನ್.ವಿನಾಯಕ, ಟಿ.ಎಸ್.ಪಲ್ಲವಿ, ಹೇಮಶ್ರೀ, ಕನ್ನಡ ಮಾಧ್ಯಮ ಕುರಿತು ಹಾಗೂ ಟಿ.ಸಿ.ರೋಹಿತ್, ಟಿ.ಡಿ. ಧ್ರುವ, ಐ.ಕೆ.ಸ್ಫೂರ್ತಿ, ಐಶ್ವರ್ಯ ಆಂಗ್ಲ ಮಾಧ್ಯಮ ಕುರಿತು ವಿಷಯ ಮಂಡಿಸಿದರು. ತಾಲೂಕು ಕಸಾಪ ಮಾಜಿ ಅಧ್ಯಕ್ಷ ಕೆ.ಆರ್.ನೀಲಕಂಠ ಕಾರ್ಯಕ್ರಮದ ಉಸ್ತುವಾರಿ ವಹಿಸಿ ಮಕ್ಕಳ ಹುರಿದುಂಬಿಸಿದರು. ಭಾಗವಹಿಸಿದ ಮಕ್ಕಳಿಗೆ ವೈಯಕ್ತಿಕವಾಗಿ ಜೆ.ಎನ್.ರಾಮಕೃಷ್ಣೇಗೌಡ ನಗದು ಬಹುಮಾನ ನೀಡಿ ಉತ್ತೇಜಿಸಿದರು.

ಮುಖಂಡರಾದ ಐ.ಬಿ.ಅಣ್ಣಯ್ಯ, ಶಂಕರ್, ದೇವೇಗೌಡ, ಕುಮಾರ್, ಪ್ರವೀಣ, ಮುಖ್ಯ ಶಿಕ್ಷಕ ಹನುಮಂತೇಗೌಡ, ಶಿಕ್ಷಕ ಪ್ರಕಾಶ್, ಮಂಜುನಾಥ, ಶ್ರೀಧರ್, ಗೋವಿಂದೇಗೌಡ, ಕೋಮಲಾ, ನಂಜುಂಡ ಸ್ವಾಮಿ ನಾಗೇಶ್ ಉಪಸ್ಥಿತರಿದ್ದರು.

ಕಲ್ಲಡ್ಕ ಪ್ರಭಾಕರ್ ಭಟ್ ವಿರುದ್ಧ ಎಸ್‌ಡಿಪಿಐ ಪ್ರತಿಭಟನೆ



ಮಂಡ್ಯ, ಡಿ.28–ಆರ್‌ಎಸ್‌ಎಸ್ ಮುಖಂಡ ಕಲ್ಲಡ್ಕ ಪ್ರಭಾಕರ್ ಭಟ್ ಮುಸ್ಲಿಂ ಮಹಿಳೆಯರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡುವ ಮೂಲಕ ರಾಜ್ಯದಲ್ಲಿ ಕೋಮು ಗಲಭೆಗೆ ಸಂಚು ರೂಪಿಸಿದ್ದಾರೆ ಎಂದು ಆರೋಪಿಸಿ ಎಸ್‌ಡಿಪಿಐ ಕಾರ್ಯಕರ್ತರು ಶುಕ್ರವಾರ ನಗರದಲ್ಲಿ ಪ್ರತಿಭಟನೆ ನಡೆಸಿದರು.

ನಗರದ ಜಯಚಾಮರಾಜೇಂದ್ರ ಒಡೆಯರ್ ವೃತ್ತದಿಂದ ಮೆರವಣಿಗೆ ಹೊರಟ ಕಾರ್ಯಕರ್ತರು, ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಮನವಿ ಸಲ್ಲಿಸಿದರು. ಶ್ರೀರಂಗಪಟ್ಟಣದಲ್ಲಿ ನಡೆದ ಹನುಮ ಸಂಕೀರ್ತನ ಯಾತ್ರೆಯಲ್ಲಿ ಕಲ್ಲಡ್ಕ ಪ್ರಭಾಕರ್ ಭಟ್ ಮುಸ್ಲಿಂ ಮಹಿಳೆಯರ ಬಗ್ಗೆ ಕೀಳು ಹೇಳಿಕೆ ನೀಡಿ ಅವಹೇಳನ ಮಾಡಿದ್ದಾರೆ. ಲವ್ ಜಿಹಾದ್ ಹೆಸರಿನಲ್ಲಿ ಮುಸ್ಲಿಂ ಮಹಿಳೆಯರು ಮೋಸ ಮಾಡುತ್ತಾರೆ ಎಂದು ಸುಳ್ಳು ಹೇಳಿ, ಅಪಪ್ರಚಾರ ಮಾಡಿದ್ದಾರೆ. ಆದ್ದರಿಂದ ಇವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು.

ಮುಸ್ಲಿಂ ಸಮುದಾಯದವರು ತೆರಿಗೆ ಪಾವತಿಸಲ್ಲ. ಮೋಸ ಮಾಡುತ್ತಾರೆ ಎಂದು ಹೇಳುವ ಮೂಲಕ ಸಮುದಾಯದ ಬಗ್ಗೆ ಸಮಾಜದಲ್ಲಿ ಅನುಮಾನದ ದೃಷ್ಟಿಯಿಂದ ನೋಡುವಂತಹ ವಾತಾವರಣ ಸೃಷ್ಟಿಸುವ ಹುನ್ನಾರ ಮಾಡಿದ್ದಾರೆ. ಜೊತೆಗೆ ಪ್ರಚೋದನಕಾರಿ ಭಾಷಣ ಮಾಡುವ ಮೂಲಕ ರಾಜ್ಯದಲ್ಲಿ ಕೋಮು ಗಲಭೆ ಸೃಷ್ಟಿಸುತ್ತಿದ್ದಾರೆ. ಗೂಂಡಾ ಕಾಯ್ದೆಯಡಿ ಕಲ್ಲಡ್ಕ ಪ್ರಭಾಕರ್ ಭಟ್ ಅವನ್ನು ಬಂಧಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಎಸ್‌ಡಿಪಿಐ ಜಿಲ್ಲಾಧ್ಯಕ್ಷ ಸಾದತ್ ಪಾಷಾ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮುಕ್ತಾರ್ ಅಹಮದ್, ಕಾರ್ಯದರ್ಶಿ ಅತೀಕ್ ಅಹಮದ್ ಭಾಗವಹಿಸಿದ್ದರು.

ಮಾಸಿಕ ಸರಣಿ ವಿಶೇಷ ಉಪನ್ಯಾಸ

ಮೈಸೂರು,ಡಿ.28– ಮೈಸೂರಿನ ರಾಜ್ಯ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ವತಿಯಿಂದ ಪ್ರತಿ ತಿಂಗಳ ಕಡೆಯ ವಾರದಂದು ಮಾಸಿಕ ಸರಣಿ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಡಿ. 31 ರಂದು ಬೆಳಿಗ್ಗೆ 11 ಗಂಟೆಗೆ ಆಯುಕ್ತರ ಕಚೇರಿ, ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಕರ್ನಾಟಕ ವಸ್ತುಪ್ರದರ್ಶನ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.


ಸುವರ್ಣ ಕರ್ನಾಟಕ ಸಂಭ್ರಮದ ಏಕೀಕರಣ ಹಿನ್ನೆಲೆ ಮತ್ತು ಚಳುವಳಿ ಕುರಿತು ಸಂಜೆ ಕಾಲೇಜು, ಪಿ.ಜಿ. ಇತಿಹಾಸ ವಿಭಾಗದ ಉಪನ್ಯಾಸಕರು ಮತ್ತು ಸಂಯೋಜಕರಾದ ಡಾ. ಪವಮಾನ ಆರ್.ಡಿ. ಅವರು ವಿಶೇಷ ಉಪನ್ಯಾಸ ನೀಡುವರು. ವಿದ್ಯಾರ್ಥಿಗಳು, ಸಂಶೋಧನಾಕಾರರು, ಇತಿಹಾಸ ಆಸಕ್ತರು ಹಾಗೂ ಸಾರ್ವಜನಿಕರು ಭಾಗವಹಿಸಬಹುದಾಗಿದೆ. ಹೆಚ್ಚಿನ ಮಾಹಿತಿಗೆ ದೂರವಾಣಿ ಸಂಖ್ಯೆ 0821-2424671 ಅನ್ನು ಸಂಪರ್ಕಿಸಬಹುದು ಎಂದು ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಬುಧವಾರ ಹುಟ್ಟುಹಬ್ಬ ಆಚರಿಸಿಕೊಂಡ ಚಾಮುಂಡೇಶ್ವರಿ ಕ್ಷೇತ್ರದ ಕಾಂಗ್ರೆಸ್ ನಾಯಕ ಹಾಗೂ ಜಿಪಂ ಮಾಜಿ ಸದಸ್ಯ ರಾಕೇಶ್ ಪಾಪಣ್ಣ ಅವರಿಗೆ ಹಿನಕಲ್ ಗ್ರಾಮ ಪಂಚಾಯಿತಿ ಸದಸ್ಯರಾದ ಕೆ.ಜಿ. ನಾಗರಾಜು, ದಿನೇಶ್, ರಮೇಶ್ ಹೊಟ್ಟೇಗೌಡ, ಚಂದ್ರ, ಧರ್ಮ, ಇತರರು ಶುಭಾಶಯ ಕೋರಿದರು.

ರಾಷ್ಟ್ರಕವಿ ಕುವೆಂಪು ಜಯಂತಿ ಪ್ರಯುಕ್ತ

ಇಂದು ಜಿಲ್ಲಾಡಳಿತದಿಂದ ವಿಶ್ವಮಾನವ ದಿನಾಚರಣೆ



ಮೈಸೂರು,ಡಿ.28(ಪಿಎಂ)– ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ರಾಷ್ಟ್ರಕವಿ ಕುವೆಂಪು ಅವರ ಜಯಂತಿ ಪ್ರಯುಕ್ತ ಡಿ.29ರಂದು ಮೈಸೂರಿನ ಕಲಾಮಂದಿರದಲ್ಲಿ ವಿಶ್ವ ಮಾನವ ದಿನಾಚರಣೆ ಹಮ್ಮಿಕೊಳ್ಳಲಾಗಿದೆ. ಅಂದು ಬೆಳಗ್ಗೆ 10.30ಕ್ಕೆ ಕವಿತ ಕಾಮತ್ ಮತ್ತು ತಂಡದಿಂದ ಕುವೆಂಪು ಗೀತ ಗಾಯನ ನಡೆಯಲಿದೆ. ಬೆಳಗ್ಗೆ 11.30ಕ್ಕೆ ಸಭಾ ಕಾರ್ಯಕ್ರಮ ನಡೆಯಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಉಪಸ್ಥಿತಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಉದ್ಘಾಟನೆ ನೆರವೇರಿಸಲಿದ್ದಾರೆ. ಶಾಸಕ ಕೆ.ಹರೀಶ್‌ಗೌಡ ಅಧ್ಯಕ್ಷತೆ ವಹಿಸಲಿದ್ದು, ಸಚಿವ ಕೆ.ವೆಂಕಟೇಶ್ ಗೌರವ ಉಪಸ್ಥಿತಿಯಲ್ಲಿ ಇರಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸಪ್ರಸಾದ್, ಸುಮಲತಾ ಅಂಬರೀಷ್ ಪಾಲ್ಗೊಳ್ಳಲಿದ್ದಾರೆ. ಶಾಸಕರು ಮತ್ತು ವಿಧಾನ ಪರಿಷತ್ ಸದಸ್ಯರು ಅತಿಥಿಗಳಾಗಿ ಪಾಲ್ಗೊಳ್ಳಲಿದ್ದು, ಹಾಸನ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಹೆಚ್.ಎಲ್.ಮಲ್ಲೇಶಗೌಡ ಮುಖ್ಯ ಭಾಷಣ ಮಾಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಒಂದನೇ ಪುಟದಿಂದ

ಹೊಸ ವರ್ಷಾಚರಣೆ ಮಸ್ತ್ ಮಜಾ

ಯಾವುದೇ ರೀತಿಯ ಊಟ, ಮದ್ಯದ ಬಾಟಲಿಗಳನ್ನು ಕೊಂಡೊಯ್ಯುವಂತಿಲ್ಲ. ಉತ್ತನಹಳ್ಳಿ ಕ್ರಾಸ್ ಗೇಟ್, ದೈವೀವನ ಗೇಟ್, ಚಾಮುಂಡಿಬೆಟ್ಟದ ಪಾದದ ಗೇಟ್, ಲಲಿತ ಮಹಲ್ ಗೇಟ್ ಮೂಲಕ ಡಿಸೆಂಬರ್ 31ರ ರಾತ್ರಿ 7 ಗಂಟೆಯಿಂದಲೇ ಪ್ರವೇಶ ನಿರ್ಬಂಧಿಸಲಾಗಿದೆ ಎಂದು ಪೊಲೀಸ್ ಆಯುಕ್ತರು ತಿಳಿಸಿದ್ದಾರೆ.

ಸಾರ್ವಜನಿಕರ ಮನೆ ಮುಂದೆ, ಹಾಸ್ಟೆಲ್, ವರ್ಕಿಂಗ್ ವುಮೆನ್ಸ್ ಹಾಸ್ಟೆಲ್ ಕಾಂಪೌಂಡ್ ಒಳಗೆ ಹೊಸ ವರ್ಷದ ಶುಭಾಶಯ ಕೋರುವ ನೆಪದಲ್ಲಿ ಅನಧಿಕೃತವಾಗಿ ಪ್ರವೇಶಿಸಿ ಕಿರಿಕಿರಿ ಉಂಟು ಮಾಡುವ, ಅಸಭ್ಯವಾಗಿ ವರ್ತಿಸುವ, ಬಾಟಲಿ ತೂರುವವರ ವಿರುದ್ಧ ಪ್ರಕರಣ ದಾಖಲಿಸಿ ಕಾನೂನು ರೀತಿಯ ಕ್ರಮ ಜರುಗಿಸಲಾಗುವುದು ಎಂದು ರಮೇಶ್ ಎಚ್ಚರಿಕೆ ನೀಡಿದ್ದಾರೆ. ರಸ್ತೆ, ಬಯಲು, ಪಾರ್ಕ್‌ಗಳು, ವಾಹನಗಳಲ್ಲಿ ಕುಳಿತು ಮದ್ಯಪಾನ ಮಾಡುವವರು, ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಪಾಲ್ಗೊಂಡು ಅವಾಂತರ ಸೃಷ್ಟಿಸುವುದು, ಸಾರ್ವಜನಿಕರಿಗೆ ಕಿರಿಕಿರಿ ಉಂಟು ಮಾಡುವವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ವಹಿಸಲಾಗುತ್ತದೆ. ಸಾರ್ವಜನಿಕರು ಶಾಂತಿಯಿಂದ ವರ್ತಿಸಿ ಹೊಸ ವರ್ಷಾಚರಣೆಯನ್ನು ಸಂಭ್ರಮದಿಂದ ಆಚರಿಸುವಂತೆ ಅವರು ಸಲಹೆ ನೀಡಿದ್ದಾರೆ. ಕಾನೂನು–ಸುವ್ಯವಸ್ಥೆ ಡಿಸಿಪಿ ಎಂ.ಮುತ್ತುರಾಜ್, ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಎಸ್.ಜಾನ್ಹವಿ, ಎಲ್ಲಾ ಉಪ ವಿಭಾಗಗಳ ಎಸಿಪಿಗಳು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

334 ಸಿಸಿ ಕ್ಯಾಮರಾ ಕಣ್ಗಾವಲು

ಸಂತೋಷ ಕೂಟಗಳಲ್ಲಿ ಹೋಟೆಲ್, ಕ್ಲಬ್ ರೆಸ್ಟೋರೆಂಟ್ ಮಾಲೀಕರು ಕೆವೈಸಿ (Know your Customer) ಶಿಷ್ಟಾಚಾರಗಳನ್ನು ಕಡ್ಡಾಯವಾಗಿ ಜಾರಿಗೊಳಿಸಬೇಕು ಎಂದು ಪೊಲೀಸ್ ಆಯುಕ್ತರು ತಿಳಿಸಿದ್ದಾರೆ.

ತಮ್ಮ ಸಂಸ್ಥೆಗೆ ಅಂದು ಬರುವ ಗ್ರಾಹಕರ ಪೂರ್ವಾಪರ ಮಾಹಿತಿಗಳನ್ನು ಪಡೆದುಕೊಳ್ಳಬೇಕು. ಏಕೆಂದರೆ ಒಂದು ವೇಳೆ ಯಾವುದೇ ತರಹದ ಅಹಿತಕರ ಘಟನೆ ಸಂಭವಿಸಿದ್ದಲ್ಲಿ ತಕ್ಷಣ ಅವರು ಯಾರೆಂದು ತಿಳಿಯಬೇಕು. ತನಿಖೆ ಹಾಗೂ ಕ್ರಮ ಕೈಗೊಳ್ಳಲು ಈ ಪದ್ಧತಿ ಅನುಕೂಲವಾಗುತ್ತದೆ ಎಂದು ಅವರು ತಿಳಿಸಿದರು.

ಮದ್ಯ ಪೂರೈಸಲು ಹಾಗೂ ಹೊಸ ವರ್ಷಾಚರಣೆ ಸಂತೋಷ ಕೂಟ ಆಯೋಜಿಸಲು ಅಬಕಾರಿ ಹಾಗೂ ಪೊಲೀಸ್ ಇಲಾಖೆಗೆ ಮಾಹಿತಿ ನೀಡಿ ಪೂರ್ವಾನುಮತಿ ಪಡೆದಿದ್ದರೆ, ಪಾರ್ಟಿಗೆ ಬರುವ ಗ್ರಾಹಕರ ಮಾಹಿತಿಯನ್ನು ನೀಡಲು ಸಹಕಾರಿಯಾಗುತ್ತದೆ ಎಂದು ಬಿ.ರಮೇಶ್ ಇದೇ ವೇಳೆ ನುಡಿದರು.

ವಿಜಯಕಾಂತ್ ವಿಧಿವಶ

ಅತ್ಯುತ್ತಮ ಪ್ರಯತ್ನ ಗಳ ಹೊರತಾಗಿಯೂ ಇಂದು (ಗುರು ವಾರ) ಬೆಳಗ್ಗೆ ಚಿಕಿತ್ಸೆ ಫಲಿಸದೆ ನಿಧನ ಹೊಂದಿದರು ಎಂದಿದ್ದಾರೆ.

154 ಚಿತ್ರಗಳಲ್ಲಿ ನಟಿಸಿದ್ದ ಸೂಪರ್ ಸ್ಟಾರ್: ವಿಜಯ ಕಾಂತ್ ಅವರ ಚಲನಚಿತ್ರ ಪಯಣ ಅದ್ಭುತ ವಾಗಿತ್ತು ಮತ್ತು ಅವರು ಅನೇಕ ಹಿಟ್ ಚಿತ್ರಗಳನ್ನು ನೀಡಿದ್ದು 154 ಚಿತ್ರಗಳಲ್ಲಿ ನಟಿಸಿದ್ದಾರೆ. ಚಲನ ಚಿತ್ರಗಳ ನಂತರ ಅವರು ರಾಜ ಕೀಯಕ್ಕೆ ಸೇರಿದರು, ಅಮ್ಮ ಡಿಎಂ ಡಿಕೆ ಸ್ಥಾಪಿಸಿದರು, ಎರಡು ಬಾರಿ ವಿಧಾನ ಸಭೆ ಸದಸ್ಯರಾಗಿ ಸೇವೆ ಸಲ್ಲಿಸಿದರು.

ವಿರೋಧ ಪಕ್ಷದ ನಾಯಕರೂ ಆಗಿದ್ದರು: ಅವರು 2011ರಿಂದ 2016ರವರೆಗೆ ತಮಿಳುನಾಡು ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕರಾದಾಗ ಅವರ ರಾಜಕೀಯ ಜೀವನ ಉತ್ತುಂಗ ದಲ್ಲಿತ್ತು. ಇತ್ತೀಚಿನ ವರ್ಷಗಳಲ್ಲಿ ವಿಜಯ ಕಾಂತ್ ಅವರ ಆರೋಗ್ಯ ಸ್ಥಿತಿ ಸರಿ ಇರದ ಕಾರಣ ರಾಜಕೀಯದಿಂದ ದೂರ ಉಳಿಯುವಂತೆ ಮಾಡಿತ್ತು.

ರೇಷ್ಮೆ ಕೃಷಿ ಭರಪೂರ ಮಾಹಿತಿ ದಸರಾ ವಸ್ತುಪ್ರದರ್ಶನದಲ್ಲಿ ಲಭ್ಯ



ಮೈಸೂರು, ಡಿ.28(ಎಂಕೆ)– ವೈಜ್ಞಾನಿಕ ಚಾಕಿ ಮಾಡಿ ನೋಡು... ತಿಂಗಳ ಬೆಳೆಯ ಮಾಡು... ಬಾಳು ಬೆಳದಿಂಗಳ ಬೀಡು...! ಎಂಬಂತೆ ಬರ–ನೆರೆ ಎರಡಕ್ಕೂ ಸೈ ಎನಿಸಿಕೊಂಡಿರುವ ರೇಷ್ಮೆ ಕೃಷಿಯ ಸಂಪೂರ್ಣ ಮಾಹಿತಿಗೊಮ್ಮೆ ಮೈಸೂರು ದಸರಾ ವಸ್ತುಪ್ರದರ್ಶನಕ್ಕೆ ಭೇಟಿ ನೀಡಲೇಬೇಕು...

ದಸರಾ ವಸ್ತುಪ್ರದರ್ಶನದ ಆವರಣದಲ್ಲಿ ಖಾಯಂ ಮಳಿಗೆ ಹೊಂದಿರುವ ಕೆಲ ಇಲಾಖೆಗಳ ಪೈಕಿ ರೇಷ್ಮೆ ಇಲಾಖೆಯೂ ಒಂದಾಗಿದ್ದು, ಮಳಿಗೆಯಲ್ಲಿ ರೇಷ್ಮೆ ಕೃಷಿಯ ಕುರಿತು ಸವಿವರವಾದ ಮಾಹಿತಿ ನೀಡಲಾಗುತ್ತಿದೆ. ರಾಜ್ಯದಲ್ಲಿ ಆವರಿಸುವ ಬರಗಾಲದ ಛಾಯೆಯಲ್ಲಿ ಕೃಷಿಕರ ಬಾಳಿಗೆ ಒಂದಷ್ಟು ಬೆಳಕು ನೀಡಬಲ್ಲದ್ದು ರೇಷ್ಮೆ ಮಾತ್ರವಾಗಿದ್ದು, ಬಹುತೇಕ ಕೃಷಿಕರ ಆಕರ್ಷಣೆಯೂ ಆಗಿದೆ.

ರೇಷ್ಮೆ ಸೀರೆಗಳಿಲ್ಲದ ಮನೆ ಇಲ್ಲ ಎಂಬ ಮಾತಿದ್ದು, ಮಹಿಳೆಯರು ಬಂಗಾರದಂತೆ ರೇಷ್ಮೆ ಉಡುಪುಗಳನ್ನು ಇಟ್ಟುಕೊಳ್ಳುವುದು ಹಾಗೂ ಬಳಸುವುದು ವಿಶೇಷ. ಬರ–ನೆರೆಗೆ ಜಗ್ಗದ ಹಿಪ್ಪುನೇರಳೆ ಸಸ್ಯ ಸೇವಿಸಿ ಬೆಳೆಯುವ ರೇಷ್ಮೆ ಹುಳು ಸೃಷ್ಟಿಸುವ ರೇಷ್ಮೆ ಕುಟ್ಟುವ ಗೂಡು ಎಲ್ಲಕ್ಕೂ ಮೌಲ್ಯವಿದ್ದು, ಅಪಾರ ಕೃಷಿಕರ ಆಶಾದಾಯಕ ಬೆಳೆಯಾಗಿದೆ.

ಮೊಟ್ಟೆ ಇಡುವಿಕೆ, ಮೊಟ್ಟೆಯಿಂದ ಮರಿ ಹೊರಬರುವಿಕೆ, ಚಾಕಿ ಹುಳುಗಳು(10 ದಿನಗಳ ಅವಧಿ), ಪ್ರೌಢಾವಸ್ಥೆ ಹುಳುಗಳು(14 ದಿನಗಳು), ಚಂದ್ರಿಕೆ ಮೇಲಿನ ಗೂಡುಗಳು(6 ದಿನಗಳು), ಗೂಡುಗಳು, ಗೂಡಿನಿಂದ ಹೊರಬಂದ ಚಿಟ್ಟೆ ಹಾಗೂ ಚಿಟ್ಟೆ ಜೋಡಣೆ ಸೇರಿದಂತೆ ಸಂಪೂರ್ಣ ರೇಷ್ಮೆ ಕೃಷಿಯ ಮಾಹಿತಿಯನ್ನು ತಿಳಿಸಲಾಗುತ್ತಿದೆ. ಜವಳಿ ಜಗತ್ತಿನ ರಾಣಿ ಎಂದೇ ಕರೆಯಲ್ಪಡುವ ರೇಷ್ಮೆ ಸಿರಿ ಸಮೃದ್ಧಿಗೆ ನಾಂದಿಯಾಗುವುದಲ್ಲದೆ ಸಾವಿರಾರು ಜೀವಕ್ಕೆ ನೆಲೆ ನೀಡುವ ಕೃಷಿ ಇದಾಗಿದೆ.

ರೇಷ್ಮೆ ಗೂಡಿನ ಪ್ರತಿ ಅಂಶವೂ ಅವಶ್ಯವಿದ್ದು, ಖಾಲಿ ಗೂಡಿನಿಂದಲೂ ಆದಾಯ ಗಳಿಸಬಹುದಾಗಿದೆ. ರೇಷ್ಮೆಯಿಂದ ವಸ್ತ್ರಗಳು ಸಿದ್ಧವಾದರೆ, ರೇಷ್ಮೆ ಗೂಡಿನಿಂದ ಅಲಂಕಾರಿಕ ಹಾರಗಳು ಸಿದ್ಧವಾಗುತ್ತವೆ. ಈ ಮೂಲಕ ಕಾಯಕಕ್ಕೆ ಕಲ್ಪವಾಗಿ, ಕಷ್ಟದ ಸಂದರ್ಭದಲ್ಲಿ ಜೀವನಕ್ಕೆ ಜ್ಯೋತಿಯಾಗಿ, ಉದ್ಯೋಗಕ್ಕೆ ದಾರಿಯಾಗಿರುವ ಸ್ಫೂರ್ತಿದಾಯಕ ರೇಷ್ಮೆ ಕೃಷಿಯ ಒಲವಿದ್ದವರು ವಸ್ತುಪ್ರದರ್ಶನಕ್ಕೆ ಭೇಟಿ ನೀಡಬಹುದಾಗಿದೆ.



ರೇಷ್ಮೆ ಕೃಷಿ ದರ್ಶನ: ಒಂದೇ ಸ್ಥಳದಲ್ಲಿ ರೇಷ್ಮೆ ಕೃಷಿಯ ಸಂಪೂರ್ಣ ದರ್ಶನ ಮಾಡಲಾಗಿದೆ. ಮೊಟ್ಟೆಯಿಂದ ಹಿಡಿದು ಚಿಟ್ಟೆಯಾಗುವವರೆಗೆ ಹುಳುವಿನ ಪೋಷಣೆ, ಅದಕ್ಕಾಗಿ ಬಳಸುವ ಪರಿಕರಗಳು, ಹುಳುಮೆ ಯಂತ್ರಗಳು ಹಾಗೂ ರೇಷ್ಮೆ ಗೂಡಿನಿಂದ ತಯಾರಾದ ಬಣ್ಣ ಬಣ್ಣದಿಂದ ಕೂಡಿದ ಆಕರ್ಷಕ ಹಾರಗಳು ಮನ ಸೆಳೆಯುತ್ತಿದೆ. ಅಲ್ಲದೆ ದಿನವಿಡೀ ಮಳಿಗೆಯೊಳಗೆ ರೇಷ್ಮೆ ಸೀರೆಗಳ ಮಾರಾಟ ವಾಗಲಿದ್ದು, ಮಾಹಿತಿ ಜೊತೆಗೆ ಇಷ್ಟದ ಸೀರೆಗಳನ್ನು ಖರೀದಿಸುವ ಅವಕಾಶ ಕಲ್ಪಿಸಲಾಗಿದೆ.

ನಷ್ಟವಿಲ್ಲದ ಕೃಷಿ: ಬರಗಾಲದಲ್ಲೂ ಆದಾಯ ತರುವ ರೇಷ್ಮೆ ಕೃಷಿ, ನಷ್ಟ ವಿಲ್ಲದ ಕೃಷಿಯಾಗಿದೆ. ಕಡಿಮೆ ಖರ್ಚಿನಲ್ಲಿ ಉತ್ತಮ ಲಾಭ ಪಡೆಯಬಹುದಾಗಿದ್ದು, ರೇಷ್ಮೆ ಹುಳುಗಳ ಪೋಷಣೆ ಕಡೆಗೆ ಆದ್ಯತೆ ನೀಡಿದರೆ ಸಾಕು ಆದಾಯ ಗಳಿಸಬಹುದು. ರೇಷ್ಮೆ ಗೂಡಿನ ಯಾವುದೂ ಕೂಡ ವ್ಯರ್ಥವಾಗುವುದಿಲ್ಲ ಎಂದು ರೇಷ್ಮೆ ಇಲಾಖೆ ಸಿಬ್ಬಂದಿಗಳಾದ ನಂದಕುಮಾರ್ ಹಾಗೂ ಕೃಷ್ಣಪ್ಪ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಪ್ರೊ.ಭಗವಾನ್‌ಗೆ ಇಂದು ಸನ್ಮಾನ

ಮೈಸೂರು, ಡಿ.28– ಕನ್ನಡ ರಾಜ್ಯೋತ್ಸವ ಹಾಗೂ ರಾಷ್ಟ್ರಕವಿ ಕುವೆಂಪು ಅವರ ಜನ್ಮದಿನದ ಪ್ರಯುಕ್ತ ಅಖಿಲ ಭಾರತ ವಕೀಲರ ಒಕ್ಕೂಟ (ಎಐಎಲ್‌ಯು)ದ ಮಂಡ್ಯ ಜಿಲ್ಲಾ ಘಟಕದ ವತಿಯಿಂದ ವೈಚಾರಿಕ ಸಾಹಿತಿ ಪ್ರೊ.ಕೆ.ಎಸ್.ಭಗವಾನ್ ಅವರನ್ನು ಅವರ ನಿವಾಸದಲ್ಲೇ ಡಿ.29 ರಂದು ಬೆಳಿಗ್ಗೆ 10.30ಕ್ಕೆ ಸನ್ಮಾನಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಮಂಡ್ಯ ಜಿಲ್ಲಾಧ್ಯಕ್ಷರೂ ಆದ ಹಿರಿಯ ವಕೀಲ ಬಿ.ಟಿ.ವಿಶ್ವನಾಥ್, ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯರಾದ ಪಿ.ಪಿ.ಬಾಬು ರಾಜ್, ಆರ್.ಜಗನ್ನಾಥ್, ತಿಮ್ಮೇಗೌಡ, ಎಐಎಲ್‌ಯು ಕಾನೂನು ವಿದ್ಯಾರ್ಥಿ ಸಂಘಟನೆಯ ಕಿಶೋರ್ ಮತ್ತಿತರರು ಉಪಸ್ಥಿತರಿರಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ನಾರಾಯಣಗೌಡ ಸೇರಿದಂತೆ 29 ಮಂದಿಗೆ 14 ದಿನ ನ್ಯಾಯಾಂಗ ಬಂಧನ

ಬೆಂಗಳೂರು: ಕನ್ನಡ ನಾಮಫಲಕಕ್ಕೆ ಒತ್ತಾಯಿಸಿ ನಡೆದ ಪ್ರತಿಭಟನೆ ವೇಳೆ ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ ನಾರಾಯಣಗೌಡ ಸೇರಿದಂತೆ 29 ಕಾರ್ಯಕರ್ತರನ್ನು 14 ದಿನ ನ್ಯಾಯಾಂಗ ಬಂಧನಕ್ಕೆ ನೀಡಲಾಗಿದೆ.

ಡಿಸೆಂಬರ್ 27ರಂದು (ಬುಧವಾರ) ಬೆಂಗಳೂರಿನಲ್ಲಿ ಕನ್ನಡ ನಾಮಫಲಕಗಳಿಗೆ ಆಗ್ರಹಿಸಿ ನಡೆಸಲಾದ ಚಳವಳಿಗೆ ಸಂಬಂಧಿಸಿ ಬಂಧಿತರಾದ ಕರ್ನಾಟಕ ರಕ್ಷಣಾ ವೇದಿಕೆಯ ಅಧ್ಯಕ್ಷ ನಾರಾಯಣಗೌಡ ಸೇರಿದಂತೆ 29 ಜನರನ್ನು ದೇವನಹಳ್ಳಿಯಲ್ಲಿ ನ್ಯಾಯಾಧೀಶರ ಮುಂದೆ ಇಂದು ಬೆಳಗ್ಗೆ ಹಾಜರುಪಡಿಸಲಾಗಿತ್ತು ನಾರಾಯಣಗೌಡರು ಸೇರಿದಂತೆ ಎಲ್ಲರನ್ನು ನ್ಯಾಯಾಂಗ ಬಂಧನಕ್ಕೆ ನೀಡಿ ನ್ಯಾಯಾಧೀಶರು ಆದೇಶ ಹೊರಡಿಸಿದ್ದಾರೆ.

ಜನವರಿ 10ರವರೆಗೆ ನ್ಯಾಯಾಂಗ ಬಂಧನಕ್ಕೆ ನೀಡಲಾಗಿದ್ದು ಎಲ್ಲಾ ಬಂಧಿತರನ್ನು ಪರಪ್ಪನ ಅಗ್ರಹಾರ ಕಾರಾಗೃಹಕ್ಕೆ ಶಿಫ್ಟ್ ಮಾಡಲಾಗಿದೆ. ಬಂಧನದ ಬೆನ್ನಲ್ಲೇ ಎಲ್ಲಾ ಸಚಿವರ ನಿವಾಸದ ಮುಂದೆ ಪ್ರತಿಭಟನೆ ನಡೆಸುವಂತೆ ನಾರಾಯಣಗೌಡರು ಕರೆ ಕೊಟ್ಟಿದ್ದಾರೆ. ಬೆಳಗ್ಗೆಯಿಂದ ಊಟ ನೀಡಿಲ್ಲ, ಔಷಧಿಯನ್ನು ನೀಡಿಲ್ಲ. ನನ್ನ ಮೊಬೈಲ್ ಕಸಿದು ನೋವುಂಟು ಮಾಡಿದ್ದಾರೆ. ನಮ್ಮ ಮೇಲೆ ದಬ್ಬಾಳಿಕೆ ಮಾಡಿ ಕಾರ್ಯಕರ್ತರನ್ನು ಬಂಧನ ಮಾಡಿದ್ದಾರೆ ಎಂದು ನಾರಾಯಣಗೌಡರು ಆರೋಪಿಸಿದರು.

ಅವರನ್ನು ಪರಪ್ಪನ ಅಗ್ರಹಾರ ಜೈಲಿಗೆ ಕಳುಹಿಸಲಾಗಿದೆ. ಜೈಲಿಗೆ ಹಾಕಲು ಕರೆದುಕೊಂಡು ಹೋಗುವ ವೇಳೆ ಮಾಧ್ಯಮಗಳ ಜತೆ ಮಾತನಾಡಿದ ನಾರಾಯಣಗೌಡರು ಇದೊಂದು ಮುಠ್ಠಾಳ ಸರ್ಕಾರ ಎಂದು ಆಕ್ರೋಶ ವ್ಯಕ್ತಪಡಿಸಿದರು. ಕರವೇ ನಾರಾಯಣಗೌಡ ವಿರುದ್ಧ ಚಿಕ್ಕಜಾಲ ಪೊಲೀಸ್ ಠಾಣೆಯಲ್ಲಿ ಪ್ರತ್ಯೇಕ ಮೂರು ಪ್ರಕರಣಗಳು ದಾಖಲಾಗಿವೆ. ಹೆದ್ದಾರಿ ತಡೆ, ಕರ್ತವ್ಯ ನಿರತ ಪೊಲೀಸ್ ಸಿಬ್ಬಂದಿ ಮೇಲೆ ಹಲ್ಲೆ, (IPC 353) ಪ್ರಕರಣವನ್ನು ನಾರಾಯಣಗೌಡ ಸೇರಿ ಸಂಘಟನೆಯ ಇನ್ನಿತರ ಕಾರ್ಯಕರ್ತರ ಮೇಲೆ ದಾಖಲು ಮಾಡಿಕೊಳ್ಳಲಾಗಿದೆ. ನಾರಾಯಣಗೌಡರ ಜತೆ 29 ಮಂದಿಯನ್ನು ಜೈಲಿಗೆ ಹಾಕಲಾಗಿದೆ.

ಪ್ರತಿಭಟನೆ ವೇಳೆ ಸಾರ್ವಜನಿಕ ಆಸ್ತಿಪಾಸ್ತಿಗೆ ಹಾನಿ ಮಾಡಿದ ಆರೋಪ ದಾಖಲಾಗಿದೆ. ನಾರಾಯಣಗೌಡ ಸೇರಿ 6 ಮಂದಿ ವಿರುದ್ಧ ಪಿಎಸ್‌ಐ ಲತೀಶ್ ದೂರಿನನ್ವಯ ಚಿಕ್ಕಜಾಲ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.


ಮುಠ್ಠಾಳ ಸರ್ಕಾರ ಎಂದು ಕರವೇ ಆಕ್ರೋಶ




ಪ್ರಮುಖ ಘಟನಾವಳಿ



ಜನವರಿ


ಸಿದ್ದೇಶ್ವರ ಶ್ರೀಗಳು


ಎಸ್.ಎಂ.ಕೃಷ್ಣ


ಎಸ್.ಎಲ್.ಭೈರಪ್ಪ


ಬಿ.ಎಲ್.ಸಂತೋಷ್

ಜ. 1 ಹೊಸ ವರ್ಷದಂದು ಪ್ರವಾಸಿ ತಾಣ, ದೇವಾಲಯಗಳಲ್ಲಿ ಜನಸಾಗರ
ಜ. 1 ಹೆಚ್.ಡಿ.ಕೋಟೆ ಬಳಿ ಕಾಡಾನೆ ದಾಳಿಗೆ ವಾಚರ್ ಬಲಿ
ಜ. 2 ನಾಡಿನ ಸಂತ, ನಡೆದಾಡುವ ದೇವರು, ಜ್ಞಾನಯೋಗಿ ಸಿದ್ದೇಶ್ವರ ಶ್ರೀಗಳು ಅಸ್ತಂಗತ
ಜ. 3 ಪಂಚಭೂತಗಳಲ್ಲಿ ಸಿದ್ದೇಶ್ವರ ಶ್ರೀಗಳು ಲೀನ
ಜ. 4 ಸಕ್ರಿಯ ರಾಜಕಾರಣಕ್ಕೆ ಎಸ್.ಎಂ.ಕೃಷ್ಣ ಗುಡ್‌ಬೈ



ಜ. 4 ಸಿಎಫ್‌ಟಿಆರ್‌ಐ ಆವರಣದಲ್ಲಿ ಜೋಡಿ ಚಿರತೆ ಪ್ರತ್ಯಕ್ಷ
ಜ. 6 ಹಾವೇರಿಯಲ್ಲಿ ಅಕ್ಷರ ಜಾತ್ರೆಗೆ ಚಾಲನೆ
ಜ. 7 ಮೈಸೂರಲ್ಲಿ ಬಿಜೆಪಿ ಎಸ್‌ಸಿ ಮೋರ್ಚಾ ರಾಷ್ಟ್ರೀಯ ಕಾರ್ಯಕಾರಿಣಿ ಉದ್ಘಾಟಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಎಸ್‌ಸಿ-ಎಸ್‌ಟಿ ಸಮುದಾಯ ಭಾರತದ ಅಸ್ಮಿತೆ
ಜ. 8 ಕ್ರೆಡಲ್ ಅಧಿಕಾರಿ ಡಿ.ಕೆ.ದಿನೇಶ್‌ಕುಮಾರ್ ಹೃದಯಾಘಾತದಿಂದ ಸಾವು
ಜ. 9 ಚಾಮುಂಡಿಬೆಟ್ಟದ ದೇವಿಕೆರೆ ಪುನರ್‌ಜೀವನಗೊಳಿಸುವ ಕಾರ್ಯ
ಜ. 10 ಬೆಂಗಳೂರಲ್ಲಿ ಮೆಟ್ರೋ ಪಿಲ್ಲರ್ ಕುಸಿದು ತಾಯಿ-ಮಗು ಸಾವು
ಜ. 11 ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ 200 ಯೂನಿಟ್ ವಿದ್ಯುತ್ ಉಚಿತ: ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಭರವಸೆ


ಶರದ್ ಯಾದವ್

ಜ. 12 ಹಿರಿಯ ಸಮಾಜವಾದಿ ನಾಯಕ ಶರದ್ ಯಾದವ್ ನಿಧನ
ಜ. 12 ಹುಬ್ಬಳ್ಳಿಯಲ್ಲಿ ರಾಷ್ಟ್ರೀಯ ಯುವಜನೋತ್ಸವ: ಮೋದಿ ಮೆಗಾ ರೋಡ್ ಶೋ
ಜ. 13 ಗುಜರಾತ್‌ನಲ್ಲಿ ಸ್ಯಾಂಟ್ರೋ ರವಿ ಬಂಧನ
ಜ. 14 ಜನರಲ್ ಕೆ.ಎಸ್.ತಿಮ್ಮಯ್ಯ ಅವರ ಪುತ್ರಿ ನಿಧನ




ಜ. 18 ಸುತ್ತೂರು ಜಾತ್ರಾ ಮಹೋತ್ಸವಕ್ಕೆ ವರ್ಣರಂಜಿತ ಚಾಲನೆ
ಜ. 19 ಹಿರಿಯ ಸಮಾಜವಾದಿ ಪ.ಮಲ್ಲೇಶ್ ನಿಧನ
ಜ. 21 ಬಿ.ಎಲ್.ಸಂತೋಷ್‌ಗೆ ಬಿಜೆಪಿ ಚುನಾವಣಾ ಉಸ್ತುವಾರಿ
ಜ. 22 ಹೆಚ್.ಡಿ.ಕೋಟೆ ಬಳಿ ಹುಲಿ ದಾಳಿಗೆ ಯುವಕ ಬಲಿ
ಜ. 25 ಎಸ್.ಎಂ. ಕೃಷ್ಣಗೆ ಪದ್ಮವಿಭೂಷಣ, ಎಸ್.ಎಲ್.ಭೈರಪ್ಪ ಪದ್ಮಭೂಷಣರು, ಶ್ರೀಮತಿ ರಾಣಿ ಮಾಚಯ್ಯ, ಖಾದರ್ ವಲ್ಲಿ ದುಡೆಕುಲ, ಪಿಂಡಿಪಾಪನಹಳ್ಳಿ ಮುನಿವೆಂಕಟಪ್ಪ, ಶಾ ರಷೀದ್, ಅಹಮದ್ ಖಾದ್ರಿ, ಸುಬ್ಬರಾಮನ್ ಅವರಿಗೆ ಪದ್ಮಶ್ರೀ ಪ್ರಶಸ್ತಿ
ಜ. 29 ಹಾಲಾಳು ಗ್ರಾಮದಲ್ಲಿ ಸಾಹಸಸಿಂಹ ವಿಷ್ಣುವರ್ಧನ್ ಸ್ಮಾರಕ ಲೋಕಾರ್ಪಣೆ
ಜ. 31 ಮಾಜಿ ಕೇಂದ್ರ ಕಾನೂನು ಸಚಿವೆ ಶಾಂತಿಭೂಷಣ್ ಇನ್ನಿಲ್ಲ
ಜ. 31 ಮೈಸೂರು ವನ್ಯಜೀವಿ ಉಪವಿಭಾಗದಲ್ಲಿ ಚಿರತೆ ಟಾಸ್ಕ್ ಫೋರ್ಸ್ ರಚನೆ

ಫೆಬ್ರವರಿ


ವಾಣಿ ಜಯರಾಂ


ಫರ್ವೇಜ್ ಮುಷರಫ್


ಪ್ರಧಾನಿ ಮೋದಿ


ಬಿ.ಎಸ್.ಯಡಿಯೂರಪ್ಪ

ಫೆ. 1 ಆದಾಯ ತೆರಿಗೆ ವಿನಾಯಿತಿ ಮಿತಿ 7 ಲಕ್ಷಕ್ಕೆ ಏರಿಕೆ
ಫೆ. 1 ದೇಶಾದ್ಯಂತ 157 ನರ್ಸಿಂಗ್ ಕಾಲೇಜು ಸ್ಥಾಪನೆ
ಫೆ. 3 ವಿದ್ಯಾರ್ಥಿಗಳ ಕೊರತೆ ಹಿನ್ನೆಲೆ: 5124 ಸರ್ಕಾರಿ ಕಾಲೇಜು ಬಂದ್‌ಗೆ ಶಿಫಾರಸು
ಫೆ. 4 ಹಿರಿಯ ಗಾಯಕಿ ವಾಣಿ ಜಯರಾಂ ನಿಗೂಢ ಸಾವು
ಫೆ. 5 ಪಾಕಿಸ್ತಾನ ಮಾಜಿ ಅಧ್ಯಕ್ಷ ಫರ್ವೇಜ್ ಮುಷರಫ್ ನಿಧನ
ಫೆ. 5 ಚಾಮುಂಡೇಶ್ವರಿಯಲ್ಲಿ ಜಿಟಿಡಿ ಮಹಾಶಕ್ತಿ ಪ್ರದರ್ಶನ



ಜಿ.ಟಿ.ದೇವೇಗೌಡ

ಫೆ. 7 ಮೈಸೂರು-ಬೆಂಗಳೂರು ಹೆದ್ದಾರಿಯಲ್ಲಿ ದರೋಡೆ
ಫೆ. 11 ನನ್ನ ಸಾಹಿತ್ಯ ಶತಮಾನಗಳ ಕಾಲ ಉಳಿದರೆ ಅದೇ ನಿಜವಾದ ಶಕ್ತಿ: ಡಾ.ಎಸ್.ಎಲ್. ಭೈರಪ್ಪ
ಫೆ. 12 ಬೆಂಗಳೂರಲ್ಲಿ ಪ್ರಧಾನಿ ನರೇಂದ್ರ ಮೋದಿ
ಫೆ. 13 ಬೆಂಗಳೂರಲ್ಲಿ ಏಷ್ಯಾದ ಅತೀ ದೊಡ್ಡ ವೈಮಾನಿಕ ಪ್ರದರ್ಶನಕ್ಕೆ ಪ್ರಧಾನಿ ಮೋದಿ ಚಾಲನೆ
ಫೆ. 13 ಉದ್ಯಮಿ, ಆತನ ಪುತ್ರನ ಅಪಹರಣ; ಒತ್ತೆ ಹಣ ವಸೂಲಿ ಪ್ರಕರಣ ಬಯಲು 10 ಮಂದಿ ಕುಖ್ಯಾತ ಕ್ರಿಮಿನಲ್‌ಗಳ ಬಂಧನ



ಫೆ. 14 ಗೋಣಿಕೊಪ್ಪದಲ್ಲಿ ತಾತ-ಮೊಮ್ಮಗನ ಬಲಿ ಪಡೆದ ಹುಲಿ ಸೆರೆ
ಫೆ. 21 ಮಾದಪ್ಪನ ಬೆಟ್ಟದಲ್ಲಿ ಭಕ್ತಿಭಾವದ ಶಿವರಾತ್ರಿ ರಥೋತ್ಸವ
ಫೆ. 22 ವಿಧಾನಸಭೆಯಲ್ಲಿ ಯಡಿಯೂರಪ್ಪ ವಿದಾಯದ ಭಾಷಣ
ಫೆ. 27 ಶಿವಮೊಗ್ಗದಲ್ಲಿ ಪ್ರಧಾನಿ ಮೋದಿಯವರಿಂದ ವಿಮಾನ ನಿಲ್ದಾಣ ಉದ್ಘಾಟನೆ

ಮಾರ್ಚ್



ಮಲೆಯೂರು ಗುರುಸ್ವಾಮಿ


ಧ್ರುವನಾರಾಯಣ್


ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ವೇ

ಮಾ.1 ಗೃಹ ಬಳಕೆ ಗ್ಯಾಸ್ 50 ರೂ., ವಾಣಿಜ್ಯ 360 ರೂ. ಹೆಚ್ಚಳ
ಮಾ.1 ಮಹದೇಶ್ವರ ಬೆಟ್ಟದಲ್ಲಿ ಬಿಜೆಪಿ ವಿಜಯ ಸಂಕಲ್ಪ ಯಾತ್ರೆಗೆ ಜೆ.ಪಿ.ನಡ್ಡಾರಿಂದ ಚಾಲನೆ
ಮಾ.3 ಬಿಜೆಪಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಪುತ್ರನ ಲಂಚಾವತಾರ: ಲೋಕಾಯುಕ್ತ ದಾಳಿಯಲ್ಲಿ 8.12 ಕೋಟಿ ನಗದು ಜಪ್ತಿ
ಮಾ.4 ಚಾಮುಂಡಿಬೆಟ್ಟಕ್ಕೆ ಕಿಡಿಗೇಡಿಗಳಿಂದ ಬೆಂಕಿ: ಅಪಾರ ಪ್ರಮಾಣದ ಸಸ್ಯ ಸಂಪತ್ತು ನಾಶ
ಮಾ.5 ಮೈಸೂರಿನ ಬಿಜೆಪಿ ಭರ್ಜರಿ ವಿಜಯ ಸಂಕಲ್ಪ ಯಾತ್ರೆ
ಮಾ.4 ಮೈಸೂರಲ್ಲಿ ಕಿಡಿಗೇಡಿಗಳಿಂದ ಚಾಮುಂಡಿಬೆಟ್ಟದ ತಪ್ಪಲು, ಸೀವೇಜ್ ಫಾರಂ ಸೇರಿ ಐದು ಕಡೆ ಬೆಂಕಿ
ಮಾ.7 ಮೈಸೂರಲ್ಲಿ ಕೇಂದ್ರ ರಾಜ್ಯ ಸರ್ಕಾರದ ಯೋಜನೆಯ 53 ಸಾವಿರ ಫಲಾನುಭವಿಗಳ ಸಮ್ಮೇಳನ
ಮಾ.8 ಹಿರಿಯ ಸಾಹಿತಿ ಮಲೆಯೂರು ಗುರುಸ್ವಾಮಿ ನಿಧನ
ಮಾ.9 ಲಂಚ ಸ್ವೀಕರಿಸುವಾಗ ಡಿಸಿಎಫ್ ಪೂರ್ಣಿಮಾ ಲೋಕಾಯುಕ್ತ ಬಲೆಗೆ
ಮಾ.10 ಬೆಳ್ಳೂರು ಸಹೋದರಿಯರು ಖ್ಯಾತಿಯ ನೃತ್ಯ ಕಲಾವಿದೆ ಉಮಾರಾವ್ ನಿಧನ
ಮಾ.10 ಮಂಡ್ಯ ಸಂಸದೆ ಸುಮಲತಾ ಅಂಬರೀಷ್ ಬಿಜೆಪಿ ಸೇರ್ಪಡೆ
ಮಾ.11 ಮಾಜಿ ಸಂಸದ ಹಾಗೂ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಇನ್ನಿಲ್ಲ
ಮಾ.12 ಮೋದಿಯವರಿಂದ ಮೈಸೂರು-ಬೆಂಗಳೂರು ದಶಪಥ ಎಕ್ಸ್‌ಪ್ರೆಸ್ ವೇ ಲೋಕಾರ್ಪಣೆ
ಮಾ.12 ಜೆಡಿಎಸ್ ಭದ್ರಕೋಟೆಯಲ್ಲಿ ಮೋದಿ ರೋಡ್ ಶೋ ಮೂಲಕ ಶಕ್ತಿ ಪ್ರದರ್ಶನ
ಮಾ.12 ಸಕಲ ಸರ್ಕಾರಿ ಗೌರವಗಳೊಂದಿಗೆ ಧ್ರುವನಾರಾಯಣ್ ಅಂತ್ಯಕ್ರಿಯೆ
ಮಾ.13 ಮುಡಾದಿಂದ 4.5 ಕೋಟಿ ಉಳಿತಾಯ ಬಜೆಟ್ ಮಂಡನೆ
ಮಾ.13 ಮೊದಲ ಹಂತದಲ್ಲಿ 11,133 ಪೌರಕಾರ್ಮಿಕರ ಕಾಯಂ
ಮಾ.13 ಮಾಜಿ ರಾಯಭಾರಿ ಮಾಧವನ್ ನಿಧನ
ಮಾ.18 ಮಹದೇಶ್ವರಬೆಟ್ಟದಲ್ಲಿ 108 ಅಡಿಯ ಮಾದಪ್ಪನ ಪ್ರತಿಮೆ ಲೋಕಾರ್ಪಣೆ
ಮಾ.20 ಪದವೀಧರ ನಿರುದ್ಯೋಗ ಯುವಕರಿಗೆ ಕಾಂಗ್ರೆಸ್‌ನಿಂದ ಮತ್ತೊಂದು ವಾಗ್ದಾನ 3 ಸಾವಿರ ರೂ., ಡಿಪ್ಲೊಮಾದಾರರಿಗೆ 1500 ರೂ. ಭತ್ಯೆ
ಮಾ.23 ಮೈಸೂರು ವಿವಿ ನೂತನ ಕುಲಪತಿಯಾಗಿ ಪ್ರೊ. ಎನ್.ಕೆ. ಲೋಕನಾಥ್
ಮಾ.23 ಕಳ್ಳರ ಹೆಸರೆಲ್ಲ ಮೋದಿ ಎಂದೇ ಇರುತ್ತದೆ ಏಕೆ!? ರಾಹುಲ್‌ಗೆ 2 ವರ್ಷ ಜೈಲು ಶಿಕ್ಷೆ
ಮಾ.23 ಶ್ರವಣಬೆಳಗೊಳದ ಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ನಿಧನ
ಮಾ.24 ಒಕ್ಕಲಿಗರಿಗೆ ಶೇ. 6, ವೀರಶೈವ ಲಿಂಗಾಯಿತರಿಗೆ ಶೇ. 7ಕ್ಕೆ ಮೀಸಲಾತಿ ಹೆಚ್ಚಳ
ಮಾ.24 ಕಂಟಕವಾಯ್ತು ಮಾನಹಾನಿ ಪ್ರಕರಣ: ಸಂಸದ ಸ್ಥಾನದಿಂದ ರಾಹುಲ್ ಗಾಂಧಿ ಅನರ್ಹ
ಮಾ.25 ಕಾಂಗ್ರೆಸ್ 124 ಅಭ್ಯರ್ಥಿಗಳ ಮೊದಲ ಪಟ್ಟಿ ಪ್ರಕಟ
ಮಾ.26 ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಸಮ್ಮುಖದಲ್ಲಿ ಪಂಚರತ್ನ ಯಾತ್ರೆಗೆ ಅದ್ದೂರಿ ತೆರೆ: ಮೈಸೂರಲ್ಲಿ ಜೆಡಿಎಸ್ ಮಹಾಶಕ್ತಿ ಪ್ರದರ್ಶನ
ಮಾ.27 ಕೋಲಾರ ನೆಲದಿಂದಲೇ ರಾಹುಲ್ ಗಾಂಧಿ ಚುನಾವಣಾ ರಣಕಹಳೆ
ಮಾ.27 ಲಂಚಾವತಾರ: ಮಾಡಾಳ್ ವಿರೂಪಾಕ್ಷಪ್ಪ ಬಂಧನ
ಮಾ.27 ಮಾಜಿ ಸಿಎಂ ಯಡಿಯೂರಪ್ಪ ಅವರ ಮನೆ ಮೇಲೆ ಕಲ್ಲು ತೂರಾಟ
ಮಾ.29 ವಿಧಾನಸಭಾ ಚುನಾವಣೆ ಘೋಷಣೆ: ಮತದಾನ ಮೇ 10, ಫಲಿತಾಂಶ ಮೇ 13
ಮಾ.31 ಮಂಗಳೂರು ಹೋಟೆಲ್‌ನಲ್ಲಿ ಪತ್ನಿ, ಪುತ್ರಿಯರ ಕೊಂದು ಮೈಸೂರು ಉದ್ಯಮಿ ಆತ್ಮಹತ್ಯೆ

ಏಪ್ರಿಲ್


ಅಮಿತ್ ಶಾ



ಜಗದೀಶ್‌ಶೆಟ್ಟರ್


ಲಕ್ಷ್ಮಣ್ ಸವದಿ


ಸಿ.ಕೆ.ಎನ್.ರಾಜಾ



ಏ. 1 ಮೇಲುಕೋಟೆ ಚೆಲುವನ ವೈರಮುಡಿ ವೈಭವದ ಉತ್ಸವ
ಏ. 2 ನಂಜನಗೂಡಲ್ಲಿ ವಿಜೃಂಭಣೆಯ ಪಂಚ ಮಹಾರಥೋತ್ಸವ
ಏ. 2 1960ರ ದಶಕದ ಸ್ಟಾರ್ ಕ್ರಿಕೆಟಿಗ ಸಲೀಂ ದುರಾನಿ ನಿಧನ
ಏ. 3 ಮಂಡ್ಯ ಜಿಲ್ಲೆಯಲ್ಲಿ ಎರಡು ಪ್ರತ್ಯೇಕ ಅಪಘಾತ; ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ಸೇರಿ 31ಕ್ಕೂ ಅಧಿಕ ಮಂದಿಗೆ ಗಾಯ
ಏ. 5 ರಾಷ್ಟ್ರಪತಿಗಳಿಂದ ಸಾಹಿತಿ ಡಾ. ಎಸ್.ಎಲ್. ಭೈರಪ್ಪ, ಇನ್ಫೋಸಿಸ್ ಫೌಂಡೇಷನ್‌ನ ಶ್ರೀಮತಿ ಸುಧಾಮೂರ್ತಿ, ಕೊಡಗಿನ ಶ್ರೀಮತಿ ರಾಣಿ ಮಾಚಯ್ಯ, ಡಾ. ಖಾದರ್ ವಲ್ಲಿ ದುಡೇಕುಲಾ ಗಣ್ಯರಿಗೆ ಪದ್ಮಶ್ರೀ ಪ್ರಶಸ್ತಿ ಪ್ರದಾನ
ಏ. 5 ಬಿಜೆಪಿಗೆ ನಟ ಸುದೀಪ್ ಪರೋಕ್ಷ ಬೆಂಬಲ
ಏ. 6 ಕಾಂಗ್ರೆಸ್‌ನ 42 ಅಭ್ಯರ್ಥಿಗಳ ಎರಡನೇ ಪಟ್ಟಿ ಪ್ರಕಟ
ಏ. 8 ಮೈಸೂರಲ್ಲಿ ಪ್ರಧಾನಿ ಮೋದಿ, ಬಂಡೀಪುರಕ್ಕೆ ಪ್ರಯಾಣ
ಏ. 9 ಹುಲಿ ಸಂರಕ್ಷಿತ ಪ್ರದೇಶಗಳ 50ನೇ ವಾರ್ಷಿಕೋತ್ಸವ, ವಿಶ್ವದಲ್ಲೇ ಹುಲಿಗಳ ಸಂಖ್ಯೆಯಲ್ಲಿ ಭಾರತಕ್ಕೆ ಸಿಂಹಪಾಲು, ಬಂಡೀಪುರದ ರಮ್ಯ ಪ್ರಕೃತಿ ಸೌಂದರ್ಯ ಸವಿದ ಮೋದಿ, ದಿ ಎಲಿಫೆಂಟ್ ವಿಸ್ಪರರ್ಸ್ ಆಸ್ಕರ್ ಪ್ರಶಸ್ತಿ ವಿಜೇತ ಕಿರುಚಿತ್ರ ಪಾತ್ರಧಾರಿ ಆನೆ ಪಾಲಕರಾದ ಬೊಮ್ಮನ್, ಬೆಳ್ಳಿ ದಂಪತಿ ಭೇಟಿ ಮಾಡಿದ ಮೋದಿ
ಏ. 11 ಬಿಜೆಪಿಯ 189 ಅಭ್ಯರ್ಥಿಗಳ ಪಟ್ಟಿ ಬಿಡುಗಡೆ
ಏ. 11 ಸಿದ್ದರಾಮಯ್ಯ ವಿರುದ್ಧ ವಿ.ಸೋಮಣ್ಣ, ಡಿ.ಕೆ.ಶಿವಕುಮಾರ್ ವಿರುದ್ಧ ಆರ್.ಅಶೋಕ್ ಸ್ಪರ್ಧೆ
ಏ. 12 ಕಾನೂನು ತಜ್ಞ ಡಾ. ಸಿ.ಕೆ.ಎನ್.ರಾಜಾ ಇನ್ನಿಲ್ಲ
ಏ. 12 ಚಾಮುಂಡಿಬೆಟ್ಟಕ್ಕೆ ಬೆಂಕಿ: 50ರಿಂದ 60 ಎಕರೆ ಸಸ್ಯ, ಪ್ರಾಣಿ-ಪಕ್ಷಿ ನಾಶ
ಏ. 14 ಲಕ್ಷ್ಮಣ್ ಸವದಿ ಕಾಂಗ್ರೆಸ್ ಸೇರ್ಪಡೆ
ಏ. 14 ಬಸ್‌ಗೆ ಕಾರು ಡಿಕ್ಕಿ: ಒಂದೇ ಕುಟುಂಬದ ಮೂವರು ಸೇರಿ ಆರು ಮಂದಿ ಸಾವು
ಏ. 14 ಟೈ ಮೈಸೂರು ಘಟಕದಿಂದ ಟೈಕಾನ್ ಮೈಸೂರು -2023 ಸಮ್ಮೇಳನ: ಅಬ್ಬಾಸ್ ಎಸ್.ವಾಫ್, ಕೆ.ಬಿ.ಗಣಪತಿ, ಬಿ.ಆರ್.ಪೈಗೆ ಟೈಟಾನ್ ಜೀವಮಾನ ಸಾಧನೆ ಪ್ರಶಸ್ತಿ ಪ್ರದಾನ


ಕೆ.ಬಿ.ಗಣಪತಿ
ಜೀವಮಾನ ಸಾಧನೆ ಪ್ರಶಸ್ತಿ

ಏ. 15 'ಮೈಸೂರು ಮಿತ್ರ'ನಿಗೆ 43ನೇ ವಾರ್ಷಿಕೋತ್ಸವ, 44ನೇ ವರ್ಷಕ್ಕೆ ಪಾದಾರ್ಪಣೆ
ಏ. 16 ಶಾಸಕ ಸ್ಥಾನಕ್ಕೆ ಜಗದೀಶ್ ಶೆಟ್ಟರ್ ರಾಜೀನಾಮೆ
ಏ. 16 ವೀರಾಜಪೇಟೆ ಬಳಿ ಗುಂಡಿಕ್ಕಿ ಕೈಗಾರಿಕೋದ್ಯಮಿ ಹತ್ಯೆ
ಏ. 19 ವರುಣ ಅಭ್ಯರ್ಥಿ ಸಿದ್ದರಾಮಯ್ಯ ನಾಮಪತ್ರ ಸಲ್ಲಿಕೆ
ಏ. 19 ಸಿದ್ದರಾಮಯ್ಯ ಉತ್ತರಾಧಿಕಾರಿ ಧವನ್ ರಾಕೇಶ್
ಏ. 19 ಹೂಟಗಳ್ಳಿ ಕೈಗಾರಿಕಾ ಬಡಾವಣೆಯಲ್ಲಿ ಪಟಾಕಿ ಗೋಡೌನ್‌ನಲ್ಲಿ ಭಾರಿ ಅಗ್ನಿ ಅವಘಡ
ಏ. 21 ದ್ವಿತೀಯ ಪಿಯು ದಾಖಲೆಯ ಶೇ.74.67 ಫಲಿತಾಂಶ; ಮೈಸೂರು ಜಿಲ್ಲೆಗೆ 13ನೇ ಸ್ಥಾನ
ಏ. 21 ಕಾನೂನು ತಜ್ಞ ಡಾ. ಸಿ.ಕೆ.ಎನ್. ರಾಜಾ ಅವರ ಪತ್ನಿ ಮೀನಾಕ್ಷಿ ರಾಜಾ ನಿಧನ
ಏ. 22 ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಪ್ರತ್ಯೇಕ ಅಪಘಾತ ಹವಾನಿಯಂತ್ರಿತ ಬಸ್ ಅಗ್ನಿಗಾಹುತಿ; ರಸ್ತೆ ವಿಭಜಕ ಹಾರಿ ಇನ್ನೋವಾಗೆ ಅಪ್ಪಳಿಸಿದ ಆಲ್ಟೋ ಕಾರು : ಐವರ ಸಾವು
ಏ. 23 ಸಿದ್ಧಗಂಗಾ ಮಠದ ಉತ್ತರಾಧಿಕಾರಿಗಳಾಗಿ ನಿರಂಜನ ಜಂಗಮ ಪಟ್ಟಾಧಿಕಾರ
ಏ. 24 ಗುಂಡ್ಲುಪೇಟೆಯಲ್ಲಿ ಬಿಜೆಪಿ ಚಾಣಕ್ಯ ಅಮಿತ್ ಶಾ ರೋಡ್ ಶೋ
ಏ. 25 ಮಾಜಿ ಸಚಿವ ಡಿ.ಬಿ.ಇನಾಂದಾರ್ ನಿಧನ
ಏ. 26 ಮಂಡ್ಯದಲ್ಲಿ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ರೋಡ್ ಶೋ
ಏ. 26 ಮೈಸೂರು ಮೈಲಾರಿ ಹೋಟೆಲ್‌ನಲ್ಲಿ ದೋಸೆ ಮಾಡಿ ಸವಿದ ಪ್ರಿಯಾಂಕ, ಡಿಕೆಶಿ
ಏ. 28 ಮೈಸೂರು ಜಿಲ್ಲೆಯಲ್ಲಿ 8 ಕೋಟಿ ಮೌಲ್ಯದ ಮದ್ಯ, 2 ಕೋಟಿಗೂ ಅಧಿಕ ನಗದು ವಶ
ಏ. 29 ಮಡಿಕೇರಿಯಲ್ಲಿ ಅಮಿತ್ ಶಾ ರೋಡ್ ಶೋ
ಏ. 30 ಮೈಸೂರು ರಾಜಮಾರ್ಗದಲ್ಲಿ ಮೊಳಗಿದ ಮೋದಿ ಮಂತ್ರ ರೋಡ್ ಶೋ ಮೂಲಕ ಹವಾ ಸೃಷ್ಟಿಸಿದ ಮೋದಿ
ಏ. 30 ಪ್ರಧಾನಿ ರೋಡ್ ಶೋಗೆ ಮೆರುಗು ನೀಡಿದ ಸಾಂಸ್ಕೃತಿಕ ಕಲಾತಂಡಗಳು

ಮೇ



ಮೇ 2 ಡಿ.ಕೆ. ಶಿವಕುಮಾರ್ ಪ್ರಯಾಣಿಸುತ್ತಿದ್ದ ಹೆಲಿಕಾಪ್ಟರ್‌ಗೆ ಹದ್ದು ಡಿಕ್ಕಿ : ಗಾಜು ಛಿದ್ರ
ಮೇ 2 ಮಂಡ್ಯದಲ್ಲಿ ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಪ್ರಚಾರ, ಡಬ್ಬಲ್ ಇಂಜಿನ್ ಅಲ್ಲ, ಡಬ್ಬಲ್ ಲೂಟಿ ಸರ್ಕಾರ, ವಾಗ್ದಾಳಿ
ಮೇ 2 ಮೈಸೂರಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರ್ಜರಿ ರೋಡ್ ಶೋ
ಮೇ 3 ಕೆಆರ್‌ಎಸ್ ಜಲಾಶಯದ ನೀರಿನ ಮಟ್ಟ 85.96ಕ್ಕೆ ಕುಸಿತ
ಮೇ 5 ವರುಣ ಕ್ಷೇತ್ರದಲ್ಲಿ ಪ್ರಚಾರಕ್ಕೆ ತಾರಾ ಮೆರುಗು, ಸಿದ್ದರಾಮಯ್ಯ ಪರ ಶಿವರಾಜ್‌ಕುಮಾರ್, ರಮ್ಯಾ ಪ್ರಚಾರ
ಮೇ 5 ದಸರೆಯಲ್ಲಿ 14 ಬಾರಿ ಅಂಬಾರಿ ಹೊತ್ತಿದ್ದ ಬಲರಾಮ ಅಸ್ವಸ್ಥ
ಮೇ 5 ಚಾಮರಾಜನಗರದಲ್ಲಿ ನಟ ಸುದೀಪ್ ಬಿಜೆಪಿ ಪರ ಭರ್ಜರಿ ರೋಡ್ ಶೋ
ಮೇ 5 ನರಸೀಪುರದಲ್ಲಿ ಸೋಮಣ್ಣ, ರೇವಣ್ಣ ಪರ ಸಿಎಂ ಬೊಮ್ಮಾಯಿ ಪ್ರಚಾರ
ಮೇ 7 ಕರ್ನಾಟಕ ನಂಬರ್ ಒನ್ ರಾಜ್ಯವಾಗಬೇಕೆ... ಬಿಜೆಪಿ ಅಧಿಕಾರಕ್ಕೆ ತನ್ನಿ... ನಂಜನಗೂಡಿನಲ್ಲಿ ಪ್ರಧಾನಿ ಮೋದಿ ಕೊನೆ ಚುನಾವಣಾ ಪ್ರಚಾರ
ಮೇ 7 ಜಂಬೂ ಸವಾರಿಯಲ್ಲಿ ಎಲ್ಲರ ಗಮನ ಸೆಳೆದಿದ್ದ ಗಜರಾಜ ಬಲರಾಮ ನಿಧನ
ಮೇ 7 ಭಾರತ ಮುನ್ನಡೆಸಲು ಗಟ್ಟಿ ನಾಯಕತ್ವ ಬೇಕು; ಕರ್ನಾಟಕ ರಾಜ್ಯ ಮುಕ್ತ ವಿವಿ ಘಟಿಕೋತ್ಸವದಲ್ಲಿ ಕೇಂದ್ರ ವಿದೇಶಾಂಗ ವ್ಯವಹಾರಗಳ ಸಚಿವ ಜೈಶಂಕರ್
ಮೇ 8 ಬಹಿರಂಗ ಪ್ರಚಾರಕ್ಕೆ ತೆರೆ
ಮೇ 9 ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಬಂಧನ
ಮೇ 9 ಮೈಸೂರು, ಹಾಸನ, ಕೊಡಗು, ಚಾ.ನಗರ, ಮಂಡ್ಯ ಜಿಲ್ಲೆಗಳಲ್ಲಿ ಮತದಾನಕ್ಕೆ ಸರ್ವ ವ್ಯವಸ್ಥೆ
ಮೇ 10 ರಾಜ್ಯದಲ್ಲಿ ಶೇ. 72.81 ಶಾಂತಿಯುತ ಮತದಾನ, ಮೈಸೂರು ಜಿಲ್ಲೆಯಲ್ಲಿ ಶೇ. 75.07 ಮತದಾನ
ಮೇ 13 135 ಸೀಟು ಗೆದ್ದು ಕರ್ನಾಟಕ ಕೈ ವಶ, ಬಿಜೆಪಿ, ಜೆಡಿಎಸ್ ಧೂಳೀಪಟ ಮಾಡಿದ ಕಾಂಗ್ರೆಸ್
ಮೇ 14 ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ, ಖರ್ಗೆ ಹೆಗಲಿಗೆ ಸಿಎಂ ಆಯ್ಕೆ; ಸಿಎಂ ಕುರ್ಚಿಗಾಗಿ ಸಿದ್ದರಾಮಯ್ಯ-ಡಿಕೆಶಿ ಪೈಪೋಟಿ
ಮೇ 14 ಸಿಬಿಐ ನಿರ್ದೇಶಕರಾಗಿ ಡಿಜಿ-ಐಜಿಪಿ ಪ್ರವೀಣ್ ಸೂದ್ ನೇಮಕ
ಮೇ 15 ಮುಖ್ಯಮಂತ್ರಿ ಮಾಡಿ ಇಲ್ಲ ರಾಜಕೀಯ ಬಿಟ್ಟು ಬಿಸಿನೆಸ್ ಮಾಡ್ತೇನೆ : ಡಿಕೆಶಿ
ಮೇ 16 ಮೈಸೂರಲ್ಲಿ ನಕಲಿ ರಸಗೊಬ್ಬರ ತಯಾರಿಕಾ ಘಟಕದ ಮೇಲೆ ದಾಳಿ
ಮೇ 17 ಸಿದ್ದು-ಡಿಕೆಶಿ ಬಿಗಿಪಟ್ಟು, ಕಾಂಗ್ರೆಸ್ ವರಿಷ್ಠರಿಗೆ ಕಗ್ಗಂಟು
ಮೇ 17 ಆನೆ ಗಣತಿ ಆರಂಭ
ಮೇ 18 ಸಿದ್ದರಾಮಯ್ಯ ಮುಖ್ಯಮಂತ್ರಿ, ಡಿ.ಕೆ. ಶಿವಕುಮಾರ್ ಉಪಮುಖ್ಯಮಂತ್ರಿಯಾಗಿ ಆಯ್ಕೆ
ಮೇ 18 ಒಂಟಿಕೊಪ್ಪಲಿನಲ್ಲಿ ರೌಡಿ ಶೀಟರ್ ಚಂದ್ರು ಭೀಕರ ಹತ್ಯೆ
ಮೇ 19 ಚಲಾವಣೆಯಿಂದ 2000 ರೂ. ನೋಟು ಹಿಂಪಡೆದ ಆರ್‌ಬಿಐ
ಮೇ 20 ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಪ್ರಮಾಣವಚನ ಸ್ವೀಕಾರ
ಮೇ 20 ಐದು ಗ್ಯಾರಂಟಿಗಳಿಗೆ ಸಂಪುಟ ಗ್ಯಾರಂಟಿ : ಪ್ರತಿ ಮನೆಗೆ 200 ಯೂನಿಟ್ ವಿದ್ಯುತ್, ಮನೆ ಒಡತಿಗೆ 2000 ರೂ. ನೆರವು, ನಿರುದ್ಯೋಗಿ ಪದವೀಧರರಿಗೆ 3000 ರೂ., ಡಿಪ್ಲೊಮಾದಾರರಿಗೆ ರೂ. 1500 ಭತ್ಯೆ ರಾಜ್ಯದ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ, ಮೊದಲ ಸಂಪುಟ ಸಭೆ ನಂತರ ಸಿಎಂ ಸಿದ್ದರಾಮಯ್ಯ ಘೋಷಣೆ
ಮೇ 21 ಮೈಸೂರಲ್ಲಿ ಮಳೆ ಅಬ್ಬರ: ಮೂವರು ಬಲಿ
ಮೇ 21 ಬೆಂಗಳೂರು ಅಂಡರ್‌ಪಾಸ್‌ನಲ್ಲಿ ಮುಳುಗಿದ ವಾಹನ, ಇನ್ಫೋಸಿಸ್ ಮಹಿಳಾ ಉದ್ಯೋಗಿ ದುರಂತ ಸಾವು
ಮೇ 22 ಮಳೆ ಹಾನಿ ನಿಭಾಯಿಸಲು ಪಾಲಿಕೆ 'ಅಭಯ' ತಂಡ ರೆಡಿ
ಮೇ 22 ಎಸ್.ಎಂ.ಕೃಷ್ಣ, ಹೆಚ್.ಡಿ. ದೇವೇಗೌಡರನ್ನು ಭೇಟಿಯಾದ ಡಿಕೆಶಿ
ಮೇ 24 ವಿಧಾನಸಭಾ ಅಧ್ಯಕ್ಷರಾಗಿ ಯು.ಟಿ. ಖಾದರ್ ಅವಿರೋಧ ಆಯ್ಕೆ
ಮೇ 26 ಮೈಸೂರಲ್ಲಿ ಖ್ಯಾತ ವಿಮರ್ಶಕ ಪ್ರೊ. ಜಿ.ಹೆಚ್.ನಾಯಕ್ ನಿಧನ
ಮೇ 27 ಸಿದ್ದರಾಮಯ್ಯ ಸಂಪುಟಕ್ಕೆ 24 ಶಾಸಕರು ಪ್ರಮಾಣ ವಚನ ಸ್ವೀಕಾರ
ಮೇ 28 ನೂತನ ಸಂಸತ್ ಭವನ ಪ್ರಧಾನಿ ಮೋದಿ ಅವರಿಂದ ಲೋಕಾರ್ಪಣೆ
ಮೇ 29 ಖಾಸಗಿ ಬಸ್-ಇನ್ನೋವಾ ಕಾರು ನಡುವೆ ತಿ. ನರಸೀಪುರ ಬಳಿ ಭೀಕರ ಅಪಘಾತ; ಬಳ್ಳಾರಿ ಮೂಲದ 10 ಮಂದಿ ಸಾವು
ಮೇ 29 ಚೆನ್ನೈಗೆ ಐಪಿಎಲ್ ಚಾಂಪಿಯನ್‌ಶಿಪ್
ಮೇ 30 ಬೆಂಗಳೂರು ಪೊಲೀಸ್ ಆಯುಕ್ತರಾಗಿ ಹಿರಿಯ ಐಪಿಎಸ್ ಅಧಿಕಾರಿ ದಯಾನಂದ ನೇಮಕ
ಮೇ 31 ಪಾಲಿಕೆ, ಮುಡಾ, ಸಬ್ ರಿಜಿಸ್ಟ್ರಾರ್ ಅಧಿಕಾರಿಗಳ ಮನೆ, ಕಚೇರಿ ಮೇಲೆ ಲೋಕಾಯುಕ್ತ ದಾಳಿ

ಜೂನ್



ಜೂ. 1 ಚಾಮರಾಜನಗರ ಬಳಿ ವಾಯುಸೇನೆಯ ತರಬೇತಿ ವಿಮಾನ ಪತನ
ಜೂ. 2 ರೈಲುಗಳ ಸರಣಿ ಅಪಘಾತ :70ಕ್ಕೂ ಅಧಿಕ ಪ್ರಯಾಣಿಕರ ಸಾವು
ಜೂ. 2 ಐದೂ ಗ್ಯಾರಂಟಿ ಜಾರಿ ಘೋಷಣೆ: ಶಕ್ತಿ, ಅನ್ನಭಾಗ್ಯ, ಗೃಹಜ್ಯೋತಿ, ಗೃಹಲಕ್ಷ್ಮಿ, ಯುವನಿಧಿ
ಜೂ. 3 ಒಡಿಸ್ಸಾ ರೈಲುಗಳ ದುರಂತ, ಸತ್ತವರ ಸಂಖ್ಯೆ 300ಕ್ಕೂ ಅಧಿಕ, 900ಕ್ಕೂ ಗಾಯಾಳುಗಳು
ಜೂ. 4 ರೈಲು ದುರಂತ : ಸಿಬಿಐ ತನಿಖೆಗೆ ಶಿಫಾರಸು
ಜೂ. 4 ಲಾರಿಗೆ ಕಾರು ಡಿಕ್ಕಿ : ನಾಲ್ವರ ಸಾವು
ಜೂ. 5 ಮೈಸೂರು ಮಹಾನಗರ ಪಾಲಿಕೆ 9 ಕೋಟಿ ಉಳಿತಾಯ ಬಜೆಟ್ ಮಂಡನೆ
ಜೂ. 6 ಹೆಸರಾಂತ ಕರ್ನಾಟಕ ಶಾಸ್ತ್ರೀಯ ಸಂಗೀತ ವಿದುಷಿ ಡಾ.ಗೌರಿ ಕುಪ್ಪುಸ್ವಾಮಿ ನಿಧನ
ಜೂ. 7 ಕಾಂತರಾಜ್ ನೇತೃತ್ವದ ಹಿಂದುಳಿದ ವರ್ಗಗಳ ಆಯೋಗದ ವರದಿಯನ್ವಯ ರಾಜ್ಯದಲ್ಲಿ ಸಾಮಾಜಿಕ ನ್ಯಾಯ ಸ್ಥಾಪನೆ
ಜೂ. 7 ಮೈಸೂರು ಜಿಲ್ಲಾಧಿಕಾರಿಗಳ ಕಚೇರಿ ಸಿದ್ಧಾರ್ಥನಗರದ ಹೊಸ ಕಟ್ಟಡಕ್ಕೆ ಸ್ಥಳಾಂತರ
ಜೂ. 9 ಮೈಸೂರಿನ ಪ್ರಮುಖ ಮೂರು ವಾಣಿಜ್ಯ ರಸ್ತೆ, ಟೌನ್‌ಹಾಲ್ ಬಳಿ ಪ್ರಾಯೋಗಿಕವಾಗಿ 'ಪೇ ಅಂಡ್ ಪಾರ್ಕ್' ಜಾರಿ
ಜೂ. 10 ಸರ್ಕಾರದ ಜೊತೆಗೆ ಆಡಳಿತ ವ್ಯವಸ್ಥೆಯೂ ಬದಲಾಗಬೇಕು; ಮೈಸೂರಲ್ಲಿ ಅಧಿಕಾರಿಗಳಿಗೆ ಸಿಎಂ ಸಿದ್ದರಾಮಯ್ಯ ಎಚ್ಚರಿಕೆ
ಜೂ. 11 ಮುಖ್ಯಮಂತ್ರಿ ಸಿದ್ದರಾಮಯ್ಯರಿಂದ ಶಕ್ತಿ ಯೋಜನೆಗೆ ಚಾಲನೆ
ಜೂ. 11 ಜೂನಿಯರ್ ಮಹಿಳಾ ಏಷ್ಯಾ ಕಪ್ ಹಾಕಿ : ಭಾರತಕ್ಕೆ ಚೊಚ್ಚಲ ಕಿರೀಟ
ಜೂ. 13 ಉಚಿತ ಬಸ್ ಪ್ರಯಾಣ :ಪುಣ್ಯಕ್ಷೇತ್ರಗಳಲ್ಲಿ ಮಹಿಳಾ ಭಕ್ತರ ದಂಗುಳಿ
ಜೂ. 15 ಹಿಂದಿನ ಬಿಜೆಪಿ ಸರ್ಕಾರ ಜಾರಿಗೆ ತಂದಿದ್ದ ಮತಾಂತರ ನಿಷೇಧ, ಎಪಿಎಂಸಿ ಕಾಯ್ದೆ ರದ್ದು
ಜೂ. 18 ಗೃಹಜ್ಯೋತಿ ಆರಂಭ, ಮೊದಲ ದಿನವೇ 55 ಸಾವಿರ ಅರ್ಜಿ ಸಲ್ಲಿಕೆ
ಜೂ. 20 ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ಮುಂದುವರೆದ ಅಪಘಾತ ಸರಣಿ; ಕಾರೊಂದು ಮತ್ತೊಂದು ಕಾರಿಗೆ ಅಪ್ಪಳಿಸಿದ ಪರಿಣಾಮ ದಂಪತಿ ಸೇರಿ ಮೂವರು ದುರ್ಮರಣ
ಜೂ. 21 ಮೈಸೂರು ಅರಮನೆ ಅಂಗಳದಲ್ಲಿ ಯೋಗ ವೈಭೋಗ
ಜೂ. 21 ನ್ಯೂಯಾರ್ಕ್: ವಿಶ್ವಸಂಸ್ಥೆಯಲ್ಲಿ ಪ್ರಧಾನಿ ಮೋದಿ ಯೋಗ ಮಂತ್ರ; ಗಿನ್ನಿಸ್ ದಾಖಲೆಗೆ ಸೇರ್ಪಡೆ
ಜೂ. 22 ಅಮೇರಿಕಾ ಶಕ್ತಿ ಕೇಂದ್ರ ಶ್ವೇತಭವನದಲ್ಲಿ ಮೈಸೂರು ಶ್ರೀಗಂಧದ ಕಂಪು
ಜೂ. 23 ಮೊದಲ ಆಷಾಢ ಶುಕ್ರವಾರದ ಪೂಜಾ ಮಹೋತ್ಸವ; ಚಾಮುಂಡಿಬೆಟ್ಟದಲ್ಲಿ ನಾಗಲಕ್ಷ್ಮಿ ಅಲಂಕಾರದಲ್ಲಿ ಕಂಗೊಳಿಸಿದ ತಾಯಿ ಚಾಮುಂಡೇಶ್ವರಿ
ಜೂ. 25 ಪ್ರಧಾನಿ ಮೋದಿಗೆ ಈಜಿಪ್ಟ್‌ನ ಅತ್ಯುನ್ನತ ಆರ್ಡರ್ ಆಫ್ ದಿ ನೈಲ್ ಪ್ರಶಸ್ತಿ
ಜೂ. 27 ಜಂಬೂಸವಾರಿ ಮಾದರಿಯಲ್ಲಿ ಮೈಸೂರಲ್ಲಿ ಅದ್ದೂರಿ ಕೆಂಪೇಗೌಡರ ಜಯಂತಿ ಆಚರಣೆ
ಜೂ. 28 ಅನ್ನಭಾಗ್ಯ ಯೋಜನೆಯಡಿ ಪ್ರತಿ ಯೂನಿಟ್‌ಗೆ ಐದು ಕೆಜಿ ಅಕ್ಕಿ ಜೊತೆಗೆ ಮತ್ತೈದು ಕೆಜಿಗೆ ದುಡ್ಡು
ಜೂ. 28 ಮೈಸೂರಲ್ಲಿ ಹಾಡಹಗಲೇ ವರ್ತಕನ ಅಪಹರಣ
ಜೂ. 29 ಮೈಸೂರಲ್ಲಿ ಮುಸ್ಲಿಂ ಬಾಂಧವರಿಂದ ಬಕ್ರೀದ್ ಆಚರಣೆ
ಜೂ. 30 ಮೇಕೆದಾಟು ಅಣೆಕಟ್ಟು ನಿರ್ಮಾಣ ಪ್ರಕ್ರಿಯೆಗೆ ಚಾಲನೆ

ಉಳಿದ ಆರು ತಿಂಗಳ ಘಟನಾವಳಿ ನಾಳೆಯ ಸಂಚಿಕೆಯಲ್ಲಿ

ಮೈಸೂರು ಮಿತ್ರ
ಶುಕ್ರವಾರ 29 ಡಿಸೆಂಬರ್ 2023

14 ವರ್ಷದೊಳಗಿನ ಬಾಲಕರ ರಾಷ್ಟ್ರೀಯ ಹಾಕಿ ಪಂದ್ಯಾವಳಿ

ಕರ್ನಾಟಕ ತಂಡಕ್ಕೆ ಜಯ



ಪೊನ್ನಂಪೇಟೆ, ಡಿ.28– ಮಧ್ಯ ಪ್ರದೇಶದ ಗ್ವಾಲಿಯರ್‌ನಲ್ಲಿ ಗುರುವಾರ ದಿಂದ ಆರಂಭಗೊಂಡ 14 ವರ್ಷದೊಳಗಿನ ಬಾಲಕರ ರಾಷ್ಟ್ರೀಯ ಹಾಕಿ ಪಂದ್ಯಾವಳಿಯ ಮೊದಲ ಸುತ್ತಿನಲ್ಲಿ ಕೊಡಗಿನ ವಿದ್ಯಾರ್ಥಿಗನ್ನೊಳಗೊಂಡ ಕರ್ನಾಟಕ ತಂಡ ಜಯ ಗಳಿಸಿದೆ.

ಪಂದ್ಯಾವಳಿಯ ಮೊದಲನೇ ದಿನ ಕೇಂದ್ರ ಸಿಲಬಸ್‌ನ ಸಿಎಸ್‌ಐಎಸ್ ತಂಡವನ್ನು ಎದುರಿಸಿದ ಕರ್ನಾಟಕ ತಂಡ 2–0 ಗೋಲುಗಳ ಮೂಲಕ ಮುನ್ನಡೆ ಸಾಧಿಸಿದೆ. ಆರಂಭದಿಂದಲೇ ಬಿರುಸಿನ ಆಟಕ್ಕೆ ಒತ್ತು ನೀಡಿದ ಕರ್ನಾಟಕ ತಂಡ ಎದುರಾಳಿ ತಂಡದ ವಿರುದ್ಧ ನಿರಾಯಾಸ ಜಯ ಪಡೆಯಿತು. ಕರ್ನಾಟಕ ತಂಡದ ಗಣೇಶ್ ಮೊದಲ ಗೋಲು ಬಾರಿಸಿದರೆ, ಹರ್ಷ 2ನೇ ಗೋಲು ದಾಖಲಿಸಿದರು. ಶುಕ್ರ ವಾರ (ಇಂದು) ನಡೆಯಲಿರುವ ಪಂದ್ಯ ದಲ್ಲಿ ವಿಜೇತ ಕರ್ನಾಟಕ ತಂಡ ಮಧ್ಯ ಪ್ರದೇಶ ತಂಡವನ್ನು ಎದುರಿಸಲಿದೆ.

ತಂಡದಲ್ಲಿ ಕೊಡಗಿನ ಆಟಗಾರರು

17 ವರ್ಷದೊಳಗಿನ ಬಾಲಕರ ಹಾಕಿ ಪಂದ್ಯಾವಳಿಯ ಕರ್ನಾಟಕ ತಂಡಕ್ಕೆ ಎಲ್ಲರೂ ಕೊಡಗಿನಿಂದ ಆಯ್ಕೆಯಾಗಿರುವ ಬೆನ್ನಲ್ಲೇ, ರಾಷ್ಟ್ರಮಟ್ಟದ 14 ವರ್ಷದೊಳಗಿನ ಬಾಲಕರ ಕರ್ನಾಟಕ ಹಾಕಿ ತಂಡದಲ್ಲೂ ಕೊಡಗಿನ 9 ಆಟಗಾರರು ಸ್ಥಾನ ಪಡೆದಿದ್ದಾರೆ.

ಮಧ್ಯಪ್ರದೇಶದ ಗ್ವಾಲಿಯರ್‌ನಲ್ಲಿ ಡಿ.28ರಿಂದ ಜ.1ರವರೆಗೆ ನಡೆಯಲಿರುವ 14 ವರ್ಷದೊಳಗಿನ ಬಾಲಕರ ರಾಷ್ಟ್ರೀಯ ಹಾಕಿ ಪಂದ್ಯಾವಳಿಯಲ್ಲಿ ಈ ತಂಡ ಕರ್ನಾಟಕವನ್ನು ಪ್ರತಿನಿಧಿಸುತ್ತಿದೆ. ತಂಡದಲ್ಲಿ ಗೋಣಿಕೊಪ್ಪಲಿನ ಲಯನ್ಸ್ ಶಾಲೆಯ 6 ವಿದ್ಯಾರ್ಥಿಗಳು ಸೇರಿದಂತೆ ಕೊಡಗಿನ ಒಟ್ಟು 9 ವಿದ್ಯಾರ್ಥಿಗಳಿದ್ದಾರೆ. ಮೈಸೂರು ವಿಭಾಗ ಮಟ್ಟದ 14 ವರ್ಷದೊಳಗಿನ ಬಾಲಕರ ಹಾಕಿ ಪಂದ್ಯಾವಳಿಯಲ್ಲಿ ಹಾಸನ ತಂಡವನ್ನು ಮಣಿಸುವ ಮೂಲಕ ಪ್ರಥಮ ಸ್ಥಾನ ಪಡೆದ ಕೊಡಗು ತಂಡ, ಅ.9 ರಿಂದ 11ರ ವರೆಗೆ ಕೂಡಿಗೆಯಲ್ಲಿ ನಡೆದ ರಾಜ್ಯಮಟ್ಟದ ಹಾಕಿ ಪಂದ್ಯಾವಳಿಯಲ್ಲಿಯೂ ಬಳ್ಳಾರಿ ತಂಡವನ್ನು ಪರಾಭವಗೊಳಿ ಸುವ ಮೂಲಕ ರಾಷ್ಟ್ರಮಟ್ಟಕ್ಕೆ ಅರ್ಹತೆ ಪಡೆದುಕೊಂಡಿತ್ತು.

ಗೋಣಿಕೊಪ್ಪಲಿನ ಲಯನ್ಸ್ ಶಾಲೆಯ ವಿದ್ಯಾರ್ಥಿಗಳಾದ ಬಿ.ಪಿ.ಸಂಚಯ್ ತಮ್ಮಯ್ಯ, ಸಿ.ಟಿ.ಉತ್ಸವ್ ಉತ್ತಪ್ಪ, ಸಿ.ಟಿ. ಉತ್ಕರ್ಷ್ ಉತ್ತಯ್ಯ, ಸಾರ್ಥಕ್ ಬೆಳ್ಳಿಯಪ್ಪ (ಗೋಲ್ ಕೀಪರ್), ಎ.ಜೆ.ಪ್ರಕುಲ್ ಗಣಪತಿ, ಮತ್ತು ಸಿ.ಬಿ.ಅಯಾನ್ ಅಯ್ಯಪ್ಪ, ಪೊನ್ನಂಪೇಟೆ ಸಂತ ಅಂತೋಣಿ ಶಾಲೆಯ ವಿದ್ಯಾರ್ಥಿಗಳಾದ ನಾಚಪ್ಪ, ಬೋಪಣ್ಣ ಹಾಗೂ ಮಡಿಕೇರಿಯ ಸರ್ಕಾರಿ ಪ್ರಾಥಮಿಕ ಶಾಲೆಯ ಪ್ರೀತಮ್ ಕರ್ನಾಟಕ ತಂಡದಲ್ಲಿದ್ದಾರೆ.

ಡಿ.31, ಕುಂಡ್ಯೋಳಂಡ ಹಾಕಿ ನಮ್ಮೆ ಲಾಂಛನ ಲೋಕಾರ್ಪಣೆ

ನಾಪೋಕ್ಲು, ಡಿ.28–ಕೊಡವ ಕುಟುಂಬಗಳ ನಡುವೆ ಮುಂಬರುವ ಏಪ್ರಿಲ್‌ನಲ್ಲಿ ನಡೆಯಲಿರುವ 'ಕುಂಡ್ಯೋಳಂಡ ಕಪ್ ಹಾಕಿ ನಮ್ಮೆ' ಲಾಂಛನ ಲೋಕಾರ್ಪಣೆ ಸಮಾರಂಭ ಡಿ.31ರಂದು ಬೆಳಗ್ಗೆ 9.30 ಗಂಟೆಗೆ ನಾಪೋಕ್ಲು ಕೊಡವ ಸಮಾಜ ಸಭಾಂಗಣದಲ್ಲಿ ನಡೆಯಲಿದೆ.

ಕುಂಡ್ಯೋಳಂಡ ಕುಟುಂಬದ ಪಟ್ಟೆದಾರ ನಾಣಿ ನಾಣಯ್ಯ, ಹಾಗೂ ಹಾಕಿ ಉತ್ಸವದ ಅಧ್ಯಕ್ಷ ಕುಂಡ್ಯೋಳಂಡ ರಮೇಶ್ ಮುದ್ದಯ್ಯ ಅವರ ಮುಂದಾಳತ್ವದಲ್ಲಿ ನಾಪೋಕ್ಲು ಕೊಡವ ಸಮಾಜದ ಅಪ್ಪಚ್ಚು ಕವಿ ಸಭಾಂಗಣದಲ್ಲಿ ಕಾರ್ಯಕ್ರಮ ನಡೆಯಲಿದೆ. ಕಾರ್ಯಕ್ರಮದಲ್ಲಿ ಸಂಸದ ಪ್ರತಾಪ್ ಸಿಂಹ, ಶಾಸಕ ಎ.ಎಸ್. ಪೊನ್ನಣ್ಣ, ವಿಧಾನಪರಿಷತ್ ಸದಸ್ಯ ಮಂಡೇಪಂಡ ಸುಜಾ ಕುಶಾಲಪ್ಪ, ಹಾಕಿ ಕರ್ನಾಟಕದ ಪ್ರಧಾನ ಕಾರ್ಯದರ್ಶಿ ಒಲಂಪಿಯನ್ ಡಾ.ಅಂಜಪರವಂಡ ಬಿ.ಸುಬ್ಬಯ್ಯ, ಕೊಡವ ಹಾಕಿ ಅಕಾಡೆಮಿ ಅಧ್ಯಕ್ಷ ಪಾಂಡಂಡ ಕೆ.ಬೋಪಣ್ಣ, ವೆಸ್ಟ್ ಕೊಳಕೇರಿ ಗ್ರಾಮಾಭಿವೃದ್ಧಿ ಸಂಘದ ಅಧ್ಯಕ್ಷ ಕೇಟೋಳಿರ ಎಸ್.ಕುಟ್ಟಪ್ಪ ಅವರು ಪಾಲ್ಗೊಳ್ಳಲಿದ್ದಾರೆ ಎಂದು ಹಾಕಿ ನಮ್ಮೆಯ ಆಯೋಜಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಯಮ ಉಲ್ಲಂಘಿಸಿದ ಚಾಲಕರಿಗೆ ದಂಡ



ಮಡಿಕೇರಿ, ಡಿ.28– ದಕ್ಷಿಣ ಕೊಡಗಿನ ಪೊನ್ನಂಪೇಟೆಯಲ್ಲಿ ಸಂಚಾರ ನಿಯಮ ಉಲ್ಲಂಘಿಸುತ್ತಿದ್ದ ವಾಹನ ಚಾಲಕರಿಗೆ ಪೊನ್ನಂಪೇಟೆ ಠಾಣೆ ಪೊಲೀಸರು ದಂಡ ವಿಧಿಸಿದರು. ಸಂಚಾರ ನಿಯಮಗಳನ್ನು ಗಾಳಿಗೆ ತೂರಿ ವಾಹನ ಚಾಲನೆ ಮಾಡುತ್ತಿದ್ದ ಚಾಲಕರಿಗೆ ಪೊನ್ನಂಪೇಟೆ ಠಾಣಾಧಿಕಾರಿ ನವೀನ್ ಮತ್ತು ಸಿಬ್ಬಂದಿ ತಪಾಸಣೆ ನಡೆಸಿ, ದಂಡ ವಿಧಿಸುವ ಮೂಲಕ ಬಿಸಿ ಮುಟ್ಟಿಸಿದರು. ಕಾರಿನಲ್ಲಿ ಸೀಟ್‌ಬೆಲ್ಟ್ ಧರಿಸದ, ಹೊಗೆ ನಿಯಂತ್ರಣ, ವಾಹನಗಳ ದಾಖಲೆ, ಇನ್ಸೂರೆನ್ಸ್, ಹೆಲ್ಮೆಟ್ ರಹಿತ ಬೈಕ್ ಚಾಲನೆ ಮಾಡುತ್ತಿದ್ದ ಚಾಲಕರಿಗೆ ದಂಡ ವಿಧಿಸಲಾಯಿತು. ಇದೇ ವೇಳೆ ಠಾಣಾಧಿಕಾರಿ ನವೀನ್ ಸಂಚಾರ ನಿಯಮ ಪಾಲಿಸಿ, ಜಾಗರೂಕತೆಯಿಂದ ವಾಹನ ಚಲಾಯಿಸುವಂತೆ ಅರಿವು ಮೂಡಿಸಿದರು.

ಬಿಜೆಪಿ ನಾಯಕರಿಗೆ ಯಾವುದೇ ನೈತಿಕತೆ ಇಲ್ಲ

ಕುಶಾಲನಗರದಲ್ಲಿ ಮಾಜಿ ಸಿಎಂ ಜಗದೀಶ್ ಶೆಟ್ಟರ್ ಹೇಳಿಕೆ



ಕುಶಾಲನಗರ, ಡಿ.28–ಕೇಂದ್ರ ಸಚಿವ ಪ್ರಹ್ಲಾದ ಜೋಷಿ ಸೇರಿದಂತೆ ಬಿಜೆಪಿ ನಾಯಕರಿಗೆ ಭ್ರಷ್ಟಾಚಾರದ ಬಗ್ಗೆ ಮಾತನಾಡುವ ಯಾವುದೇ ನೈತಿಕತೆ ಇಲ್ಲ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ವಿಧಾನಪರಿಷತ್ ಸದಸ್ಯ ಜಗದೀಶ್ ಶೆಟ್ಟರ್ ಹೇಳಿದರು.

ಸಮೀಪದ ಕೂಡ್ಲೂರು ಕೈಗಾರಿಕಾ ಪ್ರದೇಶದಲ್ಲಿ ಖಾಸಗಿ ಸಹಭಾಗಿತ್ವದಲ್ಲಿ ಕಾಫಿ, ಮರದ ಹೊಟ್ಟು ಹಾಗೂ ಜೈವಿಕ ವಸ್ತುಗಳ ವಿದ್ಯುತ್ ಉತ್ಪಾದನಾ ಘಟಕಕ್ಕೆ ಗುರುವಾರ ಚಾಲನೆ ನೀಡಿ ಮಾತನಾಡಿದ ಅವರು, ಹಿಂದಿನ ಬಿಜೆಪಿ ಸರ್ಕಾರದಲ್ಲಿ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ 40 ಸಾವಿರ ಕೋಟಿ ರೂ. ಲೂಟಿ ಮಾಡಿದ್ದಾರೆ ಎಂದು ಆರೋಪಿಸಿರುವ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಹೇಳಿಕೆಗೆ ಪ್ರತಿಕ್ರಿಯಿಸಿದರು. ಅಂದಿನ ಬಿಜೆಪಿ ಸರ್ಕಾರದ ಎಲ್ಲಾ ಅವ್ಯವಹಾರಗಳು ಈಗ ಬೆಳಕಿಗೆ ಬರುತ್ತಿವೆ. ಅಂದು ಕಾಂಗ್ರೆಸ್ ಬಿಜೆಪಿ ಸರ್ಕಾರದ ಮೇಲೆ 40% ಕಮಿಷನ್ ಆರೋಪ ಮಾಡಿತ್ತು. ಆದರೆ, ಬಿಜೆಪಿಯವರು ಅದನ್ನು ಸರಿಯಾಗಿ ಸಮರ್ಥನೆ ಮಾಡಿಕೊಳ್ಳಲಾಗಲಿಲ್ಲ. ಈಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಮಿತಿ ರಚಿಸಿ ತನಿಖೆ ನಡೆಸುತ್ತಿದ್ದಾರೆ. ಯತ್ನಾಳ್ ಅವರು ಅವ್ಯವಹಾರಗಳ ದಾಖಲೆಗಳನ್ನು ನೀಡಲಿ, ಇನ್ನಷ್ಟು ಪರಿಣಾಮಕಾರಿ ತನಿಖೆ ಆಗಲಿದೆ. ಯಾರೇ ತಪ್ಪು ಮಾಡಿದ್ದರು ಅವರಿಗೆ ಕಠಿಣ ಶಿಕ್ಷೆ ಆಗಲಿದೆ ಎಂದರು.

ಕನ್ನಡದ ಬಗ್ಗೆ ಎಲ್ಲರೂ ಜಾಗೃತಿ ಆಗಬೇಕು. ಯಾವುದೇ ವ್ಯಾಪಾರಿಗಳು ಹಾಗೂ ಉದ್ಯಮಿಗಳು ಕನ್ನಡದಲ್ಲಿ ಬೋರ್ಡ್ ಹಾಕಬೇಕು. ತಮಿಳುನಾಡಿನಲ್ಲಿ ಇಂತಹ ಜಾಗೃತಿ ಇದೆ. ಅದು ಕರ್ನಾಟಕದಲ್ಲೂ ಆಗಬೇಕಾಗಿದೆ. ಆದರೆ, ಕನ್ನಡ ನಾಮ ಫಲಕ ಇಲ್ಲ ಎಂದು ಸ್ವತಃ ನಾವೇ ಕಾನೂನು ಕೈಗೆತ್ತಿಕೊಳ್ಳಬಾರದು. ಬದಲಾಗಿ ಸರ್ಕಾರಕ್ಕೆ ಮನವಿ ಸಲ್ಲಿಸಿ ಒತ್ತಾಯ ಮಾಡಬೇಕು ಎಂದು ಹೇಳಿದರು.

ಈ ಸಂದರ್ಭ ಶಾಸಕ ಡಾ.ಮಂತರ್ ಗೌಡ, ಟಿವಿ ವಿದ್ಯುತ್ ಉತ್ಪಾದನಾ ಘಟಕದ ಮಾಲೀಕ ವಿಠಲ ಗಂಗಾಪುತ್ರ ಹುಬ್ಬಳ್ಳಿ, ಉದ್ಯಮಿ ಮಹೇಂದ್ರ ನಾಗಪ್ಪ, ಶಿಲ್ಪಾ ಜಗದೀಶ್ ಇದ್ದರು.

ಜ.6ರಂದು ಬಿಟ್ಟಂಗಾಲದಲ್ಲಿ ಚಿಣ್ಣರ ಕಲಾಕೂಟ



ವಿರಾಜಪೇಟೆ, ಡಿ.28–ಪ್ರಥಮ ಬಾರಿ ವಿರಾಜಪೇಟೆಯಲ್ಲಿ ನಡೆಯಲಿರುವ ಬೃಹತ್ ಸಾಂಸ್ಕೃತಿಕ ಉತ್ಸವ ಮತ್ತು ಪ್ರತಿಭಾನ್ವೇಷಣೆ ಕಾರ್ಯಕ್ರಮದ ಚಿಣ್ಣರ ಕಲಾಕೂಟ ಜ.6ರಂದು ಸಮೀಪದ ಬಿಟ್ಟಂಗಾಲದ ಯಜ್ನ ಟವರ್ ಮುಂಭಾಗದ ಆವರಣದಲ್ಲಿ ನಡೆಯಲಿದೆ ಎಂದು ಮಗ್ಗುಲ ಲಿಟಲ್ ಸ್ಕಾಲರ್ಸ್ ಅಕಾಡೆಮಿ ಆಂಗ್ಲ ಮಾಧ್ಯಮ ಶಾಲೆಯ ಅಧ್ಯಕ್ಷೆ ಪೂಜಾ ಸಜೇಶ್ ತಿಳಿಸಿದರು.

ಲಿಟಲ್ ಸ್ಕಾಲರ್ಸ್ ಅಕಾಡೆಮಿ ಶಾಲೆ ಮತ್ತು ಇಂಟೋಪೀಸ್ ಡಾನ್ಸ್ ಸ್ಟುಡಿಯೋ ಸಂಸ್ಥೆಯ ಆಶ್ರಯದಲ್ಲಿ ಚಿಣ್ಣರ ಕಲಾಕೂಟ ನಡೆಯಲಿದ್ದು, ಮಕ್ಕಳ ಭಿನ್ನತೆಯಲ್ಲಿ ಏಕತೆಯನ್ನು ಕಾಣುವ ಉದ್ದೇಶದಿಂದ ಲಿಟಲ್ ಮತ್ತು ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಲ್ಲಿ ಸಮಾನತೆಯ ಚಿತ್ರಣ ಬಿಂಬಿಸುವುದು, ಅಂಗನವಾಡಿಯಿಂದ ಪ್ರೌಢಶಾಲೆಯ ವಿದ್ಯಾರ್ಥಿಗಳ ಬಹುಮುಖ ಪ್ರತಿಭೆಯನ್ನು ಕಲಾಕೂಟದಲ್ಲಿ ಪ್ರದರ್ಶಿಸಲಾಗುವುದು ಎಂದು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಎಲ್‌ಕೆಜಿ, ಯುಕೆಜಿ ಮಕ್ಕಳಿಗೆ ಪಾಶ್ಚಾತ್ಯ ಫ್ಯಾಷನ್ ಶೋ, 1–4ನೇ ತರಗತಿ ವಿದ್ಯಾರ್ಥಿಗಳಿಗೆ ರೇಟ್ರೋ ನೃತ್ಯ, 5–7ನೇ ತರಗತಿವರೆಗೆ ಜಾನಪದ ಗುಂಪು ನೃತ್ಯ ಮತ್ತು 8–10ನೇ ತರಗತಿವರೆಗೆ ಸಾಂಪ್ರದಾಯಿಕ ಉಡುಗೆಯ ಫ್ಯಾಷನ್ ಶೋ ಸ್ಪರ್ಧೆಗಳು ನಾಲ್ಕು ವಿಭಾಗಗಳಲ್ಲಿ ನಡೆಯಲಿವೆ. ಮಜಾ ಟಾಕೀಸ್ ಖ್ಯಾತಿಯ ರೆಮೋ, ಬಿಗ್‌ಬಾಸ್ ಖ್ಯಾತಿಯ ಪ್ರಥಮ್ ಆಗಮಿಸಲಿದ್ದಾರೆ ಎಂದರು. ಲಿಟಲ್ ಸ್ಕಾಲರ್ಸ್ ಶಾಲಾ ಅಕಾಡೆಮಿಯ ಕಾರ್ಯದರ್ಶಿ ಪ್ರತಿಮಾ ರಂಜನ್ ಮಾತನಾಡಿ, ಈಗಾಗಲೇ ಕೊಡಗಿನ ವಿವಿಧ ಭಾಗಗಳಿಂದ 33 ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದಾರೆ. ಜ.5ರ ವರೆಗೆ ನೋಂದಣಿಗೆ ಅವಕಾಶವಿದ್ದು, ಮಾಹಿತಿಗೆ ಮೊ.ಸಂ: 8951262723 ಅನ್ನು ಸಂಪರ್ಕಿಸಬಹುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಇಂಟೋಪೀಸ್ ಡಾನ್ಸ್ ಸಂಸ್ಥೆಯ ನೃತ್ಯ ತರಬೇತಿದಾರ ವಿಷ್ಣು, ಯೋಗ ತರಬೇತುದಾರ ಮದನ್ ಉಪಸ್ಥಿತರಿದ್ದರು.

ಗುತ್ತಿಗೆದಾರರ ಸಂಘದ ಅಧ್ಯಕ್ಷರಾಗಿ ರಾಜೀವಲೋಚನ ಪುನರಾಯ್ಕೆ

ಮಡಿಕೇರಿ, ಡಿ.28– ಮಡಿಕೇರಿ ತಾಲೂಕು ಲೋಕೋಪಯೋಗಿ ಗುತ್ತಿಗೆದಾರರ ಸಂಘದ ಅಧ್ಯಕ್ಷರಾಗಿ ಬಿ.ಪಿ.ರಾಜೀವಲೋಚನ ಪುನರಾಯ್ಕೆಯಾಗಿದ್ದಾರೆ.

ನಗರದ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ನಡೆದ ಸಂಘದ ಮಹಾಸಭೆಯಲ್ಲಿ ರಾಜೀವಲೋಚನ ಅಧ್ಯಕ್ಷರಾಗಿ ಹಾಗೂ ಕೆ.ಬಿ.ಪೂಣಚ್ಚ ಪ್ರಧಾನ ಕಾರ್ಯದರ್ಶಿಯಾಗಿ ಅವಿರೋಧವಾಗಿ ಆಯ್ಕೆಯಾದರು. ನಿರ್ದೇಶಕರಾಗಿ ಮನು ಉತ್ತಪ್ಪ, ಎಂ.ಕೆ.ಪೂಣಚ್ಚ, ಎನ್.ಡಿ.ಪೂಣಚ್ಚ, ಪಿ.ಬಿ.ಪೂಣಚ್ಚ ವಿ.ಜಿ.ಮೋಹನ್, ಸದಾಶಿವ ರೈ, ಮೊಯ್ದು, ಕೆ.ಎನ್.ಲೋಹಿತ್, ಪ್ರವೀಣ್, ದೇವರಾಜು ಹಾಗೂ ಬಿ.ವೈ.ರಾಜೇಶ್ ಯಲ್ಲಪ್ಪ ಅವರನ್ನು ಆಯ್ಕೆ ಮಾಡಲಾಯಿತು.



ಜಿಲ್ಲಾ ಸಂಘದ ಕಾರ್ಯದರ್ಶಿ ವಿ.ಆರ್.ರವಿಕುಮಾರ್, ಖಜಾಂಚಿ ಬಿ.ಕೆ.ರವಿಂದ್ರ ರೈ, ಸಲಹೆಗಾರ ಬಿ.ಬಿ.ಐತ್ತಪ್ಪ ರೈ, ನಿರ್ದೇಶಕ ಅರುಣ್ ಕುಮಾರ್ ಹಾಗೂ ಹಿರಿಯ ಗುತ್ತಿಗೆದಾರ ಬಾಬು ಆಯ್ಕೆ ಚುನಾವಣಾ ಉಸ್ತುವಾರಿ ವಹಿಸಿದ್ದರು.

ಕಾನೂನು ಹೋರಾಟ: ಬಿ.ಪಿ.ರಾಜೀವಲೋಚನ ಅಧ್ಯಕ್ಷತೆಯಲ್ಲಿ ನಡೆದ ತಾಲೂಕು ಸಂಘದ ಸಭೆಯಲ್ಲಿ ಪೂರ್ಣಗೊಳಿಸಿರುವ ಕಾಮಗಾರಿಗಳ ಬಿಲ್ ಗುತ್ತಿಗೆದಾರರಿಗೆ ಪಾವತಿಯಾಗದ ಬಗ್ಗೆ ವಿಷಯ ಪ್ರಸ್ತಾಪಿಸಲಾಯಿತು. ವಿವಿಧ ಇಲಾಖೆಗಳ ಕಾಮಗಾರಿಗಳನ್ನು ಪೂರ್ಣಗೊಳಿಸಿ ಬಿಲ್‌ಗಳನ್ನು ಸಲ್ಲಿಸಿ ಹಲವು ತಿಂಗಳುಗಳೇ ಕಳೆದಿದ್ದರೂ ಹಣ ಬಿಡುಗಡೆಯಾಗುತ್ತಿಲ್ಲ ಎಂದು ಗುತ್ತಿಗೆದಾರರು ಅಸಮಾಧಾನ ವ್ಯಕ್ತಪಡಿಸಿದರು.

ಸಂಘದ ಪದಾಧಿಕಾರಿಗಳು ಇಲಾಖಾಧಿಕಾರಿಗಳನ್ನು ಭೇಟಿಯಾಗಿ ಶೀಘ್ರ ಹಣ ಬಿಡುಗಡೆಗೆ ಮನವಿ ಸಲ್ಲಿಸಿ ಗಡುವು ನೀಡಲಾಗುವುದು. ನಿಗದಿತ ಅವಧಿಯೊಳಗೆ ಹಣ ಬಿಡುಗಡೆಯಾಗದಿದ್ದಲ್ಲಿ ಕಾನೂನು ಹೋರಾಟ ನಡೆಸಲಾಗುವುದು ಎಂದು ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು. ಎಲ್ಲಾ ಗುತ್ತಿಗೆದಾರರಿಗೆ ಕಾಮಗಾರಿಗಳು ಸಮಾನವಾಗಿ ಹಂಚಿಕೆಯಾಗುವಂತೆ ನೋಡಿಕೊಳ್ಳಬೇಕೆಂದು ಸದಸ್ಯರು ಸಲಹೆ ನೀಡಿದರು. ಸಂಘದ ನೂತನ ಪದಾಧಿಕಾರಿಗಳು ಹಾಗೂ ಸದಸ್ಯರು ಸಭೆಯಲ್ಲಿ ಉಪಸ್ಥಿತರಿದ್ದರು.

ವ್ಯವಸಾಯ ಮಾಡಲು ಅವಕಾಶ ಕಲ್ಪಿಸುವಂತೆ ಮನವಿ



ಚಾಮರಾಜನಗರ, ಡಿ.28– ಹೆಚ್.ಡಿ. ಫಾರೆಸ್ಟ್ ಮತ್ತು ಪುಣಜನೂರು ಸ್ಟೇಟ್ ಫಾರೆಸ್ಟ್ ಸರ್ವೆ ನಂ. 1, 3 ಮತ್ತು 5ರ ಜಮೀನುಗಳಲ್ಲಿ ಉಳುಮೆ ಮಾಡಲು ಅರಣ್ಯ ಇಲಾಖೆ ಅಧಿಕಾರಿಗಳು ತೊಂದರೆ ನೀಡುತ್ತಿದ್ದಾರೆ. ಹೀಗಾಗಿ ನಮ್ಮ ಜಮೀನುಗಳಲ್ಲಿ ವ್ಯವಸಾಯ ಮಾಡಲು ಅವಕಾಶ ಮಾಡಿಕೊಡಬೇಕು ಎಂದು ದಲಿತ ಮಹಾಸಭಾ ರಾಜ್ಯ ಉಪಾಧ್ಯಕ್ಷ ವೆಂಕಟರಮಣಸ್ವಾಮಿ (ಪಾಪು) ಮೈಸೂರಿನಲ್ಲಿ ಸಚಿವ ಹೆಚ್.ಸಿ.ಮಹದೇವಪ್ಪ ಅವರಿಗೆ ಮನವಿ ಸಲ್ಲಿಸಿದರು.

ಮಾಜಿ ರಾಜ್ಯಪಾಲ ಬಿ.ರಾಚಯ್ಯನವರು 50 ವರ್ಷಗಳ ಹಿಂದೆ ಫಲಾನುಭವಿಗಳಿಗೆ ತಲಾ 2.5 ಎಕರೆ ಜಮೀನಿಗೆ ಸಾಗುವಳಿ ಚೀಟಿ ವಿತರಿಸಿದ್ದು, ಅದರಂತೆ ಫಲಾನುಭವಿಗಳು ಅನುಭವದಲ್ಲಿದ್ದಾರೆ. ಅಲ್ಲಿ ವ್ಯವಸಾಯ ಮಾಡಲು ಹೋದರೆ ಅರಣ್ಯ ಇಲಾಖೆಯವರು ತೊಂದರೆ ಕೊಡುತ್ತಿದ್ದಾರೆ. ಸಾಗುವಳಿದಾರರ ಜಮೀನಿನಲ್ಲಿ ವ್ಯವಸಾಯ ಮಾಡಲು ಅವಕಾಶ ಮಾಡಿಕೊಡಬೇಕು ಎಂದು ಪಾಪು ಮನವಿ ಮಾಡಿದರು.

ಈ ವೇಳೆ ಸಚಿವರು ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರಿಗೆ ಕರೆ ಮಾಡಿ ಈ ಬಗ್ಗೆ ಪರಿಶೀಲಿಸಿ ಸಾಗುವಳಿದಾರರಿಗೆ ವ್ಯವಸಾಯ ಮಾಡಲು ಅವಕಾಶ ಮಾಡಿಕೊಡುವಂತೆ ಆದೇಶಿಸಿದರು. ಈ ಸಂದರ್ಭ ವಕೀಲ ಸಿ.ಎಂ.ಶಿವಣ್ಣ, ಯಜಮಾನ ಮಹದೇವಯ್ಯ, ದಲಿತ ಮುಖಂಡರು ಹಾಜರಿದ್ದರು.

ಸ್ವಾತಂತ್ರ್ಯ ಚಳವಳಿಗೆ ಭಾರತ ಸೇವಾದಳ ಕೊಡುಗೆ ಅಪಾರ

ಶಾಸಕ ಸಿ.ಪುಟ್ಟರಂಗಶೆಟ್ಟಿ ಅಭಿಪ್ರಾಯ



ಚಾಮರಾಜನಗರ, ಡಿ.28– ವಿದ್ಯಾರ್ಥಿಗಳಲ್ಲಿ ಶಿಸ್ತು, ದೇಶಪ್ರೇಮ, ಸಹೋದರತೆ ಹಾಗೂ ಭಾವೈಕ್ಯತೆಯ ಜಾಗೃತಿ ಮೂಡಿಸುವ ಭಾರತ ಸೇವಾದಳ ದೇಶದ ಸ್ವಾತಂತ್ರ್ಯ ಚಳವಳಿಗೆ ಅಪಾರ ಕೊಡುಗೆ ನೀಡಿದೆ ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ಅಭಿಪ್ರಾಯಪಟ್ಟರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಗುರುವಾರ ಸೇವಾದಳ ಶತಮಾನೋತ್ಸವ ಅಂಗವಾಗಿ ಭಾರತ ಸೇವಾದಳ ಸಮಿತಿ ಆಯೋಜಿಸಿದ್ದ ಜಿಲ್ಲಾಮಟ್ಟದ ರಾಷ್ಟ್ರೀಯ ಭಾವೈಕ್ಯತಾ ಮಕ್ಕಳ ಮೇಳ ಉದ್ಘಾಟಿಸಿ, ಭಾರತ ಸೇವಾದಳ ಸಂಸ್ಥೆ ಸ್ಥಾಪಿಸಿದ ಸ್ವಾತಂತ್ರ್ಯ ಹೋರಾಟಗಾರ ಡಾ.ನಾ.ಸು.ಹರ್ಡೀಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದರು.

ಸೇವಾದಳ ಶಿಸ್ತಿನ ಸಂಸ್ಥೆಯಾಗಿದ್ದು, ಹಿಂದೂಸ್ತಾನ ಸೇವಾದಳ ಹೆಸರಿನಲ್ಲಿ 1923ರಲ್ಲಿ ಆರಂಭವಾದ ಸಂಸ್ಥೆ 1950ರ ಮಾ.16ರಂದು ಭಾರತ ಸೇವಾದಳವಾಗಿ ಪುನರ್ ನಾಮಕರಣಗೊಂಡು ಇದೀಗ ಶತಮಾನೋತ್ಸವ ಆಚರಿಸಿಕೊಳ್ಳುತ್ತಿರುವುದು ಹೆಮ್ಮೆಯ ಸಂಗತಿ. ವೃತ್ತಿಯಲ್ಲಿ ವೈದ್ಯರಾಗಿದ್ದ ಡಾ.ನಾ.ಸು.ಹರ್ಡೀಕರ್ ಅವರು ಹೋರಾಟಗಾರರಲ್ಲಿ ಸಂಘಟನೆ ಹಾಗೂ ದೇಶಪ್ರೇಮದ ಜಾಗೃತಿ ಮೂಡಿಸಲು ಸ್ವತಃ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ ಇತರರಿಗೂ ಮಾದರಿಯಾಗಿದ್ದರು ಎಂದರು.

ಭಾರತ ಸೇವಾದಳ ವಿದ್ಯಾರ್ಥಿಗಳಲ್ಲಿ ಶಿಸ್ತು, ಸಮಯ ಪ್ರಜ್ಞೆ, ರಾಷ್ಟ್ರರಕ್ಷಣೆ ಬಗ್ಗೆ ಜಾಗೃತಿ ಮೂಡಿಸಲು ಜಿಲ್ಲೆಯಲ್ಲಿ ಹಲವು ಕಾರ್ಯಕ್ರಮ ಹಮ್ಮಿಕೊಳ್ಳುತ್ತಿದೆ. ಅಲ್ಲದೇ ಭವಿಷ್ಯದ ಸತ್ಪ್ರಜೆಗಳನ್ನು ರೂಪಿಸಲು ಅವಿರತವಾಗಿ ಶ್ರಮಿಸುತ್ತಿದೆ. ಸದೃಢ ಭಾರತ ಕಟ್ಟಲು ಭಾರತ ಸೇವಾದಳ ನೆರವಾಗಲಿದೆ ಎಂದರು.

ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಮಂಜುನಾಥ ಪ್ರಸನ್ನ ಹಾಗೂ ಭಾರತ ಸೇವಾದಳದ ಜಿಲ್ಲಾ ಶಾಖೆ ಉಪಾಧ್ಯಕ್ಷ ನಾಗರಾಜು ಕೊಂಗರಹಳ್ಳಿ ಅವರು, ಭಾರತ ಸೇವಾದಳದ ಉದ್ದೇಶ, ಆಶಯಗಳ ಬಗ್ಗೆ ಹಾಗೂ ಜಿಲ್ಲಾ ಸಮಿತಿ ಸಂಘಟಕ ಈ.ಅರುಣ್ ಸೇವಾದಳ ನಡೆದು ಬಂದ ಹಾದಿ, ಸೇವಾದಳದ ಆಶೋತ್ತರಗಳ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಭಾರತ ಸೇವಾದಳದ ಜಿಲ್ಲಾ ಸಮಿತಿ ಅಧ್ಯಕ್ಷ ವೆಂಕಟನಾಗಪ್ಪಶೆಟ್ಟಿ ಮಾತನಾಡಿ, ಸೇವೆಗಾಗಿ ಬಾಳು ಘೋಷಣೆ ಹೊಂದಿರುವ ಭಾರತ ಸೇವಾದಳದ ಧ್ಯೇಯೋದ್ದೇಶಗಳು ಸಾರ್ಥಕಗೊಳ್ಳಲು ಮಕ್ಕಳು ಸೇವಾದಳ ಸೇರಬೇಕು. ಆ ಮೂಲಕ ಸಾಮಾಜಿಕ ಶಿಸ್ತನ್ನು ರೂಢಿಸಿಕೊಳ್ಳಬೇಕು. ಸೇವಾದಳ ವಿದ್ಯಾರ್ಥಿಗಳಿಗೆ ಅಗತ್ಯವಿರುವ ಪರಿಕರಗಳನ್ನು ಒದಗಿಸಲು ಜಿಲ್ಲಾ ಸಮಿತಿ ಸಿದ್ಧವಿದೆ ಎಂದರು.

ಭಾರತ ಸೇವಾದಳದ ಕೇಂದ್ರ ಸಮಿತಿ ಸದಸ್ಯ ಎಂ.ಬಿ.ಲಿಂಗರಾಜು, ಜಿಲ್ಲಾ ಕಾರ್ಯಕಾರಿ ಸಮಿತಿ ಉಪಾಧ್ಯಕ್ಷ ಮಹೇಶ್ ಜಿ. ಬಳಿಗಾರ್, ಕೋಶಾಧ್ಯಕ್ಷ ವಿ.ಶ್ರೀನಿವಾಸ ಪ್ರಸಾದ್, ತಾಲೂಕು ಘಟಕದ ಅಧ್ಯಕ್ಷ ಸಿ.ಎಂ.ನರಸಿಂಹಮೂರ್ತಿ, ಜಿಲ್ಲಾ ಸಮಿತಿ ಕಾರ್ಯದರ್ಶಿ ವಿ.ಮಹದೇವಯ್ಯ, ಎಲ್ಲಾ ತಾಲೂಕುಗಳ ಘಟಕಗಳ ಅಧ್ಯಕ್ಷರು, ಕಾರ್ಯಕಾರಿ ಸಮಿತಿಯ ಸದಸ್ಯರು, ಪದಾಧಿಕಾರಿಗಳು ಕಾರ್ಯಕ್ರಮದಲ್ಲಿದ್ದರು.

ವೇದಿಕೆ ಕಾರ್ಯಕ್ರಮಕ್ಕೂ ಮೊದಲು ನಗರದ ಶ್ರೀ ಚಾಮರಾಜೇಶ್ವರ ದೇವಾಲಯದ ಆವರಣದಲ್ಲಿ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ರಾಮಚಂದ್ರರಾಜೇ ಅರಸ್ ಅವರು ಭಾರತ ಸೇವಾದಳದ ಪ್ರಭಾತ್‌ಬೇರಿಗೆ ಹಸಿರು ನಿಶಾನೆ ತೋರಿದರು. ಪ್ರಭಾತ್ ಬೇರಿಯು ಕೆಎಸ್ ಆರ್‌ಟಿಸಿ ಬಸ್ ನಿಲ್ದಾಣದ ಮೂಲಕ ಸಾಗಿ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಅಂತ್ಯಗೊಂಡಿತು. ಪ್ರಭಾತ್‌ಬೇರಿಯಲ್ಲಿ ವಿವಿಧ ಶಾಲೆಗಳ ಸೇವಾದಳದ ವಿದ್ಯಾರ್ಥಿಗಳು ಪಾಲ್ಗೊಂಡು ಭಾರತ ಸೇವಾದಳದ ಘೋಷಣೆಗಳನ್ನು ಉಚ್ಚರಿಸುವ ಮೂಲಕ ಗಮನ ಸೆಳೆದರು.

> 6 ಮಕ್ಕಳಿಗೆ ಪ್ರಾಥಮಿಕ ಹಂತದಲ್ಲಿಯೇ ಶಿಸ್ತು ಕಲಿಸಲು ಶಾಲೆಗಳಲ್ಲಿ ಸ್ಕೌಟ್ಸ್, ಗೈಡ್ಸ್, ಎನ್‌ಸಿಸಿ, ಎನ್‌ಎಸ್‌ಎಸ್ ಘಟಕಗಳನ್ನು ತೆರೆಯಲಾಗಿದೆ. ಸೇವಾದಳ ಸೇರಲು ವಿದ್ಯಾರ್ಥಿಗಳು ದೈಹಿಕ ಹಾಗೂ ಭೌತಿಕವಾಗಿ ಸದೃಢರಾಗಿ, ಮಾನಸಿಕ ಸ್ವಾಸ್ಥ್ಯದಿಂದ ಕೂಡಿರಬೇಕು. ರಾಷ್ಟ್ರಧ್ವಜ ಗೌರವಿಸಬೇಕು. ಸಹೋದರತೆ, ಭಾವೈಕ್ಯತೆ, ನಾಯಕತ್ವ ಗುಣ, ಸಮಾನತೆ, ಸರಳತೆ, ಪ್ರಾಮಾಣಿಕತೆ ಮೈಗೂಡಿಸಿಕೊಳ್ಳಬೇಕು.
>
> \- ರಾಮಚಂದ್ರರಾಜೇ ಅರಸ್, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ.

ಇಂದು ವಿಶ್ವಮಾನವ ದಿನಾಚರಣೆ

ಚಾಮರಾಜನಗರ, ಡಿ.28– ಜಿಲ್ಲಾಡಳಿತ, ಜಿಪಂ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ರಾಷ್ಟ್ರಕವಿ ಕುವೆಂಪು ಜನ್ಮದಿನದ ಅಂಗವಾಗಿ ವಿಶ್ವಮಾನವ ದಿನಾಚರಣೆಯನ್ನು ಡಿ.29ರಂದು ಬೆಳಗ್ಗೆ 11 ಗಂಟೆಗೆ ನಗರದ ವರನಟ ಡಾ.ರಾಜ್ ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಆಯೋಜಿಸಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಸಿ.ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸುವರು. ಸಂಸದ ವಿ.ಶ್ರೀನಿವಾಸ ಪ್ರಸಾದ್ ಉಪಸ್ಥಿತರಿರುವರು. ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ಹೆಚ್.ಎಂ.ಗಣೇಶ್‌ಪ್ರಸಾದ್, ಎಂ.ಆರ್. ಮಂಜುನಾಥ, ಮರಿತಿಬ್ಬೇಗೌಡ, ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮಧು ಜಿ.ಮಾದೇಗೌಡ, ನಗರಸಭಾ ಸದಸ್ಯರಾದ ಹೆಚ್.ಎಸ್. ಮಮತ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಸಾಹಿತಿ ಬನ್ನೂರು ಕೆ.ರಾಜು ಮುಖ್ಯ ಭಾಷಣ ಮಾಡುವರು ಎಂದು ಪ್ರಕಟಣೆ ತಿಳಿಸಿದೆ.

ದೇಶಕ್ಕೆ ಒಕ್ಕಲಿಗ ಸಮುದಾಯದ ಕೊಡುಗೆ ಅಪಾರ

ಕ್ಯಾಲೆಂಡರ್ ಬಿಡುಗಡೆ ಸಮಾರಂಭದಲ್ಲಿ ಎಂಎಲ್‌ಸಿ ಸಿ.ಎನ್.ಮಂಜೇಗೌಡ



ಚಾಮರಾಜನಗರ, ಡಿ.28– ಒಕ್ಕಲಿಗ ಸಮುದಾಯ ದೇಶಕ್ಕೆ ಅಪಾರ ಕೊಡುಗೆ ನೀಡಿದೆ ಎಂದು ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ತಿಳಿಸಿದರು.

ನಗರದ ಒಕ್ಕಲಿಗರ ಭವನದಲ್ಲಿ ತಾಲೂಕು ಒಕ್ಕಲಿಗರ ಸಂಘದ 2024ನೇ ಸಾಲಿನ ಕ್ಯಾಲೆಂಡರ್ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಬೆಂಗಳೂರಿನ ಅಭಿವೃದ್ಧಿಗಾಗಿ ಕೆಂಪೇಗೌಡರು ಶ್ರಮಿಸಿದ್ದಾರೆ. ಅಲ್ಲದೇ ದೇಶಕ್ಕೆ ಒಕ್ಕಲಿಗ ಸಮುದಾಯ ಕೊಡುಗೆ ಸಾಕಷ್ಟಿದೆ. ಅದನ್ನು ಸ್ಮರಿಸುವವರು ತುಂಬಾ ಕಡಿಮೆ. ಎಲ್ಲರೂ ಸ್ಮರಿಸಿದರೇ ಈ ಸಮಾಜ ಮತ್ತಷ್ಟು ಅಭಿವೃದ್ಧಿಗೊಳ್ಳಲಿದೆ ಎಂದರು. ಸಣ್ಣ ಸಮಾಜಗಳು ಸಂಪನ್ಮೂಲ ಕ್ರೋಢಿಕರಿಸಿಕೊಂಡು ಸಮಾಜದ ಏಳಿಗೆಗೆ ಶ್ರಮಿಸುತ್ತಿವೆ. ಅದೇ ರೀತಿ ಒಕ್ಕಲಿಗ ಸಂಘದ ಅಭಿವೃದ್ಧಿಗಾಗಿ ಸಂಪನ್ಮೂಲ ಕ್ರೋಢಿಕರಿಸಬೇಕು. ಆಗ ಸಂಘದ ಸದಸ್ಯರ, ಸಮಾಜದ ಮಕ್ಕಳಿಗೆ ವಿದ್ಯಾಭ್ಯಾಸ ನೀಡಲು ಸಹಕಾರಿಯಾಗಲಿದೆ. ಅಲ್ಲದೇ ನನ್ನ ಅನುದಾನದಲ್ಲಿ ಶಾಲೆ, ಅಂಗನವಾಡಿ, ಕುಡಿಯುವ ನೀರಿಗೆ ಅನುದಾನ ನೀಡಲಾಗುವುದು ಎಂದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ, ತಾಲೂಕು ಒಕ್ಕಲಿಗರ ಸಂಘ ಸಂಘದ ಉದ್ದೇಶಗಳಿಗೆ ಪೂರಕವಾಗಿ ಕೆಲಸ ಮಾಡುವ ಮೂಲಕ ಸಮಾಜದ ಏಳಿಗೆಗೆ ದುಡಿಯುತ್ತಿದೆ ಎಂದರು. ಸಂಘದ ಅಧ್ಯಕ್ಷ ಕೆ.ಪುಟ್ಟಸ್ವಾಮಿಗೌಡ ಮಾತನಾಡಿ, 2010ರಲ್ಲಿ ಸ್ಥಾಪನೆಯಾದ ತಾಲೂಕು ಒಕ್ಕಲಿಗರ ಸಂಘ ಸಮಾಜದ ಅಭಿವೃದ್ಧಿಗೆ ಶ್ರಮಿಸುತ್ತಿದೆ. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸಂಘಕ್ಕೆ 1 ಎಕರೆ ಜಮೀನನ್ನು ದಾನವಾಗಿ ನೀಡಿದ್ದಾರೆ. ಸಮುದಾಯವು ಜಿಲ್ಲೆಯಲ್ಲಿ ಅಲ್ಪಸಂಖ್ಯಾತರಾಗಿದ್ದು, ರಾಜ್ಯದಲ್ಲಿ ದೊಡ್ಡ ಸಮುದಾಯವಾಗಿ, ದೊಡ್ಡಶಕ್ತಿಯಾಗಿದೆ ಎಂದರು.

ಸಂಘದ ಗೌರವಾಧ್ಯಕ್ಷ ಸುದರ್ಶನ್ ಗೌಡ ಅಧ್ಯಕ್ಷತೆ ವಹಿಸಿದ್ದರು. ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಬಿ.ನಾಗೇಂದ್ರ, ಉಪಾಧ್ಯಕ್ಷ ಚಿನ್ನಮುತ್ತು, ರಾಜು, ಸಹ ಕಾರ್ಯದರ್ಶಿ ಸೋಮಶೇಖರ್, ಖಜಾಂಚಿ ಜಿ.ನಾರಾಯಣಪ್ರಸಾದ್, ಮಹಾಪೋಷಕ ಚಿಕ್ಕರಂಗೇಗೌಡ, ಸದಸ್ಯರಾದ ಆರ್. ನಾಗೇಂದ್ರ, ಶೇಖರ, ಸಿದ್ದರಾಜೇಗೌಡ, ಕೆ.ಎಂ.ಮಂಜು, ಮರಿಸ್ವಾಮಿ, ಜಿ.ಅರುಣ್, ವಿ.ಆರ್.ಪುರುಷೋತ್ತಮ್, ಮಹೇಶ್ ಗೌಡ, ರಾಜಶೇಖರಮೂರ್ತಿ, ಚಿಕ್ಕತಾಯಮ್ಮ, ಪಿ.ಕೆ.ರಾಜು ಹಾಜರಿದ್ದರು.

ಸಹಾಯಧನಕ್ಕೆ ಅರ್ಜಿ ಆಹ್ವಾನ

ಚಾಮರಾಜನಗರ, ಡಿ.28– ತೋಟಗಾರಿಕೆ ಇಲಾಖೆ ವತಿಯಿಂದ 2023–24ನೇ ಸಾಲಿನ ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಸೂಕ್ಷ್ಮ ಹನಿ ನೀರಾವರಿ (ಪಿಎಂಕೆಎಸ್‌ವೈ) ಯೋಜನೆಯಡಿ ವಿವಿಧ ತೋಟಗಾರಿಕಾ ಬೆಳೆಗಳಿಗೆ ಹನಿ ನೀರಾವರಿ ಉಪಕರಣ ಅಳವಡಿಕೆಗೆ 2ನೇ ಬಾರಿ ನೀಡುವ ಸಹಾಯಧನಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ತೋಟಗಾರಿಕಾ ಬೆಳೆಗಳಾದ ಟೊಮೆಟೊ, ಈರುಳ್ಳಿ, ಹೂವಿನ ಬೆಳೆಗಳು, ಪಪ್ಪಾಯ, ಬಾಳೆ, ಅರಿಶಿನ, ವಿವಿಧ ತರಕಾರಿ, ಹಣ್ಣಿನ ತೋಟದ ಬೆಳೆಗಳಿಗೆ ಹನಿ ನೀರಾವರಿ ಉಪಕರಣ ಅಳವಡಿಕೆಗೆ ಸಹಾಯಧನ ನೀಡಲಾಗುತ್ತದೆ. ಪರಿಶಿಷ್ಟ ಜಾತಿ ಹಾಗೂ ಪಂಗಡದ ರೈತರಿಗೆ ಶೇ.90ರಷ್ಟು ಸಹಾಯಧನ ನೀಡಲಾಗುತ್ತದೆ. ಈ ಯೋಜನೆಯಡಿ ಸಹಾಯಧನ ಪಡೆದು 7 ವರ್ಷ ಪೂರ್ಣಗೊಂಡಿದ್ದಲ್ಲಿ 2ನೇ ಬಾರಿ ಅದೇ ಜಮೀನಿಗೆ ಅದೇ ಫಲಾನುಭವಿಗಳು ಸೂಕ್ಷ್ಮ ಹನಿ ನೀರಾವರಿ ಪದ್ಧತಿ ಅಳವಡಿಸಿಕೊಂಡಲ್ಲಿ ಸಹಾಯಧನ ಒದಗಿಸಲಾಗುವುದು.

ಆಸಕ್ತ ರೈತರು ಕೂಡಲೇ ಅಗತ್ಯ ದಾಖಲಾತಿಗಳನ್ನು ತಾಲೂಕಿನ ತೋಟಗಾರಿಕಾ ಇಲಾಖೆಗೆ ಸಲ್ಲಿಸಿ ಕಾರ್ಯಾದೇಶ (ವರ್ಕ್ ಆರ್ಡರ್) ಪಡೆದು ಅನುಮೋದಿತ ಡ್ರಿಪ್ ಕಂಪನಿ, ಸಂಸ್ಥೆಗಳಿಂದ ಐಎಸ್‌ಐ ಗುಣಮಟ್ಟದ ಹನಿ ನೀರಾವರಿ ಉಪಕರಣ ಅಳವಡಿಸಿಕೊಂಡು ಯೋಜನೆ ಸದುಪಯೋಗಪಡೆದುಕೊಳ್ಳಬೇಕು ಎಂದು ಪ್ರಕಟಣೆ ತಿಳಿಸಿದೆ.



ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವ ಕ್ರಮ ಖಂಡಿಸಿ ಚಾಮರಾಜನಗರದಲ್ಲಿ ಕರ್ನಾಟಕ ಸೇನಾ ಪಡೆಯಿಂದ ರಾಷ್ಟ್ರೀಯ ಹೆದ್ದಾರಿಯಲ್ಲಿ ಒಣಗಿದ ಹೂ ಚೆಲ್ಲಿ ಪ್ರತಿಭಟನೆ ನಡೆಸಲಾಯಿತು. ಈ ವೇಳೆ ರಾಜು, ಚಾ.ವೆಂ.ರಾಜ್‌ಗೋಪಾಲ್, ಚಾ.ರಾ.ಕುಮಾರ್, ಮಹೇಶ್‌ಗೌಡ, ರಾಚಪ್ಪ, ಪ್ರಕಾಶ್, ವೀರಭದ್ರ, ಚಾ.ಸಿ.ಸಿದ್ದರಾಜು, ಮಂಜು, ತಾಂಡವಮೂರ್ತಿ ಇತರರಿದ್ದರು.

ಒಂದನೇ ಪುಟದಿಂದ

ಪರಿಸರವಾದಿಗಳು, ಸಾಹಿತಿಗಳ ವಿರೋಧ

ಸಂರಕ್ಷಣಾಧಿಕಾರಿ (ಪಿಸಿಸಿಎಫ್)ಗೆ ವರದಿ ಸಲ್ಲಿಸಿದ್ದರು. 2022ರ ಫೆಬ್ರವರಿ–ಮಾರ್ಚ್‌ನಲ್ಲಿ ಚಾಮುಂಡಿ ಬೆಟ್ಟ ಉಳಿಸಿ ಸಮಿತಿಯು ಆನ್‌ಲೈನ್ ಮೂಲಕ 70,000 ಮತ್ತು ಭೌತಿಕವಾಗಿ 50 ಸಾವಿರಕ್ಕೂ ಅಧಿಕ ಸಹಿಗಳನ್ನು ರೋಪ್ ವೇ ವಿರುದ್ಧ ಸಂಗ್ರಹಿಸಿತ್ತು. ಜೊತೆಗೆ ಏಪ್ರಿಲ್‌ನಲ್ಲಿ ನಗರದ ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜು ಸಭಾಂಗಣದಲ್ಲಿ ದುಂಡು ಮೇಜಿನ ಸಭೆಯನ್ನು ಆಯೋಜಿಸಿ, ಸಂವಾದಗಳ ಮೂಲಕ ಹಲವಾರು ಅಭಿಪ್ರಾಯಗಳನ್ನು ಸಂಗ್ರಹಿಸಿದೆ. ಅಲ್ಲಿ ತಜ್ಞರು ಯೋಜನೆಯ ಬಗ್ಗೆ ತಮ್ಮ ಆತಂಕವನ್ನು ಹಂಚಿಕೊಂಡಿದ್ದರು. ರಾಜವಂಶಸ್ಥೆ ಪ್ರಮೋದಾ ದೇವಿ ಒಡೆಯರ್ ಕೂಡ ಅಸಮಾಧಾನ ವ್ಯಕ್ತಪಡಿಸಿದ್ದರು ಎಂದು ವಿವರಿಸಿದರು.

ಆರೋಗ್ಯಕರ ಪರಿಸರ ಹಾಳು: ಬರಹಗಾರ ಪ್ರೊ.ಕಾಳೇಗೌಡ ನಾಗವಾರ ಮಾತನಾಡಿ, ಆಗ್ರಾದ ತಾಜ್‌ಮಹಲ್ ನಂತರ ಅತೀ ಹೆಚ್ಚು ಪ್ರವಾಸಿಗರು ಭೇಟಿ ನೀಡುವ ಎರಡನೇ ಪ್ರವಾಸಿ ತಾಣ ಮೈಸೂರಿನ ಚಾಮುಂಡಿ ಬೆಟ್ಟವು ಆಗಿದ್ದು, ಆರೋಗ್ಯಕರ ಪರಿಸರವನ್ನು ಹೊಂದಿದೆ. ಆದ್ದರಿಂದ ಅದನ್ನು ಯಾವುದೇ ಹಾನಿಯಾಗದಂತೆ ಕಾಪಾಡಿಕೊಳ್ಳಬೇಕಿದೆ ಎಂದರು.

ಪರಂಪರೆ ಹಾಳು ಮಾಡುವ ಯೋಜನೆಗೆ ವಿರೋಧ: ಪಾರಂಪರಿಕ ತಜ್ಞ ಪ್ರೊ.ಎನ್.ಎಸ್.ರಂಗರಾಜ್ ಮಾತನಾಡಿ, ನಾವು ಪ್ರವಾಸೋದ್ಯಮ ಅಭಿವೃದ್ಧಿಯನ್ನು ವಿರೋಧಿಸುತ್ತಿಲ್ಲ, ಆದರೆ ಪ್ರವಾಸೋದ್ಯಮ ಅಭಿವೃದ್ಧಿಯ ಹೆಸರಿನಲ್ಲಿ ಯಾವುದೇ ಪರಂಪರೆಯನ್ನು ಹಾಳು ಮಾಡುವ ಯೋಜನೆಗಳನ್ನು ವಿರೋಧಿಸುತ್ತೇವೆ. ಧಾರ್ಮಿಕ ಪ್ರವಾಸೋದ್ಯಮ ಇರಬೇಕೇ ಹೊರತು ವಾಣಿಜ್ಯೋದ್ಯಮ ಪ್ರವಾಸೋದ್ಯಮ ನಮಗೆ ಬೇಕಿಲ್ಲ. ಚಾಮುಂಡಿ ಬೆಟ್ಟಕ್ಕೆ ತೆರಳು ಸೂಕ್ತವಾದ ರಸ್ತೆಗಳಿವೆ. ಮೆಟ್ಟಿಲುಗಳ ಮೂಲಕವೂ ಹೋಗಬಹುದಾಗಿದೆ. ಆದ್ದರಿಂದ ರೋಪ್ ವೇ ಬೇಕಿಲ್ಲ, ಆದರೆ ತುಮಕೂರಿನ ಮಧುಗಿರಿ ಬೆಟ್ಟಕ್ಕೆ ರೋಪ್ ವೇ ಅಗತ್ಯವಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಪ್ರಗತಿಪರ ಚಿಂತಕ ಪ್ರೊ.ಕಾಳಚನ್ನೇಗೌಡ, ಪರಿಸರ ಬಳಗದ ಸದಸ್ಯ ಭಾಗ್ಯ ಶಂಕರ್, ಮಲ್ಲಮ್ಮ ಗಾಣಿಗೇರ್ ಸಹ ರೋಪ್ ವೇಯಿಂದ ಆಗುವ ಪರಿಸರ ಹಾನಿ ವಿಚಾರವಾಗಿ ತಮ್ಮ ಅಭಿಪ್ರಾಯ ಹಂಚಿಕೊಂಡರು.

ಕನ್ನಡ ನಾಮಫಲಕ ಕಡ್ಡಾಯ ಜಾರಿ

ಮಾಹಿತಿಗಾಗಿ ಪ್ರಕಟಿಸಲಾದ ಜಾಹೀರಾತು ಮತ್ತು ಸೂಚನೆಗಳನ್ನು ಪ್ರದರ್ಶಿಸುವ ಎಲ್ಲ ಫಲಕಗಳಲ್ಲಿ ವಿಷಯಗಳ ನಿಗದಿತ ಶೇಕಡಾವಾರು ಪ್ರಮಾಣವು ಕನ್ನಡ ಭಾಷೆಯಲ್ಲಿರತಕ್ಕದ್ದು. ಜಾಹೀರಾತುಗಳ ವರ್ಗೀಕರಣ ಮತ್ತು ಕನ್ನಡದಲ್ಲಿ ಪ್ರದರ್ಶಿಸಬೇಕಾದ ಜಾಹೀರಾತು ವಿಷಯಗಳ ಶೇಕಡಾವಾರು ಪ್ರಮಾಣವು ರಾಜ್ಯ ಸರ್ಕಾರದಿಂದ ನಿಯಮಿಸಲಾದಂತೆ ಇರತಕ್ಕದ್ದು ಎಂದು ತಿಳಿಸಲಾಗಿದೆ ಇದನ್ನು ಸಹ ಅನುಷ್ಠಾನಗೊಳಿಸಲಾಗುವುದು ಎಂದರು. ಈ ಕಾಯ್ದೆಯ ಅಧಿಸೂಚನೆ ಹೊರಡಿಸಲು ಹಾಗೂ ನಿಯಮಗಳನ್ನು ರೂಪಿಸಲು ಕೂಡಲೇ ಕ್ರಮ ಕೈಗೊಳ್ಳಲಾಗುವುದು.

ಶಾಂತಿಯುತ ಪ್ರತಿಭಟನೆ ಮಾಡಲು ಸರ್ಕಾರದ ವಿರೋಧ ಇಲ್ಲ, ನಮಗೆ ಪ್ರಜಾಪ್ರಭುತ್ವದಲ್ಲಿ, ಸಂವಿಧಾನದಲ್ಲಿ ನಂಬಿಕೆ ಇದೆ. ಯಾರೇ ಆಗಲಿ ಕಾನೂನಿನ ವಿರುದ್ಧವಾಗಿ ನಡೆದುಕೊಂಡರೆ, ಸರ್ಕಾರ ಸಹಿಸುವುದಿಲ್ಲ ಎಂಬುದನ್ನು ಸ್ಪಷ್ಟವಾಗಿ ಹೇಳ ಬಯಸುತ್ತೇನೆ ಎಂದರು. ಕರ್ನಾಟಕ ಹೈಕೋರ್ಟ್ ಪ್ರತಿಭಟನೆಗಳನ್ನು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಮಾತ್ರ ನಡೆಸಬೇಕು, ರಾಜ್ಯ ಸರ್ಕಾರ ಇದನ್ನು ಖಾತರಿಪಡಿಸಬೇಕು ಎಂದು ಸ್ಪಷ್ಟವಾದ ಆದೇಶ ಹೊರಡಿಸಿದೆ. ರಾಜ್ಯದ ಹಿತದೃಷ್ಟಿಯಿಂದ ಶಾಂತಿಯುತ ಪ್ರತಿಭಟನೆ ಮಾಡಿದರೆ, ವಿರೋಧಿಸುವುದಿಲ್ಲ. ಕಾನೂನು ಕೈಗೆ ತೆಗೆದುಕೊಂಡರೆ ಸರ್ಕಾರ ಕ್ರಮ ಕೈಗೊಳ್ಳಲಿದೆ ಎಂದು ಎಚ್ಚರಿಸಿದರು.

ಸಂಘಟನೆಯಿರಲಿ, ವ್ಯಕ್ತಿಗಳಿರಲಿ, ಖಾಸಗಿ ಸಂಸ್ಥೆಗಳಿರಲಿ ಯಾರೇ ಆಗಲಿ ಸಂವಿಧಾನಕ್ಕೆ ಅನುಗುಣವಾಗಿ ನಡೆದುಕೊಳ್ಳಬೇಕು, ಯಾರೂ ಕಾನೂನು ಕೈಗೆ ತೆಗೆದುಕೊಳ್ಳಬೇಡಿ ಎಂದು ಮನವಿ ಮಾಡುತ್ತೇನೆ ಎಂದರು. ಈ ಮಧ್ಯೆ ಸುದ್ದಿಗಾರರೊಂದಿಗೆ ಮಾತನಾಡಿದ ಗೃಹ ಸಚಿವ ಡಾ. ಜಿ.ಪರಮೇಶ್ವರ್, ಕನ್ನಡ ಪರ ಹೋರಾಟದ ಹೆಸರಿನಲ್ಲಿ ಪ್ರತಿಭಟನೆ ವೇಳೆ ಕಾನೂನು ಕೈಗೆತ್ತಿಕೊಳ್ಳುವುದನ್ನು ಸಹಿಸುವುದಿಲ್ಲ, ಸರ್ಕಾರ ಕನ್ನಡ ಪರವಾಗಿ ಎಲ್ಲ ಬಗೆಯ ತೀರ್ಮಾನಗಳನ್ನು ತೆಗೆದುಕೊಳ್ಳುವ ಕೆಲಸ ಹಿಂದೆಯೂ ಮಾಡಿದೆ, ಈಗಲೂ ಬದ್ಧವಾಗಿದೆ, ಯಾವುದೇ ಸಮಸ್ಯೆಗಳಿದ್ದರೆ ಕನ್ನಡ ಪರ ಹೋರಾಟಗಾರರು ಸರ್ಕಾರವನ್ನು ಒತ್ತಾಯಿಸಲಿ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇದಕ್ಕೆ ಅವಕಾಶವಿದೆ. ಪ್ರತಿಭಟನೆ ಹೆಸರಲ್ಲಿ ಅಂಗಡಿ, ಶಾಪಿಂಗ್ ಮಾಲ್‌ಗಳ ಮೇಲೆ ದಾಳಿ ಮಾಡಿ, ಸಾರ್ವಜನಿಕ ಆಸ್ತಿಗೆ ಹಾನಿ ಮಾಡುವುದು ಸರಿಯಲ್ಲ ಎಂದರು.

ವಕೀಲೆ, ಆಕೆಯ ಪತಿ ವಿರುದ್ಧ ಕೇಸ್

ಮಾತನಾಡಿದಾಗ ಹಿರಿಯ ನಾಗರಿ ಕರ ಕೋಟಾದಡಿ ನಾಗರಾಜು ಅವರಿಗೆ, ಎಸ್‌ಸಿ ಮಹಿಳಾ ಕೂಟದಲ್ಲಿ ನಾಗರಾಜು ಪತ್ನಿ ಮಲ್ಲಮ್ಮ, ಪುತ್ರಿ ಪುನೀತ, ಸೊಸೆ ಗಿರಿಜಾಂಬ ಮತ್ತು ಗಿರಿಜಾಂಬ ಸಂಬಂಧಿಕರಾದ ರೂಪಾಗೆ ನಿವೇಶನಗಳನ್ನು ಕೊಡಿಸುವುದಾಗಿ ನಂಬಿಸಿದ್ದಾರೆ. 2018ರ ಡಿ.26ರಂದು 5 ನಿವೇಶನಗಳಿಗೆ 5 ಲಕ್ಷ ರೂ. ಪಡೆದು 3.87 ಲಕ್ಷ ರೂ.ಗಳಿಗೆ ಮುಡಾ ರಶೀದಿಯನ್ನು ಇವರಿಗೆ ನೀಡಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ಇವರು ಮಾತ್ರವಲ್ಲದೆ ಗಿರಿಜಾಂಬ ತಂಗಿ ಸುನೀತಾ ಅವರಿಂದಲೂ ಕೂಡ ಅನಿತಾ 1.50 ಲಕ್ಷ ರೂ.ಗಳನ್ನು ಪಡೆದಿದ್ದು, ಒಟ್ಟಾರೆ ನಾಗರಾಜು ಕುಟುಂಬದಿಂದ 12.24 ಲಕ್ಷ ರೂ. ಅನಿತಾ ಪಡೆದಿದ್ದಾರೆ. 2019ರ ಆ.19ರಂದು ಅನಿತಾ ಮತ್ತು ಆಕೆಯ ಪತಿ ದೇವೇಂದ್ರ ಅವರುಗಳು ನಾಗರಾಜು ಕುಟುಂಬದವರನ್ನು ಮೈಸೂರಿನ ವಿಜಯನಗ ರಕ್ಕೆ ಕರೆದುಕೊಂಡು ಹೋಗಿ, ಕೆಲವು ನಿವೇಶನಗಳನ್ನು ತೋರಿಸಿ ಅವುಗಳನ್ನು ಮುಡಾದಿಂದ ಮಂಜೂರು ಮಾಡಿಸಿ ಖಾತೆ ಮಾಡಿಕೊಡುವುದಾಗಿ ತಿಳಿಸಿದ್ದಾರೆ. ಅಲ್ಲದೇ ಹಣ ಪಾವತಿಯ ಮುಡಾ ರಶೀದಿ ಸೇರಿದಂತೆ ನಿವೇಶನಗಳಿಗೆ ಸಂಬಂಧಿಸಿದ ಕೆಲವು ದಾಖಲೆಗಳನ್ನು ಇವರಿಗೆ ನೀಡಿ ದ್ದಾರೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ.

ಈ ಮಧ್ಯೆ ಮುಡಾ ನಿವೇಶನ ಕೊಡಿಸುವುದಾಗಿ ನಂಬಿಸಿ ಅನಿತಾ ವಂಚಿಸಿದ್ದಾರೆ ಎಂದು ಲಕ್ಷ್ಮೀಪುರಂ ಠಾಣೆಯಲ್ಲಿ ದೂರು ದಾಖಲಾಗಿರುವ ಬಗ್ಗೆ ಪತ್ರಿಕಾ ವರದಿಯು ನಾಗರಾಜು ಅವರಿಗೆ ವಾಟ್ಸಾಪ್ ಮೂಲಕ ಲಭಿಸಿದ್ದು, ಇದರಿಂದ ಗಾಬರಿಯಾದ ಅವರು ಅನಿತಾ ಅವರನ್ನು ಭೇಟಿ ಮಾಡಿ ಕೇಳಿದಾಗ, ಯಾರೋ ಹೊಟ್ಟೆಕಿಚ್ಚಿಗಾಗಿ ದೂರು ನೀಡಿದ್ದಾರೆ ಎಂದು ಅನಿತಾ ಮತ್ತು ದೇವೇಂದ್ರ ಸಮಜಾಯಿಷಿ ನೀಡಿದ್ದಾರೆ. ಆದರೂ ಸಂಶಯವಿದ್ದ ಕಾರಣ ನಾಗರಾಜು ಮುಡಾ ಕಚೇರಿಗೆ ತೆರಳಿ ಅನಿತಾ ಮತ್ತು ದೇವೇಂದ್ರ ಕೊಟ್ಟಿದ್ದ ದಾಖಲೆಗಳನ್ನು ಅಧಿಕಾರಿಗಳಿಗೆ ತೋರಿಸಿದಾಗ ಅವೆಲ್ಲವೂ ನಕಲಿ ಎಂಬುದು ಗೊತ್ತಾಗಿದೆ. ಈ ಹಿನ್ನೆಲೆಯಲ್ಲಿ ನಮಗೆ ನಿವೇಶನ ಬೇಡ, ಹಣ ಕೊಡಿ ಎಂದು ಒತ್ತಾಯ ಮಾಡಿದಾಗ ಇವರ ಹಣಕ್ಕೆ ಶೇ.12ರಷ್ಟು ಬಡ್ಡಿ ಸೇರಿಸಿ 2021ರ ಅಕ್ಟೋಬರ್ 23ರೊಳಗೆ ಕೊಡು ವುದಾಗಿ ನೋಟರಿ ಮೂಲಕ 2 ಪತ್ರಗಳನ್ನು ಕೊಟ್ಟಿದ್ದಲ್ಲದೆ, 2 ಚೆಕ್‌ಗಳನ್ನೂ ಕೂಡ ಅನಿತಾ ನೀಡಿದ್ದಾರೆ. ಚೆಕ್‌ಗಳು ಬೌನ್ಸ್ ಆಗಿದ್ದು, ಹಣ ಹಿಂತಿರುಗಿಸದೇ ತಾವು ನಡೆಸುತ್ತಿದ್ದ ಅಂಗಡಿ ಬಂದ್ ಮಾಡಿ, ಸ್ವಂತ ಮನೆಯನ್ನು ಬಾಡಿಗೆಗೆ ಕೊಟ್ಟು, ನಾಗರಾಜು ಮತ್ತು ಕುಟುಂಬದವರ ಮೊಬೈಲ್ ನಂಬರ್‌ಗಳನ್ನು ಬ್ಲಾಕ್ ಲಿಸ್ಟ್‌ಗೆ ಹಾಕಿ ಅನಿತಾ ಮತ್ತು ದೇವೇಂದ್ರ ತಲೆಮರೆಸಿಕೊಂಡಿದ್ದಾರೆ ಎಂದು ಡಿ.27ರಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಲಾಗಿದೆ. ಈ ಸಂಬಂಧ ವಿದ್ಯಾರಣ್ಯಪುರಂ ಠಾಣೆ ಪೊಲೀಸರು ಭಾರ ತೀಯ ದಂಡ ಸಂಹಿತೆ 420, 465, 468, ರೆಡ್‌ವಿತ್ 34ರಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಗಂಟೆಗಟ್ಟಲೆ ಕಾದು ನಿಂತವರ ಆಕ್ರೋಶ

ಆನ್‌ಲೈನ್‌ನಲ್ಲಿ ಶೇ.50ರಷ್ಟು ಟಿಕೆಟ್ ಬುಕ್ಕಿಂಗ್‌ಗೆ ಮಾತ್ರ ಅವಕಾಶವಿದ್ದು, ಶೇ.50ರಷ್ಟು ಟಿಕೆಟ್‌ಗಳನ್ನು ನೇರವಾಗಿ ಕೌಂಟರ್‌ನಲ್ಲೇ ಕೊಡಬೇಕು. ಎಲ್ಲಾ ಟಿಕೆಟ್‌ಗಳೂ ಆನ್‌ಲೈನ್‌ನಲ್ಲಿ ಮಾರಾಟ ಮಾಡಲು ಹೇಗೆ ಸಾಧ್ಯ? ಎಂದು ಪ್ರಶ್ನಿಸಿದರು.

ಸಫಾರಿಗೆಂದು ತುಂಬಾ ಆಸೆಯಿಂದ ದೂರದ ಊರುಗಳಿಂದ ಬಂದಿದ್ದೇವೆ. ಟಿಕೆಟ್‌ಗಾಗಿ ಬೆಳಗ್ಗೆ 11 ಗಂಟೆಯಿಂದ ಬಿಸಿಲಲ್ಲೇ ನಿಂತಿದ್ದೇವೆ. ಈಗ ಇದ್ದಕ್ಕಿದ್ದಂತೆ ಎಲ್ಲಾ ಟಿಕೆಟ್ ಆನ್‌ಲೈನ್‌ನಲ್ಲಿ ಬುಕ್ ಆಗಿವೆ ಎಂದರೆ ಏನರ್ಥ?. ಟಿಕೆಟ್ ಖಾಲಿಯಾಗಿವೆ ಎಂದು ಸೂಚನಾ ಫಲಕವನ್ನೂ ಹಾಕಿಲ್ಲ. ಬಿಸಿಲಲ್ಲೇ ನಿಂತಿದ್ದರೂ ಯಾರೊಬ್ಬರೂ ಟಿಕೆಟ್ ಇಲ್ಲ ಎಂದು ಹೇಳಲಿಲ್ಲ. ಈಗ ನಿಮಗಿಷ್ಟ ಬಂದಂತೆ ಹೇಳುತ್ತಿದ್ದೀರಾ? ಎಂದು ತೀವ್ರ ಅಸಮಾಧಾನ ಹೊರ ಹಾಕಿದರು.

ಪ್ರವಾಸಿಗರ ಪ್ರಶ್ನೆಗೆ ಉತ್ತರಿಸಲಾಗದ ಸಿಬ್ಬಂದಿ, ಸಂಬಂಧಪಟ್ಟ ಅಧಿಕಾರಿ ಬರುತ್ತಾರೆ ಎಂದು ನುಣುಚಿಕೊಳ್ಳಲು ಯತ್ನಿಸಿದ್ದಾರೆ. ಆಗ ಯಾರು ನಿಮ್ಮ ಅಧಿಕಾರಿ, ಎಲ್ಲಿ ಹೋಗಿದ್ದಾರೆ ಎಂದು ಪ್ರಶ್ನಿಸಿದಾಗ, ಅವರು ಇಲಾಖೆ ಕೆಲಸದ ಮೇಲೆ ನ್ಯಾಯಾಲಯಕ್ಕೆ ಹೋಗಿದ್ದಾರೆ, ಇನ್ನು 10 ನಿಮಿಷ ಬರುತ್ತಾರೆ ಎಂದಿದ್ದಾರೆ. ಬೆಳಗ್ಗೆಯಿಂದ ಕಾದಿದ್ದೇವೆ, ಈಗ 10 ನಿಮಿಷ ಬರುತ್ತಾರೆ ಎಂದು ಹೇಳುತ್ತೀರಾ?. ಸ್ಪಷ್ಟನೆ ನೀಡಲು ನಿಮಗೆ ಅವಕಾಶವಿಲ್ಲವಾದರೆ ಸಂಬಂಧಪಟ್ಟ ಅಧಿಕಾರಿಗಳನ್ನೇ ಕರೆಸಿ. ನಿಮಗೆ ಇಲಾಖೆಯಿಂದ ಎಲ್ಲಾ ಸೌಕರ್ಯಗಳಿವೆ. ನಾವು ಗಂಟೆಗಟ್ಟಲೆ ಬಿಸಿಲಲ್ಲೇ ನಿಂತಿದ್ದೇವೆ. ಮಕ್ಕಳು, ವಯಸ್ಸಾದವರೂ ಸಾಲಿನಲ್ಲಿ ನಿಂತಿದ್ದರೂ ಉಡಾಫೆಯಿಂದ ನಡೆದುಕೊಳ್ಳುತ್ತೀರಾ ಎಂದು ಹರಿಹಾಯ್ದಿದ್ದಾರೆ. ಮಧ್ಯಾಹ್ನ 3 ಗಂಟೆಗೆ ಒಂದು ಹಾಗೂ 3.30ಕ್ಕೆ ಎರಡು ಬಸ್‌ಗಳು ಸಫಾರಿಗೆ ಹೊರಡುತ್ತವೆ. ಆದರೆ ಬೆಳಗ್ಗೆ 11 ಗಂಟೆಗೆ ಬಂದರೂ ಟಿಕೆಟ್ ಇಲ್ಲ ಎಂದಾದರೆ ಕೌಂಟರ್ ಇರುವುದೇಕೆ?. ಅಧಿಕಾರಿಯಾಗಲೀ, ಮೇಲ್ವಿಚಾರಕರಾಗಲೀ ಇಲ್ಲದೆ ಯಾವ ರೀತಿಯಲ್ಲಿ ನಿರ್ವಹಣೆ ಮಾಡುತ್ತಾರೆ?. ಕ್ರಿಸ್‌ಮಸ್ ರಜೆ ಹಾಗೂ ಹೊಸವರ್ಷ ಹಿನ್ನೆಲೆಯಲ್ಲಿ ದೇಶ–ವಿದೇಶಗಳ ಪ್ರವಾಸಿಗರು ಸಫಾರಿಗೆ ಬರುತ್ತಾರೆ. ಈ ರೀತಿಯ ಅವ್ಯವಸ್ಥೆಯಾದರೆ ಅರಣ್ಯ ಇಲಾಖೆ ಬಗ್ಗೆ ಒಳ್ಳೆಯ ಅಭಿಪ್ರಾಯ ಮೂಡಲು ಸಾಧ್ಯವೇ?. ಶೇ.100ರಷ್ಟು ಆನ್‌ಲೈನ್ ಬುಕ್ ಆಗಿದೆ ಎಂದು ಪ್ರವಾಸಿಗರಿಗೆ ಸುಳ್ಳು ಹೇಳಿ, ಖಾಸಗಿ ರೆಸಾರ್ಟ್‌ನವರಿಗೆ ಮಣೆ ಹಾಕುತ್ತಾರೆ. ತಮಗೆ ಬೇಕಾದವರಿಗೆ ಟಿಕೆಟ್ ವ್ಯವಸ್ಥೆ ಮಾಡುತ್ತಾರೆ. ಇದರಿಂದ ಪ್ರವಾಸಿಗರು ನಿರಾಸೆಯಿಂದ ವಾಪಸ್ಸಾಗುತ್ತಾರೆ ಎಂಬ ಆರೋಪ ಕೇಳಿಬರುತ್ತಿದೆ ಎಂದು ಪ್ರವಾಸಿಗರೊಬ್ಬರು ತೀವ್ರ ಬೇಸರ ವ್ಯಕ್ತಪಡಿಸಿದ್ದಾರೆ.

ಯುವರಾಜ ಕಾಲೇಜಿನ ಘಟಿಕೋತ್ಸವ

ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಕುಡಿಯುವ ನೀರು, ಶೌಚಾಲಯವಿಲ್ಲದೆ ಅನೇಕ ಹೆಣ್ಣು ಮಕ್ಕಳ ಶಿಕ್ಷಣ ಮೊಟಕು

ಭಾರತೀಯ ವಿಜ್ಞಾನ ಸಂಸ್ಥೆಯ ಪ್ರಾಧ್ಯಾಪಕ ಪ್ರೊ. ಎಂ.ಆರ್.ಎನ್. ಮೂರ್ತಿ ವಿಷಾದ



ದಿನಕ್ಕೊಂದು ಆವಿಷ್ಕಾರ

ವಿಜ್ಞಾನ ಕ್ಷೇತ್ರದಲ್ಲಿ ಜಾಗತ್ತಿನಲ್ಲಿ ಆಶ್ಚರ್ಯಕರ ರೀತಿಯಲ್ಲಿ ಅನೇಕ ಆವಿಷ್ಕಾರಗಳು ನಡೆಯುತ್ತಿವೆ. ಹೊಸ ತಂತ್ರಜ್ಞಾನ ನಿತ್ಯವೂ ಪರಿಚಯವಾಗುತ್ತಿದೆ. ವಿದ್ಯಾರ್ಥಿಗಳು ವಿಜ್ಞಾನದ ಬಗ್ಗೆ ಸದಾ ಕುತೂಹಲ ಹೊಂದಿರಬೇಕು. ಜೊತೆಗೆ ಜ್ಞಾನ ಸಂಪಾದಿಸುವ ಛಲ ಮನಸ್ಸಿನಲ್ಲಿ ಆಳವಾಗಿ ಬೇರೂರಬೇಕು. ಸತತ ಕಲಿಕೆಯು ನಮ್ಮ ದೃಷ್ಟಿಕೋನ ಬದಲಿಸುತ್ತದೆ. ಇದರಿಂದಾಗಿ ನಮ್ಮಲ್ಲಿರುವ ಕಲಿಕೆಗೆ ಸಂಬಂಧಿಸಿದ ಕುತೂಹಲ, ಆಸಕ್ತಿಯನ್ನು ಬತ್ತಿಹೋಗದಂತೆ ನೋಡಿಕೊಳ್ಳಬೇಕು ಎಂದರು.

– ಪ್ರೊ.ಎಂ.ಆರ್.ಎನ್.ಮೂರ್ತಿ,
ಭಾರತೀಯ ವಿಜ್ಞಾನ ಸಂಸ್ಥೆಯ ಅಣ್ವಿಕ್ ಜೈವಿಕ ಭೌತಶಾಸ್ತ್ರ ಪ್ರಾಧ್ಯಾಪಕ

ಮೈಸೂರು, ಡಿ.28(ಎಂಟಿವೈ)– ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಕುಡಿಯುವ ನೀರು ಹಾಗೂ ಶೌಚಾಲಯದ ವ್ಯವಸ್ಥೆ ಇಲ್ಲದ ಕಾರಣ ಹದಿಹರೆಯದ ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸಲು ಪೋಷಕರು ಆತಂಕಪಡುವಂತಾಗಿದ್ದು, ಇದರಿಂದ ಅನೇಕರು ಶಿಕ್ಷಣವನ್ನು ಮೊಟಕುಗೊಳಿಸುತ್ತಿದ್ದಾರೆ ಎಂದು ಭಾರತೀಯ ವಿಜ್ಞಾನ ಸಂಸ್ಥೆಯ ಅಣ್ವಿಕ್ ಜೈವಿಕ ಭೌತಶಾಸ್ತ್ರ ಪ್ರಾಧ್ಯಾಪಕ ಪ್ರೊ.ಎಂ.ಆರ್.ಎನ್.ಮೂರ್ತಿ ವಿಷಾದಿಸಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಯುವರಾಜ ಕಾಲೇಜಿನ ಅಮೃತ ಮಹೋತ್ಸವ ಸಭಾಂಗಣದಲ್ಲಿ ಗುರುವಾರ ನಡೆದ ಕಾಲೇಜಿನ 9ನೇ ಪದವಿ ಪ್ರದಾನ ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿ ಮಾತನಾಡಿದ ಅವರು, ಸರ್ಕಾರಿ ಶಾಲೆಗಳಲ್ಲಿ ಅದರಲ್ಲೂ ಗ್ರಾಮೀಣ ಪ್ರದೇಶದಲ್ಲಿನ ಪ್ರಾಥಮಿಕ ಶಾಲೆಗಳಲ್ಲಿ ಶೌಚಾಲಯ ಹಾಗೂ ಕುಡಿಯುವ ನೀರಿನ ಸಮಸ್ಯೆ ಕಂಡುಬಂದಿದೆ. ಶೌಚಾಲಯ ಇಲ್ಲದಿರುವುದರಿಂದ ಹೆಣ್ಣು ಮಕ್ಕಳು ಮುಜುಗರಕ್ಕೆ ಒಳಗಾಗುವಂತಾಗಿದೆ. ಇದರಿಂದ ಹದಿಹರೆಯದ ಹೆಣ್ಣು ಮಕ್ಕಳನ್ನು ಶಾಲೆಗೆ ಕಳಿಸುವುದಕ್ಕೆ ಪೋಷಕರು ಹಿಂದೇಟು ಹಾಕುವಂತ ಸ್ಥಿತಿ ನಿರ್ಮಾಣವಾಗಿದೆ. ಇದರೊಂದಿಗೆ ಶಾಲೆಯಲ್ಲಿ ಶೌಚಾಲಯ, ಕುಡಿಯುವ ನೀರಿಲ್ಲದಿದ್ದರೆ, ಅಲ್ಲಿನ ಶಿಕ್ಷಕಿಯರು ಬೇರೆ ಶಾಲೆಗೆ ವರ್ಗ ಮಾಡಿಸಿಕೊಳ್ಳುತ್ತಿದ್ದಾರೆ. ಇದರಿಂದ ಮಕ್ಕಳಿಗೆ ಸೂಕ್ತ ಗುಣಮಟ್ಟದ ಶಿಕ್ಷಣ ಒದಗಿಸಲು ಸಾಧ್ಯವಾಗುತ್ತಿಲ್ಲ ಎಂದರು.

ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಸೇರಿದಂತೆ ಅನೇಕ ವಿದ್ಯಾರ್ಥಿಗಳಿಗೆ ಇಂಗ್ಲೀಷ್ ಭಾಷೆ ಕಲಿಕೆ ಕಠಿಣ ಸಮಸ್ಯೆಯಾಗಿದೆ. ಭಾಷಾ ಸಮಸ್ಯೆಯಿಂದ ಶಿಕ್ಷಣ ಸೇರಿದಂತೆ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಪ್ರಥಮ ಭಾಷೆಯಾಗಿ ಕನ್ನಡ ಬೋಧಿಸುವ ಸರ್ಕಾರಿ ಪ್ರಾಥಮಿಕ ಹಾಗೂ ನಂತರದ ಶಿಕ್ಷಣದ ವೇಳೆ ಮಕ್ಕಳಿಗೆ ಇಂಗ್ಲೀಷ್ ಜ್ಞಾನ ಕಲಿಸಲು ಹೆಚ್ಚಿನ ಆದ್ಯತೆ ನೀಡಬೇಕು ಎಂದರಲ್ಲದೆ, ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಶಿಕ್ಷಕರು ಇಲ್ಲದಿರುವುದರಿಂದ ಪರಿಣಾಮಕಾರಿಯಾದ ಬೋಧನೆ ಸಾಧ್ಯವಾಗದೆ ವಿದ್ಯಾರ್ಥಿಗಳು ಅನುತ್ತೀರ್ಣರಾಗುತ್ತಿದ್ದಾರೆ. ಇದರಿಂದ ಶಿಕ್ಷಣದ ಗುಣಮಟ್ಟ ಕುಸಿಯುತ್ತಿದೆ ಎಂದರು.

ಅಧ್ಯಯನ ನಿರಂತರ: ಪದವಿ ಹಾಗೂ ಸ್ನಾತಕೋತ್ತರ ಪದವಿ ಪಡೆದವರು ಮುಂದಿನ ಅಧ್ಯಯನಕ್ಕೆ ಅಡಿಯಿಡುವುದಿಲ್ಲ. ಪದವಿ, ಸ್ನಾತಕೋತ್ತರ ಪದವಿ ಪಡೆದವರಲ್ಲಿ ಬಹುತೇಕರು ಉದ್ಯೋಗ ಹುಡುಕಲಾರಂಭಿಸುತ್ತಾರೆ. ಇದು ಸರಿಯಾದ ಕ್ರಮವಲ್ಲ. ಅಧ್ಯಯನ ನಿಲ್ಲಬಾರದು. ಉದ್ಯೋಗ ಪಡೆದುಕೊಂಡರೂ ಅಧ್ಯಯನ ಮುಂದುವರೆಸಬೇಕು. ಆ ಮೂಲಕ ಇನ್ನಷ್ಟು ಜ್ಞಾನ ಸಂಪಾದಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಸರ್ಕಾರಿ ಶಾಲೆಗಳ ಪರಿಸ್ಥಿತಿ, ದುಸ್ಥಿತಿ ಬಗ್ಗೆ ನಾವು ಮಾತನಾಡುವ ಸಂದರ್ಭದಲ್ಲೇ ಬೆಂಗಳೂರಲ್ಲಿ ಸುಸಜ್ಜಿತ ಶಾಲೆಗಳಿರುವುದನ್ನು ಕಾಣಬಹುದಾಗಿದೆ. ಈ ಖಾಸಗಿ ಶಾಲೆಗಳಿಗೆ ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಕಾಲೇಜುಗಳಿಗೆ ನೀಡುವ ಶುಲ್ಕಕ್ಕಿಂತಲೂ ಹೆಚ್ಚು ಶುಲ್ಕ ನೀಡಬೇಕಾಗಿದೆ. ಶಾಲಾ ಶೈಕ್ಷಣಿಕ ಪ್ರವಾಸಕ್ಕಾಗಿ ವಿದೇಶಕ್ಕೆ ಕರೆದುಕೊಂಡು ಹೋಗುವ ವ್ಯವಸ್ಥೆ ಇದೆ. ಈ ಹಿನ್ನೆಲೆಯಲ್ಲಿ ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಒದಗಿಸಬೇಕು. ಅವರಿಗೂ ಸೌಲಭ್ಯ ದೊರೆತರೆ ಸಾಧನೆ ಮಾಡುತ್ತಾರೆ ಎಂದರು.

ಪ್ರತಿಯೊಂದು ಕ್ಷೇತ್ರದಲ್ಲಿಯೂ ಜ್ಞಾನ ಸ್ಫೋಟವಾಗುತ್ತಿದೆ. ಮಾಹಿತಿ ತಂತ್ರಜ್ಞಾನ ಸಹಾ ತೀವ್ರವಾಗಿ ಬೆಳೆಯುತ್ತಿದೆ. ಹೀಗಾಗಿ ಆರಂಭಿಕ ಎರಡು ದಶಕಗಳಲ್ಲಿ ಇದ್ದ ಜ್ಞಾನ, ಇಂದು ಮೀರಿಸುವಂತೆ ಸಾಧನೆ ನಡೆಯುತ್ತಿದೆ. ಈ ಕಾರಣದಿಂದಾಗಿ ಶಿಕ್ಷಕರು, ಬೋಧಕರು ಸತತ ಕಲಿಕೆಯಲ್ಲಿರಬೇಕು. ನಮ್ಮ ವಿವಿಗಳು ಸುಧಾರಣೆಗೆ ಪ್ರಯತ್ನಿಸದಿದ್ದರೆ ನಮ್ಮ ವಿದ್ಯಾರ್ಥಿಗಳು ಶೈಕ್ಷಣಿಕ ಜಗತ್ತಿನಿಂದ ಹೊರಗುಳಿಯುತ್ತಾರೆ. ಅವರು ನೂತನ ಜಗತ್ತಿನ ಸವಾಲು ಎದುರಿಸಲು ಸಾಧ್ಯವಾಗದಂತಾಗುತ್ತದೆ ಎಂದು ತಿಳಿಸಿದರು.

ಇದೇ ವೇಳೆ ಯುವರಾಜ ಕಾಲೇಜಿನ ಪದವಿ ಹಾಗೂ ಸ್ನಾತಕೋತ್ತರ ಪದವಿ ವಿಭಾಗದಲ್ಲಿ ಚಿನ್ನದ ಪದಕ, ನಗದು ಬಹುಮಾನ ಪಡೆದ 40 ಮಂದಿ ಸೇರಿದಂತೆ 862 ಮಂದಿಗೆ ಪದವಿ ಪ್ರದಾನ ಮಾಡಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ವಹಿಸಿದ್ದರು. ಪ್ರಾಂಶುಪಾಲ ಪ್ರೊ.ಹೆಚ್.ಸಿ.ದೇವರಾಜೇಗೌಡ, ಪರೀಕ್ಷಾ ನಿಯಂತ್ರಣಾಧಿಕಾರಿ ಪ್ರೊ.ಕೆ.ಅಜಯ್‌ಕುಮಾರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಶಿಕ್ಷಕರ ಹುದ್ದೆ ಭರ್ತಿಗೆ ಆಗ್ರಹಿಸಿ ಪ್ರತಿಭಟನೆ



ಮೈಸೂರು, ಡಿ.28(ಜಿಎ)–ಆಲ್ ಇಂಡಿಯಾ ಡೆಮಾಕ್ರೆಟಿಕ್ ಯೂತ್ ಆರ್ಗನೈಸೇಷನ್ ಮೈಸೂರು ಜಿಲ್ಲಾ ಸಮಿತಿ ವತಿಯಿಂದ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಖಾಲಿ ಇರುವ ಚಿತ್ರಕಲಾ, ಸಂಗೀತ, ರಂಗ ಕಲಾ ಮತ್ತು ದೈಹಿಕ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಬೇಕೆಂದು ಆಗ್ರಹಿಸಿ ಪ್ರತಿಭಟನೆ ನಡೆಸಲಾಯಿತು.

ನಗರದ ಚಿಕ್ಕ ಗಡಿಯಾರದ ಎದುರು ಕಲಾವಿದರು ಮತ್ತು ದೈಹಿಕ ಶಿಕ್ಷಣ ತರಬೇತಿ ಪಡೆದವರ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿ ಅವರಿಗೆ ಮನವಿ ಸಲ್ಲಿಸಲಾಯಿತು.

ಈ ವೇಳೆ ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ಸುಮಾ ಮಾತನಾಡಿ, ಸರ್ಕಾರದ ಇಲಾಖೆಗಳಲ್ಲಿ ಲಕ್ಷಾಂತರ ಹುದ್ದೆಗಳು ಖಾಲಿ ಇದ್ದರೂ ಸರ್ಕಾರ ಭರ್ತಿ ಮಾಡಿಕೊಳ್ಳುತ್ತಿಲ್ಲ. ಅದರಲ್ಲೂ ಚಿತ್ರಕಲಾ, ಸಂಗೀತ, ರಂಗ ಕಲಾ ಮತ್ತು ದೈಹಿಕ ಶಿಕ್ಷಕರ ನೇಮಕಾತಿ ಅತ್ಯಂತ ನಿರ್ಲಕ್ಷ್ಯಕ್ಕೊಳಗಾಗಿದೆ ಎಂದರು.

ರಾಜ್ಯದಲ್ಲಿ ಒಟ್ಟು 5,240 ಸರ್ಕಾರಿ ಪ್ರೌಢಶಾಲೆಯಲ್ಲಿ ಒಟ್ಟು ಬೋಧಕರ ಸಂಖ್ಯೆ 1500ನ್ನೂ ದಾಟುವುದಿಲ್ಲ. ಅವರಲ್ಲಿ ಅನೇಕರು ನಿವೃತ್ತಿ ಅಂಚಿನಲ್ಲಿದ್ದಾರೆ. ಈ ಖಾಲಿ ಇರುವ ಹುದ್ದೆಗಳಿಗೆ ಕಾಯಂ ಆಧಾರದಲ್ಲಿ ನೇಮಕಾತಿ ಮಾಡುವ ಬದಲು ಅತಿಥಿ ಶಿಕ್ಷಕರನ್ನಾಗಿ ನೇಮಿಸಿಕೊಂಡು ಅತ್ಯಂತ ಕಡಿಮೆ ಸಂಬಳಕ್ಕೆ ಅವರನ್ನು ಶೋಷಣೆ ಮಾಡಲಾಗುತ್ತಿದೆ. ಯುವಜನರಿಗೆ ಉದ್ಯೋಗ ನೀಡಿ ಅವರ ಸಾಮರ್ಥ್ಯಗಳನ್ನು ಬಳಸಿಕೊಳ್ಳಲು ಸರ್ಕಾರದ ಆದ್ಯತೆ ಇಲ್ಲ. ಹೀಗಾಗಿ ಕಲಾವಿದರಿಗೆ ಮತ್ತು ದೈಹಿಕ ಶಿಕ್ಷಕ ಆಕಾಂಕ್ಷಿಗಳಿಗೆ ಉದ್ಯೋಗ ನೀಡಲು ಕೂಡಲೇ ನೇಮಕಾತಿ ಪ್ರಕ್ರಿಯೆ ಆರಂಭಿಸಬೇಕು ಎಂದು ಒತ್ತಾಯಿಸಿದರು.

ಎಐಯುಟಿಯುಸಿ ಕಾರ್ಮಿಕ ಸಂಘಟನೆಯ ಅಧ್ಯಕ್ಷ ಯಶೋಧರ್, ಸಂಘಟನೆ ಜಂಟಿ ಕಾರ್ಯದರ್ಶಿ ನೀತುಶ್ರೀ ಇನ್ನಿತರರು ಇದ್ದರು.

ನಾಳೆ ಮೈಸೂರಲ್ಲಿ ಶ್ರೀ ಆಂಜನೇಯ ಸ್ವಾಮಿಯ ಭವ್ಯ ಮೆರವಣಿಗೆ



ಮೈಸೂರು, ಡಿ.28(ಜಿಎ)–ಹನುಮ ಜಯಂತಿಯ ಅಂಗವಾಗಿ ಮೈಸೂರು ಹನುಮಂತೋತ್ಸವ ಸಮಿತಿ ವತಿಯಿಂದ ಹನುಮ ಹಬ್ಬ ಮತ್ತು 5ನೇ ವರ್ಷದ ಶ್ರೀ ಆಂಜನೇಯ ಸ್ವಾಮಿಯ ಭವ್ಯ ಮೆರವಣಿಗೆಯನ್ನು ಡಿ.30ರಂದು ಏರ್ಪಡಿಸಲಾಗಿದೆ ಎಂದು ಸಮಿತಿಯ ಸಂಚಾಲಯ ಸಂಜಯ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 11.20ಕ್ಕೆ ನಗರದ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗದಿಂದ ಆರಂಭವಾಗುವ ಮೆರವಣಿಗೆಯು ಅಶೋಕ ರಸ್ತೆ ಇರ್ವಿನ್ ರಸ್ತೆ, ಸಯ್ಯಾಜಿರಾವ್ ರಸ್ತೆ, ಡಿ.ದೇವರಾಜ ಅರಸು ರಸ್ತೆ, ನಾರಾಯಣ ಶಾಸ್ತ್ರಿ ರಸ್ತೆ, ನೂರಡಿ ರಸ್ತೆ ಮಾರ್ಗವಾಗಿ ಗನ್ ಹೌಸ್ ವೃತ್ತ ತಲುಪಲಿದೆ ಎಂದರು.

ಜ.22ರಂದು ಅಯೋಧ್ಯೆಯಲ್ಲಿ ರಾಮ ಮಂದಿರ ಲೋಕಾರ್ಪಣೆಯಾಗುತ್ತಿರುವ ಹಿನ್ನೆಲೆಯಲ್ಲಿ ಈ ಬಾರಿ ಮೆರವಣಿಯಲ್ಲಿ ವಿಶೇಷವಾಗಿ ರಾಮಮಂದಿರ ಪ್ರತಿಕೃತಿಯ ಟ್ಯಾಬ್ಲೊ ಸಂಚರಿಸಲಿದೆ. ಎಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಎಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಸಮಿತಿಯ ಜೀವನ್, ಕುಮಾರ್, ಅಭಿಲಾಷ್, ಮೋಹನ್ ಸಂತೋಷ್, ನಿತಿನ್ ಉಪಸ್ಥಿತರಿದ್ದರು.

ಜ.6ರಿಂದ ರಾಜ್ಯಮಟ್ಟದ ಮಹಿಳಾ ಸಮ್ಮೇಳನ



ಮೈಸೂರು, ಡಿ.28(ಜಿಎ)–ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆಯ 7ನೇ ರಾಜ್ಯ ಮಟ್ಟದ ಮಹಿಳಾ ಸಮ್ಮೇಳನವನ್ನು ದಾವಣಗೆರೆಯ ಬೀರಲಿಂಗೇಶ್ವರ ದೇವಸ್ಥಾನ ಆವರಣದಲ್ಲಿ ಜ.6, 7ರಂದು ಆಯೋಜಿಸ ಲಾಗಿದೆ.

ಸಂಘಟನೆಯ ರಾಜ್ಯಾಧ್ಯಕ್ಷೆ ಬಿ.ಆರ್.ಅಪರ್ಣ ನಗರದ ಪತ್ರಕರ್ತರ ಭವನದಲ್ಲಿ ಈ ವಿಷಯ ತಿಳಿಸಿ ಮಾತನಾಡಿದ ಅವರು, ಜ.6ರಂದು ಬೆಳಿಗ್ಗೆ 10ಕ್ಕೆ ಕೆನರಾ ಬ್ಯಾಂಕ್ ಸ್ಟಾಫ್ ಫೆಡರೇಷನ್ ಮಾಜಿ ಅಧ್ಯಕ್ಷ ಎಂ.ಆರ್.ಹಿರೇಮಠ ಸಮ್ಮೇಳನದ ಮೆರವಣಿಗೆಗೆ ಚಾಲನೆ ನೀಡಲಿದ್ದಾರೆ. ಸೂಕ್ತಿ ಮತ್ತು ಛಾಯಾಚಿತ್ರವನ್ನು ಡಿ.ಆರ್.ಎಂ.ಕಾಲೇಜು ನಿವೃತ್ತ ಪ್ರಾಚಾರ್ಯ ಕೆ.ಎಸ್.ಈಶ್ವರಪ್ಪ ಮತ್ತು ಬಹಿರಂಗ ಅಧಿವೇಶನವನ್ನು ಲೇಖಕಿ ರೂಪ ಹಾಸನ ಉದ್ಘಾಟಿಸಲಿದ್ದು ಸಂಘಟನೆ ರಾಜ್ಯ ಕಾರ್ಯದರ್ಶಿ ಎಸ್.ಶೋಭಾ ಅಧ್ಯಕ್ಷತೆ ವಹಿಸುವರು ಎಂದರು.

ಪ್ರಮುಖರಾದ ಛಬ್ಬಿ ಮೊಹಂತಿ, ಪಿ.ಎಂ.ಅನುರಾಧ, ಸುಧಾ ಕಾಮತ್, ಬಿ.ಆರ್.ಅಪರ್ಣಾ ಭಾಷಣ ಮಾಡುವರು. ಸಾಂಸ್ಕೃತಿಕ ಕಾರ್ಯಕ್ರಮ ಸ್ಮರಣ ಸಂಚಿಕೆ ಬಿಡುಗಡೆ ಪ್ರತಿನಿಧಿ ಅಧಿವೇಶನಗಳು ನಡೆಯಲಿವೆ ಎಂದು ಮಾಹಿತಿ ನೀಡಿದರು.

ಮಹಿಳೆಯರ ಮೇಲಿನ ದೌರ್ಜನ್ಯ ತಡೆಗಟ್ಟುವುದು. ಶಿಕ್ಷಣ, ಉದ್ಯೋಗ, ಆರೋಗ್ಯ ಖಾತ್ರಿ ಮತ್ತು ದುಡಿಯುವ ಮಹಿಳೆಯರಿಗೆ ಕನಿಷ್ಠ ವೇತನ, ಸೇವಾ ಭದ್ರತೆ ಖಚಿತಪಡಿಸುವಂತೆ ಸಮ್ಮೇಳನದಲ್ಲಿ ಆಗ್ರಹಿಸಲಾಗುವುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸಂಘಟನೆಯ ಜಿಲ್ಲಾ ಸಮಿತಿ ಕಾರ್ಯದರ್ಶಿ ಜಿ.ಎಸ್.ಸೀಮಾ, ಜಂಟಿ ಕಾರ್ಯದರ್ಶಿ ಆರ್.ಅಭಿಲಾಷಾ, ಸದಸ್ಯೆ ಜಿ.ಪುಷ್ಪಾ ಉಪಸ್ಥಿತರಿದ್ದರು.

ಬಿಜೆಪಿ ಹಗರಣದ ದಾಖಲೆಯನ್ನು ಯತ್ನಾಳ್ ಆಯೋಗದ ಮುಂದಿಡಲಿ: ಸಿಎಂ

ಬೆಂಗಳೂರು: ಶಾಸಕ ಯತ್ನಾಳ್, ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕೆಂಬ ಉದ್ದೇಶವಿದ್ದರೆ, ಬಿಜೆಪಿ ಅವಧಿಯಲ್ಲಿ ನಡೆದಿರುವ ಕೋವಿಡ್ ಹಗರಣದ ದಾಖಲೆಗಳನ್ನು ವಿಚಾರಣಾ ಆಯೋಗದ ಮುಂದಿಡಲಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಅವರು ಬಿಜೆಪಿ ಅವಧಿಯಲ್ಲಿ ನಡೆದಿರುವ ಹಗರಣದ ಬಗ್ಗೆ ಮಾಡಿರುವ ಪ್ರಸ್ತಾಪದ ಬಗ್ಗೆ ಸುದ್ದಿಗಾರರ ಪ್ರಶ್ನೆಗೆ ಸಿದ್ದರಾಮಯ್ಯ ಪ್ರತಿಕ್ರಿಯಿಸಿದರು.

ನಾಳೆ ಸಾಮೂಹಿಕ ಭಗವದ್ಗೀತೆ ಪಾರಾಯಣ



ಮೈಸೂರು, ಡಿ.28(ಜಿಎ)–ಶ್ರೀಗೀತಾ ಜಯಂತಿ ಆಚರಣೆ ಅಂಗವಾಗಿ ಮೈಸೂರು ಧಾರ್ಮಿಕ ಪ್ರತಿಷ್ಠಾನದ ವತಿಯಿಂದ ಸಾಮೂಹಿಕ ಭಗವದ್ಗೀತೆ ಪಾರಾಯಣ ಕಾರ್ಯಕ್ರಮವನ್ನು ಡಿ.30 ರಂದು ಮೈಸೂರು ಮಹರ್ಷಿ ಪಬ್ಲಿಕ್ ಶಾಲೆಯಲ್ಲಿ ಏರ್ಪಡಿಸಲಾಗಿದೆ ಎಂದು ಪ್ರತಿಷ್ಠಾನದ ಚರಣ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 9 ಗಂಟೆಗೆ ಗೋಪೂಜೆಯೊಂದಿಗೆ ಕಾರ್ಯಕ್ರಮ ಆರಂಭವಾಗಲಿದ್ದು, ಸಭಾ ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕಾರರಾಗಿ ವಾಗ್ಮಿ ಚಕ್ರವರ್ತಿ ಸೂಲಿಬೆಲೆ ಭಾಗವಹಿಸಲಿದ್ದಾರೆ. ಮೈಸೂರಿನ ಇಸ್ಕಾನ್‌ನ ಉಪಾಧ್ಯಕ್ಷ ಶ್ರೀ ಕಾರುಣ್ಯ ಸಾಗರ್ ದಾಸರು ಆಶೀರ್ವಚನ ನೀಡಲಿದ್ದಾರೆ ಎಂದರು.

ಅಂದು ಸುಮಾರು 30ಕ್ಕೂ ಅಧಿಕ ಶಾಲೆಗಳಿಂದ 3,500ಕ್ಕೂ ಅಧಿಕ ಮಕ್ಕಳು ಹಾಗೂ ಮಾತಾ–ಮಹನೀಯರು ಸಾಮೂಹಿಕವಾಗಿ ಭಗವದ್ಗೀತೆಯ 1ರಿಂದ 4 ಮತ್ತು 12ನೇ ಅಧ್ಯಾಯವನ್ನು ಪಠಿಸಲಿದ್ದಾರೆ. ವಿಶೇಷವಾಗಿ ರಾಮಾಯಣ, ಮಹಾಭಾರತ ಪ್ರದರ್ಶಿನಿ, ಅಯೋಧ್ಯ ಮಾದರಿಯ ಮಂದಿರವನ್ನು ವೀಕ್ಷಣೆಗೆ ಇಡಲಾಗುವುದು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಶರಣ್, ಕೋಕಿಲಾ, ಗಣೇಶ್, ರೇಖಾ ಉಪಸ್ಥಿತರಿದ್ದರು.

ಜನಪರ ಶಿಕ್ಷಣ ನೀತಿ ಕುರಿತು ಎಐಡಿಎಸ್‌ಓ ನಡೆಸಿದ್ದ ಸಮೀಕ್ಷಾ ವರದಿ ಬಿಡುಗಡೆ




ಮೈಸೂರು, ಡಿ.28(ಜಿಎ)–ರಾಜ್ಯದಲ್ಲಿ ಜನಪರ ಶಿಕ್ಷಣ ನೀತಿಯನ್ನು ರೂಪಿಸಲು ಆಗ್ರಹಿಸಿ ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ ಆರ್ಗನೈಸೇಷನ್ (ಎಐಡಿಎಸ್‌ಓ) ವತಿಯಿಂದ ನಡೆಸಿದ ಸಮೀಕ್ಷೆಯ ವರದಿಯನ್ನು ನಗರದ ಪತ್ರಕರ್ತರ ಭವನದಲ್ಲಿ ಎಐಡಿಎಸ್‌ಓ ಪದಾಧಿಕಾರಿಗಳು ಗುರುವಾರ ಬಿಡುಗಡೆಗೊಳಿಸಿದರು.

ನಂತರ ಎಐಡಿಎಸ್‌ಓ ಜಿಲ್ಲಾಧ್ಯಕ್ಷ ಸುಭಾಷ್ ಮಾತನಾಡಿ, ಕರ್ನಾಟಕದ 9 ಸರ್ಕಾರಿ ವಿಶ್ವವಿದ್ಯಾಲಯಗಳು, 82 ಸರ್ಕಾರಿ ಪದವಿ ಕಾಲೇಜುಗಳು, 12 ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು ಮತ್ತು 15 ಸರ್ಕಾರಿ ವಿದ್ಯಾರ್ಥಿ ವಸತಿ ನಿಲಯಗಳು ಸೇರಿದಂತೆ 23,120 ವಿದ್ಯಾರ್ಥಿಗಳು ಸಮೀಕ್ಷೆಯಲ್ಲಿ ಪಾಲ್ಗೊಂಡಿದ್ದರು. ಶಿಕ್ಷಣ ನೀತಿಯ ಮೇಲೆ ರಾಜ್ಯದಲ್ಲಿ ನಡೆದ ಅತಿ ದೊಡ್ಡ ಸಮೀಕ್ಷೆ ಇದಾಗಿದ್ದು, ಶಿಕ್ಷಣದ ಸಂಪೂರ್ಣ ಆರ್ಥಿಕ ಜವಾಬ್ದಾರಿಯನ್ನು ಸರ್ಕಾರವೇ ವಹಿಸಬೇಕೆಂಬುದು ಕರ್ನಾಟಕದ ಜನತೆಯ ಆಗ್ರಹವಾಗಿದೆ ಎಂದರು.

ನಾಲ್ಕು ವರ್ಷದ ಪದವಿಯನ್ನು ಕೈಬಿಡಬೇಕೆಂದು ಅವರು ಅಭಿಪ್ರಾಯಪಟ್ಟಿದ್ದಾರೆ. ನವೋದಯ ಚಳುವಳಿಯ ಚಿಂತಕರು ಹಾಗೂ ಸ್ವಾತಂತ್ರ್ಯ ಸಂಗ್ರಾಮದ ಕ್ರಾಂತಿಕಾರಿ ಹೋರಾಟಗಾರರ ಕುರಿತು ಶಿಕ್ಷಣದಲ್ಲಿ ಹೆಚ್ಚು ವಿಷಯಗಳನ್ನು ಕಲಿಸಬೇಕೆಂಬುದು ಅವರ ಆಶಯವಾಗಿದೆ ಮತ್ತು ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಸ್ಥಾಪಿಸುವುದು ವಿದ್ಯಾರ್ಥಿಗಳ ಒಕ್ಕೊರಲಿನ ಕೂಗಾಗಿದ್ದು, ಸಾರ್ವಜನಿಕ ಶಿಕ್ಷಣ ಉಳಿಸಲು ಪ್ರಬಲ ಚಳುವಳಿಯನ್ನು ಬೆಳೆಸೋಣ ಮತ್ತು ನೂತನ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ)ಯನ್ನು ಪ್ರತಿರೋಧಿಸಲು ಮುನ್ನಡೆಯೋಣ ಎಂದು ತಿಳಿಸಿದರು.

ಈ ಮಾದರಿ ಸಮೀಕ್ಷೆಯ ಪೈಕಿ ಸರ್ಕಾರಿ ಶಾಲಾ ಕಾಲೇಜು ನಿರ್ವಹಣೆಯ ಸಂಪೂರ್ಣ ಆರ್ಥಿಕ ಜವಾಬ್ದಾರಿಯನ್ನು ಸರ್ಕಾರ ತೆಗೆದುಕೊಳ್ಳಬೇಕೆಂದು ಶೇಕಡ 98.52 ರಷ್ಟು, ಸರ್ಕಾರಿ ಉನ್ನತ ಶಿಕ್ಷಣ ಸಂಸ್ಥೆಗಳನ್ನು ನಿರ್ವಹಿಸಲು ವಿದ್ಯಾರ್ಥಿಗಳಿಂದ ದೇಣಿಗೆ ಪಡೆಯಬಾರದೆಂದು ಶೇಕಡ 95.71 ರಷ್ಟು, ನಾಲ್ಕು ವರ್ಷದ ಪದವಿ ಅಧ್ಯಯನ ಬೇಡವೆಂದು ಶೇಕಡ 83 ರಷ್ಟು, ಕಡಿಮೆ ದಾಖಲಾತಿ ಹೆಸರಿನಲ್ಲಿ ಸರ್ಕಾರಿ ಶಾಲೆಗಳನ್ನು ವಿಲೀನಗೊಳಿಸುವುದು/ ಮುಚ್ಚುವುದು ತಪ್ಪು ಎಂದು ಶೇಕಡ 99 ರಷ್ಟು, ಸರ್ಕಾರಿ ಶಿಕ್ಷಣ ಸಂಸ್ಥೆಗಳನ್ನು ನಡೆಸಲು ಕಾರ್ಪೊರೇಟ್ ಕಂಪನಿಗಳ ಬಳಿ ಧನಸಹಾಯ ಪಡೆಯುವುದು ತಪ್ಪು ಎಂದು ಶೇಕಡ 80 ರಷ್ಟು, ನಮ್ಮ ದೇಶದ ಶೈಕ್ಷಣಿಕ ಕ್ಷೇತ್ರದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆ ಹಾಗೂ ವಿದೇಶಿ ವಿವಿಗಳು ಬೇಡವೆಂದು ಶೇಕಡ 86 ರಷ್ಟು, ವಿದ್ಯಾರ್ಥಿಗಳಿಗೆ ಕೌಶಲ್ಯ/ ಉದ್ಯೋಗ ತರಬೇತಿ ನೀಡುವ ನೆಪದಲ್ಲಿ ಪಠ್ಯಕ್ರಮದಲ್ಲಿ ಮೌಲ್ಯಗಳನ್ನು ಕಡೆಗಣಿಸಬಾರದು ಎಂದು ಶೇಕಡ 93 ರಷ್ಟು, ನಮ್ಮ ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅಭೂತಪೂರ್ವ ಪಾತ್ರವಹಿಸಿದ ಮಹಾನ್ ಕ್ರಾಂತಿಕಾರಿಗಳು ಹಾಗೂ ಮಹಾನ್ ನವೋದಯ ಚಿಂತಕರ ಕುರಿತಾದ ಪಾಠಗಳು ಪಠ್ಯಕ್ರಮದ ಭಾಗವಾಗಬೇಕು ಎಂದು ಶೇಕಡ 97 ರಷ್ಟು, ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ಸ್ಥಾಪನೆಯಾಗಬೇಕು ಎಂದು ಶೇಕಡ 97 ರಷ್ಟು ರಾಜ್ಯದ ವಿದ್ಯಾರ್ಥಿಗಳು ಬಯಸಿದ್ದಾರೆ ಎಂದು ವರದಿಯ ಸಾರಾಂಶವನ್ನು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಎಐಡಿಎಸ್‌ಓ ಜಿಲ್ಲಾ ಕಾರ್ಯದರ್ಶಿ ಚಂದ್ರಕಲಾ, ಜಿಲ್ಲಾ ಉಪಾಧ್ಯಕ್ಷರಾದ ಸ್ವಾತಿ ಹಾಗೂ ನಿತಿನ್, ಕಾರ್ಯದರ್ಶಿ ಮಂಡಳಿ ಸದಸ್ಯರಾದ ಚಂದ್ರಿಕಾ, ಹೇಮಲತಾ, ಅಂಜಲಿ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯೆ ಮೇಘನಾ ಉಪಸ್ಥಿತರಿದ್ದರು.



ಸಾಮಾಜಿಕ ಕಳಕಳಿಯ 'ವಿಕಾಸ ಪರ್ವ'




ಕನ್ನಡ ಚಿತ್ರರಂಗದಲ್ಲೀಗ ಕಂಟೆಂಟ್ ಓರಿಯೆಂಟಲ್ ಚಿತ್ರಗಳದ್ದೇ ಕಾರುಬಾರು. ಆ ಸಾಲಿನಲ್ಲಿ ಉತ್ತಮ ಕಂಟೆಂಟ್‌ನೊಂದಿಗೆ ಬರುತ್ತಿರುವ ಚಿತ್ರ ವಿಕಾಸಪರ್ವ, ಇತ್ತೀಚೆಗೆ ಈ ಚಿತ್ರದ ಶೀರ್ಷಿಕೆ ಅನಾವರಣ ಕಾರ್ಯಕ್ರಮ ನಡೆಯಿತು. ಚಲನಚಿತ್ರ ವಾಣಿಜ್ಯ ಮಂಡಳಿ ನಿಕಟಪೂರ್ವ ಅಧ್ಯಕ್ಷ ಭಾ.ಮಾ.ಹರೀಶ್ ಹಾಗೂ ನಿರ್ದೇಶಕ ಕೆ.ಎಂ.ಚೈತನ್ಯ ಶೀರ್ಷಿಕೆಯನ್ನು ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭ ಕೋರಿದರು.


ವಿಕಾಸಪರ್ವ ಸಾಮಾಜಿಕ ಕಳಕಳಿಯ ಚಿತ್ರ, ಉತ್ತಮ ಸಂದೇಶವೂ ಇದೆ. ಕಿರುತೆರೆಯಲ್ಲಿ ತಮ್ಮದೇ ಆದ ಛಾಪು ಮೂಡಿಸಿರುವ ರೋಹಿತ್ ನಾಗೇಶ್ ಈ ಚಿತ್ರದಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತಿದ್ದಾರೆ. ಸ್ವಾತಿ, ನಿಶಿತಾ ಗೌಡ, ಅಶ್ವಿನ್‌ಹಾಸನ್, ಬಿಲ್ವ, ಬಲ ರಾಜವಾಡಿ ಮುಂತಾದವರು ತಾರಾಬಳಗದಲ್ಲಿದ್ದಾರೆ. ಮೈಂಡ್ ಥಾಟ್ಸ್ ಮೀಡಿಯಾ ಲಾಂಛನದಲ್ಲಿ ಸಮೀರ್ ಅವರು ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಅನ್ಬು ಅರಸ್ ನಿರ್ದೇಶಿಸುತ್ತಿರುವ ಈ ಚಿತ್ರಕ್ಕೆ ನಾನೇ ಕಥೆ, ಚಿತ್ರಕಥೆ ಹಾಗೂ ಸಂಭಾಷಣೆ ಬರೆದಿದ್ದೇನೆ ಎಂದು ರಾಜ್ಯ ಪ್ರಶಸ್ತಿ ವಿಜೇತ ವಿಶ್ವತ್‌ನಾಯಕ್ ತಿಳಿಸಿದರು. ಈಗಾಗಲೇ ಚಿತ್ರದ ಮೊದಲ ಹಂತದ ಚಿತ್ರೀಕರಣ ಮುಕ್ತಾಯವಾಗಿದೆ. ದ್ವಿತೀಯ ಹಂತದ ಚಿತ್ರೀಕರಣವನ್ನು ಸದ್ಯದಲ್ಲೇ ಆರಂಭಿಸಲಿದ್ದೇವೆ ಎಂದು ನಿರ್ದೇಶಕ ಅನ್ಬುಅರಸ್ ಹೇಳಿದರು.

ಚಿತ್ರದ ನಾಯಕ ನಟ ರೋಹಿತ್ ನಾಗೇಶ್ ಮಾತನಾಡುತ್ತ, ವಿಶ್ವತ್ ನಾಯಕ್ ಅವರು ಹೇಳಿದ ಕಥೆ ನನಗೆ ತುಂಬಾ ಇಷ್ಟವಾಯಿತು, ಜೊತೆಗೆ ಉತ್ತಮ ಕಂಟೆಂಟ್ ಕೂಡ ಚಿತ್ರದಲ್ಲಿದ್ದು, 'ವಿಕಾಸ ಪರ್ವ' ಚಿತ್ರವು ಖಂಡಿತ ಕನ್ನಡ ಪ್ರೇಕ್ಷಕರ ಮನ ಗೆಲ್ಲಲಿದೆ ಎಂದು ಹೇಳಿದರು. ಛಾಯಾಗ್ರಾಹಕ ನವೀನ್ ಸುವರ್ಣ ಮಾತನಾಡಿ, ಕ್ಯಾಮರಾ ವರ್ಕ್ ಬಗ್ಗೆ ಮಾಹಿತಿ ನೀಡಿದರು.

ನಟ ಅಶ್ವಿನ್ ಹಾಸನ್ ಹಾಗೂ ಬೇಬಿ ಬಿಲ್ವ ಅವರು ತಮ್ಮ ಪಾತ್ರದ ಕುರಿತಂತೆ ಮಾತನಾಡಿದರು.



ಇಂದಿನಿಂದ ಅಬ್ಬರ ಶುರು...



ರಾಕ್‌ಲೈನ್ ವೆಂಕಟೇಶ್

ರಾಕ್‌ಲೈನ್ ಪ್ರೊಡಕ್ಷನ್ಸ್ ನಿರ್ಮಾಣದ, ಚಾಲೆಂಜಿಂಗ್ ಸ್ಟಾರ್ ದರ್ಶನ್, ಆರಾಧನಾ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಂಡಿರುವ ಕಾಟೇರ ಇಂದಿನಿಂದ ರಾಜ್ಯಾದ್ಯಂತ ಬಿಡುಗಡೆಯಾಗುತ್ತಿದೆ. ರಾಬರ್ಟ್ ಖ್ಯಾತಿಯ ತರುಣ್ ಸುಧೀರ್ ಕಥೆ-ಚಿತ್ರಕಥೆ ಬರೆದು ನಿರ್ದೇಶಿಸಿರುವ, ಪಕ್ಕಾ ಮಂಡ್ಯ, ಹಳ್ಳಿಸೊಗಡಿನ ಚಿತ್ರ ಇದಾಗಿದೆ. ಚಿತ್ರದ ಟೈಟಲ್ ಕುರಿತಂತೆ ಸಂಭಾಷಣೆಗಾರ ಮಾಸ್ತಿ ವಿವರಣೆ ನೀಡುತ್ತಾ, ಕಾಟೇರಮ್ಮ ಅಂದರೆ ದುಷ್ಟರ ರಕ್ತ ಕುಡಿಯುವ ದೇವತೆಯೊಬ್ಬಳ ಹೆಸರು. ಹಿಂದೆಲ್ಲ ಕೆಲವರು ತಮ್ಮ ಮಕ್ಕಳಿಗೆ ಹೆಣ್ಣುದೇವರ ಹೆಸರನ್ನಿಟ್ಟಿ ರುತ್ತಾರೆ. ನನಗೆ ಮಗುವಾದರೆ, ನಿನ್ನ ಹೆಸರನ್ನಿಡುತ್ತೇನೆ ಅಂತ ಅವರು ದೇವಿಗೆ ಹರಕೆ ಕಟ್ಟಿಕೊಂಡಿ ರುತ್ತಾರೆ. ಯಾವ ದೇವತೆಗೆ ಅವರು ಮೊರೆ ಹೋಗಿರುತ್ತಾರೋ, ಆ ದೇವತೆಯ ಹೆಸರಿಡುವುದು ಆಗ ರೂಢಿಯಲ್ಲಿತ್ತು. ಇದು ಹಲವಾರು ದಶಕಗಳ ಹಿಂದೆ ನಡೆಯೋ ಕಥೆಯಾಗಿರುವುದರಿಂದ ಆ ಹೆಸರು ಸೆಲೆಕ್ಟ್ ಮಾಡಿದೆವು ಎಂದು ಸ್ಪಷ್ಟನೆ ನೀಡಿದ್ದಾರೆ. 70ರ ದಶಕದಲ್ಲಿ ನಡೆದ ರೈತರ ಹೋರಾಟದ ಘಟನೆಗಳನ್ನು ಇಟ್ಟುಕೊಂಡು 'ಕಾಟೇರ' ಸಿನಿಮಾ ಕಟ್ಟಿಕೊಡಲಾಗಿದೆ. ಚಿತ್ರದಲ್ಲಿ ದರ್ಶನ್, ಕುಲುಮೆಯಲ್ಲಿ ಕೆಲಸ ಮಾಡುವ ವ್ಯಕ್ತಿಯಾಗಿ ಕಾಣಿಸಿಕೊಂಡಿದ್ದಾರೆ. ಕಾಟೇರ ವೀಕ್ಷಿಸಿದ ಸೆನ್ಸಾರ್ ಮಂಡಳಿ ಚಿತ್ರತಂಡಕ್ಕೆ ಒಂದಷ್ಟು ಬದಲಾವಣೆಗಳನ್ನು ಹೇಳಿ, ಯು/ಎ ಸರ್ಟಿಫಿಕೇಟ್ ನೀಡಿದೆ. ಸನ್ನಿವೇಶವೊಂದರಲ್ಲಿ ವ್ಯಕ್ತಿಯ ತಲೆ ಕಡಿಯುವ ದೃಶ್ಯದ ಬಗ್ಗೆ ಸೆನ್ಸಾರ್ ಮಂಡಳಿ ಆಕ್ಷೇಪ ವ್ಯಕ್ತಪಡಿಸಿತ್ತು. ಅಲ್ಲದೆ ವ್ಯಕ್ತಿಯೊಬ್ಬನ ಕೈಕತ್ತರಿಸುವ ದೃಶ್ಯವನ್ನೂ ತೆಗೆದುಹಾಕಲಾಗಿದೆ. ಮತ್ತೊಂದರಲ್ಲಿ ಧಾರಾಕಾರವಾಗಿ ರಕ್ತಹರಿಯುವ ಸನ್ನಿವೇಶಕ್ಕೆ ಕತ್ತರಿ ಹಾಕಲಾಗಿದೆ. ಕಾಟೇರ ಈ ವರ್ಷ ಬಿಡುಗಡೆಯಾಗುತ್ತಿರುವ ಮತ್ತೊಂದು ದೀರ್ಘಾವಧಿ ಸಿನಿಮಾ. ಚಿತ್ರದ ಅವಧಿ 3ಗಂಟೆ 3ನಿಮಿಷ. ಇತ್ತೀಚಿನ ದಿನಗಳಲ್ಲಿ ದೀರ್ಘಾವಧಿಯ ಚಿತ್ರಗಳು ಹೆಚ್ಚು ಬರುತ್ತಿವೆ. ಬಾಲಿವುಡ್‌ನ ಅನಿಮಲ್ 3ಗಂಟೆ 12ನಿಮಿಷ ಇತ್ತು, ಇನ್ನು ಸಲಾರ್ ಕೂಡ 2ಗಂಟೆ 55ನಿಮಿಷ ಇತ್ತು. ಪ್ರೇಕ್ಷಕರನ್ನು ಹಿಡಿದಿಟ್ಟುಕೊಳ್ಳುವ ಶಕ್ತಿಯಿದ್ದರೆ ಯಾವುದೇ ಚಿತ್ರಕ್ಕೂ ದೀರ್ಘಾವಧಿ ದೊಡ್ಡ ಸಮಸ್ಯೆಯಾಗುವುದಿಲ್ಲ.



'ಫ್ರೈಡೇ' ಥಿಯೇಟರ್‌ನಲ್ಲಿ ಥ್ರಿಲ್ಲರ್!


ಶುಕ್ರವಾರ ಬಿಡುಗಡೆಯಾದ ಹೊಸ ಸಿನಿಮಾವೊಂದನ್ನು ನೋಡಲು ಥೇಟರಿಗೆ ಹೋದ ದಂಪತಿಗೆ ಅಲ್ಲಿ ಆದಂಥ ಥ್ರಿಲ್ಲಿಂಗ್ ಅನುಭವವನ್ನು ಹೇಳುವ ಚಿತ್ರ ಫ್ರೈಡೇ. ಈ ಹಿಂದೆ 'ಹೊಸ ದಿನಚರಿ' ಎಂಬ ಚಿತ್ರವನ್ನು ನಿರ್ದೇಶಿಸಿದ್ದ ಕೀರ್ತಿಶೇಖರ್-ವೈಶಾಖ್ ಪುಷ್ಪಲತಾ ಎಂಬ ಜೋಡಿ ನಿರ್ದೇಶಕರ ಮತ್ತೊಂದು ಚಿತ್ರ ಇದಾಗಿದ್ದು, ಇತ್ತೀಚೆಗೆ ಈ ಚಿತ್ರದ ಮುಹೂರ್ತ ನಡೆಯಿತು. ಬಿಗ್‌ಬಾಸ್ ಖ್ಯಾತಿಯ ಶೃತಿಪ್ರಕಾಶ್, ಮಧುಸೂದನ್ ಗೋವಿಂದ್, ಗೋಪಾಲಕೃಷ್ಣ ದೇಶಪಾಂಡೆ ಪ್ರಮುಖ ಪಾತ್ರಗಳಲ್ಲಿ ನಟಿಸುತ್ತಿರುವ ಈ ಚಿತ್ರವನ್ನು ಮೃತ್ಯುಂಜಯ ಶುಕ್ಲ ಹಾಗೂ ಅಲೋಕ್ ಚೌರಾಸಿಯಾ ಅವರುಗಳು ನಿರ್ಮಿಸುತ್ತಿದ್ದಾರೆ.

ಮುಹೂರ್ತದ ನಂತರ ಚಿತ್ರದ ಕ್ರಿಯೇಟಿವ್ ನಿರ್ಮಾಪಕರಾದ ಗಂಗಾಧರ ಸಾಲಿಮಠ ಮಾತನಾಡುತ್ತ, ಡೀಸ್ ಫಿಲಂಸ್ ಮತ್ತು ಡೀಸ್ ಶೂಲಿನ್ ಮೀಡಿಯಾ ಸಹಯೋಗದೊಂದಿಗೆ ನಿರ್ಮಿಸುತ್ತಿರುವ ಎರಡನೇ ಚಿತ್ರವಿದು. ಈ ಹಿಂದೆ ಆಯನ ಹಾಗೂ ಗ್ರೇಗೇಮ್ಸ್ ಚಿತ್ರಗಳನ್ನು ನಾನೇ ನಿರ್ದೇಶಿಸಿದ್ದೆ, ಈ ಸಲ ನಿರ್ದೇಶಕರಾದ ಕೀರ್ತಿಶೇಖರ್ ಹಾಗೂ ವೈಶಾಖ್ ಪುಷ್ಪಲತಾ ಅವರಿಗೆ ಜವಾಬ್ದಾರಿ ಒಪ್ಪಿಸಿ, ನಾನು ನಿರ್ಮಾಣದ ಉಸ್ತುವಾರಿ ನೋಡಿಕೊಳ್ಳುತ್ತಿದ್ದೇನೆ ಎಂದು ಹೇಳಿದರು.



ನಿರ್ದೇಶಕರಲ್ಲೊಬ್ಬರಾದ ವೈಶಾಖ್ ಪುಷ್ಪಲತಾ ಮಾತನಾಡುತ್ತ, ಚಿತ್ರರಂಗದವರಿಗೆ ಫ್ರೈಡೇ ಎಂದರೆ ಅದೃಷ್ಟದ ದಿನ. ಪ್ರತಿ ಶುಕ್ರವಾರ ಹೊಸ ಚಿತ್ರಗಳು ಬಿಡುಗಡೆಯಾಗುತ್ತವೆ. ನಮ್ಮ ಚಿತ್ರದ ಹೆಸರಿಗೂ ಫ್ರೈಡೇಗೂ ನಂಟಿದೆ. ಶುಕ್ರವಾರ ಬಿಡುಗಡೆಯಾದ ಹೊಸ ಚಿತ್ರ ನೋಡಲು ಹೋಗಿದ್ದ ದಂಪತಿಯ ಜೀವನದಲ್ಲಿ ಅಂದು ನಡೆಯಬಾರದ ಘಟನೆಯೊಂದು ನಡೆದು ಹೋಗುತ್ತದೆ. ಅದೇ ಚಿತ್ರದ ಕಥಾವಸ್ತು. ಕಥೆ, ಚಿತ್ರಕಥೆಯನ್ನು ನಾನು ಹಾಗೂ ಕೀರ್ತಿಶೇಖರ್ ಸೇರಿಯೇ ಸಿದ್ಧಪಡಿಸಿದ್ದೇವೆ. ಈ ಚಿತ್ರದಲ್ಲಿ ಹೆಚ್ಚಿನ ಭಾಗದ ಕಥೆ ಚಿತ್ರ ಮಂದಿರದಲ್ಲೇ ನಡೆಯಲಿದ್ದು, ಜನವರಿ ಮೊದಲ ವಾರದಿಂದ ಶೂಟಿಂಗ್ ಆರಂಭಿಸಿ ಬೆಂಗಳೂರು ಸುತ್ತಮುತ್ತ ಚಿತ್ರೀಕರಣ ನಡೆಸುತ್ತಿದ್ದೇವೆ ಎಂದರು. ಮತ್ತೊಬ್ಬ ನಿರ್ದೇಶಕ ಕೀರ್ತಿಶೇಖರ್ ಮಾತನಾಡಿ, ಸಸ್ಪೆನ್ಸ್, ಥ್ರಿಲ್ಲರ್ ಕಥಾಹಂದರ ಹೊಂದಿರುವ ಈ ಚಿತ್ರದಲ್ಲಿ ಒಟ್ಟು ಮೂರು ಹಾಡುಗಳಿದ್ದು, ಅಶ್ವಿನ್ ಹೇಮಂತ್ ಅವರ ಸಂಗೀತ ನಿರ್ದೇಶನವಿದೆ, ಗೌಳಿ ಖ್ಯಾತಿಯ ಸಂದೀಪ್ ವಲ್ಲೂರಿ ಅವರ ಛಾಯಾಗ್ರಹಣ ಚಿತ್ರಕ್ಕಿದ್ದು, ಕನ್ನಡ ಹಾಗೂ ಹಿಂದಿ ಸೇರಿ 2 ಭಾಷೆಗಳಲ್ಲಿ ಫ್ರೈಡೇ ಚಿತ್ರ ನಿರ್ಮಾಣವಾಗಲಿದೆ ಎಂದರು. ನಂತರ ಚಿತ್ರದ ಕಲಾವಿದರು ತಮ್ಮ ಪಾತ್ರಗಳ ಕುರಿತಂತೆ ವಿವರಿಸಿದರು.

ಸಿನಿಪದಬಂಧ-506



ಹೆಸರು ______

ವಿಳಾಸ ______

______

ದೂರವಾಣಿ ಸಂಖ್ಯೆ ______



ವಿಜೇತರು: ಅಶೋಕ್.ಹೆಚ್. #65, 9ನೇ ಕ್ರಾಸ್, ಐ ಬ್ಲಾಕ್, ರಾಮಕೃಷ್ಣ ನಗರ, ಮೈಸೂರು-570022

ಎಡದಿಂದ ಬಲಕ್ಕೆ

1.ಡಿಸೆಂಬರ್ 31 ಚಿತ್ರದ 'ಸಿಂಹ' ನೆನಪು ಮಾತ್ರ ! 5
3.ರಾಮನೊಂದಿಗೆ ಕೊಡಲಿ ಹಿಡಿದು ಬಂದವನು 5
5. ನಟ ಭಯಂಕರ ಈ ಖಳನಟ 4
7."ಪೂಂ ಪೂಂ ಪೂಂ ಹಾರನ್ ಮೆಲ್ಲಗೆ ಒತ್ತು ಮೇಡಮೋ... ", ಗೀತೆಯ ಚಿತ್ರ 4
9. ನವರಸ ನಾಯಕ ಹೇಳಿದ "ದಿಟ" 2
10. ಅನಂತ್‌ನಾಗ್‌ನ ಸೊಬಗಿನ ರಾಜಗೃಹ 7
13. ಡಾ.ರಾಜ್‌ಕುಮಾರ್-ಹರಿಣಿ ಅಭಿನಯಕ್ಕೆ ಎನ್.ಲಕ್ಷ್ಮಿನಾರಾಯಣ್ ನಿರ್ದೇಶನವಿದೆ 2
14. ಪಾಂಡವರ - ಕೌರವರ ಕಾದಾಟದ ಸ್ಥಳ 4
15. ಹರಿಕಥೆ ಅಲ್ಲ ಗಿರಿಕಥೆ ಚಿತ್ರದ ನಾಯಕಿ ತಪಸ್ಸು ಮಾಡುತ್ತಿದ್ದಾಳೆ 4
18.ಪುನೀತ್ ರಾಜ್‌ಕುಮಾರ್ ಯುದ್ಧ ಶೂರ 5
19.ಒಂದು ಕ್ರಿಯೆಯ ಪರಿಣಾಮವು ಅದರ ಮೂಲ ಹಿಮ್ಮೆಟ್ಟಿಸಿದೆ 5

ಮೇಲಿನಿಂದ ಕೆಳಕ್ಕೆ

1.ಚಕ್ರವರ್ತಿ ನಿರ್ದೇಶನದಲ್ಲಿ ಬಂಡಾಯ ಎದ್ದ ಹೆಂಗಸು 6
2.ಆಂಟೋನಿಯ ಓಟ ಇಲ್ಲಿ ತಲೆ ಕೆಳಗು 2
3. ಟಗರು _ _ 2
4. ಶರಣ್ ಅರಸನಾಗಿ ವೈಭೋಗದಿ ಮೆರೆದಿದ್ದಾನೆ 5
6.ಅನಂತ್‌ನಾಗ್ - ಭವ್ಯ ಕೈಗೆ ತಾರೆ ದಕ್ಕಲಿಲ್ಲ 7
7. ಚೋಮನ ದುಡಿ ಚಿತ್ರದ ಕರ್ತೃ 7
8. ಹಿರಿಯ ಸಹೋದರ, ಆತನ ಹೆಂಡತಿಗೆ ವಿಷ್ಣು- ಭಾರತಿ ಅಭಿನಯವಿದೆ 5
11.ವಿನಯ್ ಭಾರದ್ವಜ್ ಜರ್ನಿಯ ವೇಳೆ ಸಿಕ್ಕ ತಾಣ 6
12. ಅಂಬಿ ಸಾಂಸ್ಕೃತಿಕ ನಗರಿಯ ಬುದ್ಧಿವಂತ 5
16. ಬಜಾರಿನಲ್ಲಿ ಕಾಣಿಸಿಕೊಂಡ ಪಾಂಡವ 2
17. ಶಶಿಕುಮಾರ್ - ಸುಧಾರಾಣಿಯ ನಕ್ಷತ್ರ 2



ಉಮ್ಮತ್ತೂರು ಇಂದುಶೇಖರ್

ಮೊ.9880820462

ಸಿನಿ ಪದಬಂಧ 505ರ ಉತ್ತರ

ಯು	ಗ	ಯು	ಗ	ದ				ರಾ	ಗಿ	ಣಿ
ಗ			ಲಾ		ಅ	ರ	ಗಿ	ಣಿ		
ಯು		ಬೇ	ಟೆ		ಸ್ತ್ರ			ಮ		ನ
ಗ			ಸಂ				ಮ	ಹಾ	ತ್ಯಾ	ಗ
ಗ	ಜ		ಸಾ		ನೇ			ರಾ		ಬೇ
ಳೇ		ಮ	ರ	ಳು	ಸ	ರ	ಪ	ಣಿ		ಕ
ಸಾ		ಣ್ಣೆ			ರ		ನ್ನ		ಅ	ಮ್ಮ
ಗ	ರಾ	ನ	ಮೌ				ಗ			ನ
ಲಿ		ಮ			ನ		ಶ	ಕ್ತಿ		ಗ
		ಗ	ಟ್ಟಿ	ಮೇ	ಳ		ಯ			ಬೇ
ಇ	ರು	ಳು				ಮ	ನ	ಕ	ಲ	ಕು

'ಚೆಫ್ ಚಿದಂಬರ' ಅನು ಪಾತ್ರದಲ್ಲಿ ರೆಚೆಲ್ ಡೇವಿಡ್

ಲವ್‌ಮಾಕ್ಟೇಲ್ ಖ್ಯಾತಿಯ ನಟಿ ರೆಚೆಲ್ ಡೇವಿಡ್ ಅವರು ಎಂ. ಆನಂದರಾಜ್ ನಿರ್ದೇಶನ ಹಾಗೂ ಅನಿರುಧ್, ನಿಧಿ ಸುಬ್ಬಯ್ಯ ನಟಿಸಿರುವ 'ಚೆಫ್ ಚಿದಂಬರ' ಚಿತ್ರದಲ್ಲಿ ಅನು ಪಾತ್ರದ ಮೂಲಕ ರೆಚೆಲ್ ಡೇವಿಡ್ ಅವರು ಕಾಣಿಸಿಕೊಳ್ಳಲಿದ್ದಾರೆ. ರೆಚೆಲ್ ಅವರ ಹೊಸ ಪೋಸ್ಟರನ್ನು ಚಿತ್ರತಂಡ ಇತ್ತೀಚೆಗೆ ರಿವೀಲ್ ಮಾಡಿದೆ. ಸದ್ಯ ಪೋಸ್ಟ್ ಪ್ರೊಡಕ್ಷನ್ ಕೆಲಸದಲ್ಲಿ ಬ್ಯುಸಿಯಾಗಿರುವ, ಥ್ರಿಲ್ಲರ್ ಕಥಾಹಂದರ ಹೊಂದಿರುವ ಚೆಫ್ ಚಿದಂಬರ ಚಿತ್ರ ಸದ್ಯದಲ್ಲೇ ತೆರೆ ಮೇಲೆ ಬರಲಿದೆ.

ದಮ್ತಿ ಪಿಕ್ಚರ್ಸ್ ಲಾಂಛನದಲ್ಲಿ ರೂಪ ಡಿ.ಎನ್.ಅವರು ನಿರ್ಮಿಸುತ್ತಿರುವ ಈ ಚಿತ್ರಕ್ಕೆ ನಿರ್ದೇಶಕರೇ ಕಥೆ ಬರೆದಿದ್ದು, ಚಿತ್ರಕಥೆ ಹಾಗೂ ಸಂಭಾಷಣೆಗಳನ್ನು ಗಣೇಶ್ ಪರಶುರಾಮ್ ಬರೆದಿದ್ದಾರೆ. ಉದಯ ಲೀಲ ಅವರ ಛಾಯಾಗ್ರಹಣ, ರಿತ್ವಿಕ್ ಮುರಳೀಧರನ್ ಅವರ ಸಂಗೀತ ಸಂಯೋಜನೆ, ವಿಜೇತ್‌ಚಂದ್ರ ಅವರ ಸಂಕಲನ, ವಿಕ್ರಾಂತ್‌ರೋಣ ಖ್ಯಾತಿಯ ಆಶಿಕ್ ಕುಸುಗೊಳ್ಳಿ ಡಿ.ಐ.ನರಸಿಂಹ ಮೂರ್ತಿ ಅವರ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ. ಅನಿರುಧ್ ಜೊತೆ ನಿಧಿ ಸುಬ್ಬಯ್ಯ ಹಾಗೂ ರೆಚೆಲ್ ಡೇವಿಡ್ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ಶರತ್ ಲೋಹಿತಾಶ್ವ, ಕೆ.ಎಸ್. ಶ್ರೀಧರ್, ಶಿವಮಣಿ ಇತರರು ತಾರಾಬಳಗದಲ್ಲಿದ್ದಾರೆ.

ನಂಜನಗೂಡಲ್ಲಿ ಅಂಧಕಾಸುರ ವಧೆ ವೇಳೆ ದೇವರಿಗೆ ಎಂಜಲು ನೀರು ಎರಚಿ ಅಡ್ಡಿ

ಭಕ್ತ ಮಂಡಳಿಯಿಂದ ಪ್ರತಿಭಟನೆ, ಸಹಿ ಸಂಗ್ರಹ ಅಭಿಯಾನ



ನಂಜನಗೂಡು, ಡಿ.28– ನಂಜುಂಡೇಶ್ವರ ದೇವಾಲಯ ವತಿಯಿಂದ ನಡೆಯುವ ಅಂಧಕಾಸುರ ವಧೆ ಕಾರ್ಯಕ್ರಮದ ವೇಳೆ ತಾಂಡವೇಶ್ವರ ಹಾಗೂ ಪಾರ್ವತಿದೇವಿ ಉತ್ಸವಮೂರ್ತಿಗಳಿಗೆ ಎಂಜಲು ನೀರು ಎರಚಿ ಧಾರ್ಮಿಕ ಕಾರ್ಯಕ್ಕೆ ಅಡ್ಡಿಪಡಿಸಿ ಭಕ್ತರ ಭಾವನೆಗಳಿಗೆ ಧಕ್ಕೆ ತಂದಿರುವ ಕಿಡಿಗೇಡಿಗಳನ್ನು ಬಂಧಿಸುವಂತೆ ಒತ್ತಾಯಿಸಿ ಶ್ರೀಕಂಠೇಶ್ವರಸ್ವಾಮಿ ಭಕ್ತ ಮಂಡಳಿ ವತಿಯಿಂದ ಸಹಿ ಸಂಗ್ರಹ ಅಭಿಯಾನ ಹಾಗೂ ಬೃಹತ್ ಪ್ರತಿಭಟನೆ ನಡೆಸಲಾಯಿತು.

ನಂಜುಂಡೇಶ್ವರ ದೇವಾಲಯದ ಮುಂದೆ ಜಮಾವಣೆಗೊಂಡ ನೂರಾರು ಭಕ್ತರು ಕಿಡಿಗೇಡಿಗಳ ಬಂಧನಕ್ಕೆ ಆಗ್ರಹಿಸಿ ಘೋಷಣೆ ಕೂಗಿದರು. ಅಲ್ಲದೆ ಬೃಹತ್ ಫ್ಲೆಕ್ಸ್‌ನಲ್ಲಿ ಸಹಿ ಸಂಗ್ರಹ ಅಭಿಯಾನ ಕೈಗೊಂಡ ವೇಳೆ ದೇವಾಲಯಕ್ಕೆ ಆಗಮಿಸಿದ್ದ ಸಾವಿರಾರು ಭಕ್ತರು ಈ ಕೃತ್ಯವನ್ನು ಖಂಡಿಸಿ ಸಹಿ ಹಾಕುವ ಮೂಲಕ ಬೆಂಬಲ ವ್ಯಕ್ತಪಡಿಸಿದರು ಹಾಗೂ ರಥಬೀದಿಯಲ್ಲಿನ ಎಲ್ಲಾ ವರ್ತಕರು, ವ್ಯಾಪಾರಿಗಳು ಸ್ವಯಂಪ್ರೇರಿತರಾಗಿ ಅಂಗಡಿಗಳನ್ನು ಬಂದ್ ಮಾಡಿ ಪ್ರತಿಭಟನೆಗೆ ಬೆಂಬಲ ವ್ಯಕ್ತಪಡಿಸಿದರು.

ಶತಮಾನಗಳಿಂದ ಆಚರಿಸುತ್ತಾ ಬಂದಿರುವ ಅಂಧಕಾಸುರನ ವಧೆ ಕಾರ್ಯಕ್ರಮ ಮಂಗಳವಾರ ಸಂಜೆ ನಿಗದಿಯಾಗಿತ್ತು. ಆದರೆ ಮಧ್ಯಾಹ್ನದ ವೇಳೆ ಕೆಲವರು ಈ ಕಾರ್ಯವನ್ನು ತಡೆಯಲು ಸಂಚು ರೂಪಿಸಿದ್ದ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದರು. ಪೊಲೀಸ್ ಇಲಾಖೆಗೂ ಈ ವಿಚಾರ ತಿಳಿದಿತ್ತು. ಆದರೂ ಅವರನ್ನು ವಶಕ್ಕೆ ಪಡೆದು ಅಂಧಕಾಸುರನ ವಧೆ ಕಾರ್ಯವನ್ನು ಸುಸೂತ್ರವಾಗಿ ನೆರವೇರುವಂತೆ ಮಾಡುವಲ್ಲಿ ಪೊಲೀಸ್ ಇಲಾಖೆ ವೈಫಲ್ಯ ಎದ್ದು ಕಾಣುತ್ತಿದೆ ಎಂದು ಪ್ರತಿಭಟನಕಾರರು ಆಪಾದಿಸಿದರು.

ಧಾರ್ಮಿಕ ಭಾವನೆಗೆ ಧಕ್ಕೆ ಉಂಟಾಗುತ್ತಿದ್ದಂತೆ ಅಹೋರಾತ್ರಿ ಧರಣಿ ನಡೆಸಿ 24 ಗಂಟೆಯೊಳಗೆ ತಪ್ಪಿತಸ್ಥರನ್ನು ಬಂಧಿಸದಿದ್ದರೆ ಹೋರಾಟವನ್ನು ತೀವ್ರಗೊಳಿಸುವುದಾಗಿ ಎಚ್ಚರಿಕೆ ನೀಡಲಾಗಿತ್ತು. ಎರಡು ದಿನ ಕಳೆದರೂ ಆರೋಪಿಗಳನ್ನು ಪೊಲೀಸರು ಬಂಧಿಸಿಲ್ಲ. ಹೀಗಾಗಿ ಭಕ್ತ ಮಂಡಳಿಯಿಂದ ಸಹಿ ಸಂಗ್ರಹ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದ್ದು, ಸ್ಥಳಕ್ಕೆ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆಗಮಿಸಿ ಅಹವಾಲು ಆಲಿಸುವವರೆಗೂ ಸ್ಥಳದಿಂದ ಕದಲುವುದಿಲ್ಲ ಎಂದು ಪಟ್ಟು ಹಿಡಿದರು.

ಪ್ರತಿಭಟನಾ ಸ್ಥಳಕ್ಕೆ ಉಪವಿಭಾಗಾಧಿಕಾರಿ ರಕ್ಷಿತ್ ಭೇಟಿ ನೀಡಿ ಪ್ರತಿಭಟನಕಾರರ ಮನವಿ ಆಲಿಸಿದ ಬಳಿಕ ಮಾತನಾಡಿ, ಜಿಲ್ಲಾಧಿಕಾರಿಗಳು ಚುನಾವಣೆಗೆ ಸಂಬಂಧಿಸಿದಂತೆ ದೆಹಲಿಗೆ ತೆರಳಿದ್ದಾರೆ. ಈಗಾಗಲೇ ಘಟನೆಗೆ ಸಂಬಂಧಿಸಿದಂತೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪೊಲೀಸರು ಕೂಡ ವಿಡಿಯೋ ತುಣುಕುಗಳನ್ನು ಪರಿಶೀಲನೆ ನಡೆಸಿ ತಪ್ಪಿತಸ್ಥರ ವಿರುದ್ಧ ಸಾಕ್ಷ್ಯ ಸಂಗ್ರಹಿಸಿ ಕ್ರಮ ಕೈಗೊಳ್ಳಲಿದ್ದಾರೆ. ನಿಮ್ಮ ಅಹವಾಲನ್ನು ಜಿಲ್ಲಾಧಿಕಾರಿಗಳ ಗಮನಕ್ಕೆ ತರುವುದಾಗಿ ಭರವಸೆ ನೀಡಿದರು.

ಇದೇ ಸಂಧರ್ಭದಲ್ಲಿ ಮಾತನಾಡಿದ ಅಪರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ನಂದಿನಿ, ಕಾನೂನಿನಲ್ಲಿ ಕೆಲವು ಇತಿಮಿತಿಗಳಿವೆ. ದಾಖಲಾತಿಗಳನ್ನು ಪರಿಶೀಲನೆ ನಡೆಸಿ ತನಿಖೆ ಕೈಗೊಂಡು ಕಾನೂನಿನಡಿ ಅವಕಾಶವಿದ್ದರೆ ದಸ್ತಗಿರಿ ಮಾಡಿ ಖಂಡಿತ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಮೌಖಿಕವಾಗಿ ಹೇಳುವುದಕ್ಕೂ, ದಾಖಲಾತಿ ಹೇಳುವುದಕ್ಕೂ ವ್ಯತ್ಯಾಸವಿದೆ. ಸೂಕ್ತ ಸಾಕ್ಷ್ಯಗಳಿಲ್ಲದೇ ನಾವು ಯಾರನ್ನೂ ಬಂಧಿಸಲು ಸಾಧ್ಯವಿಲ್ಲ. ಹಾಗಾಗಿ ಈ ನಿಟ್ಟಿನಲ್ಲಿ ತನಿಖೆ ಕೈಗೊಳ್ಳುವುದಾಗಿ ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ಪ್ರತಿಭಟನಕಾರರು, ಈಗ ಅಂಧಕಾಸುರ ವಧೆಗೆ ಅಡ್ಡಿಪಡಿಸಿರುವವರು ಮುಂದೆ ದೊಡ್ಡಜಾತ್ರೆ ಸಂದರ್ಭದಲ್ಲೂ ಕ್ಯಾತೆ ತೆಗೆಯುವ ಸಾಧ್ಯತೆ ಇರುವುದರಿಂದ ಭಕ್ತರ ಭಾವನೆಗಳಿಗೂ ಧಕ್ಕೆಯಾಗಲಿದೆ. ಈಗಲೇ ಅಂತಹವರ ವಿರುದ್ಧ ಕ್ರಮ ಕೈಗೊಳ್ಳಿ. ತಪ್ಪಿತಸ್ಥರನ್ನು ಬಂಧಿಸದಿದ್ದರೆ ಮುಂದಿನ ದಿನಗಳಲ್ಲಿ ನಂಜನಗೂಡು ಬಂದ್ ಆಚರಿಸಿ ಹೋರಾಟ ತೀವ್ರಗೊಳಿಸುವುದಾಗಿ ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಭಕ್ತ ಮಂಡಳಿಯ ಗಿರೀಶ್, ಎನ್.ಜೆ.ಸುನಿಲ್, ಜಯಕುಮಾರ್, ಅರ್ಜುನ್, ನಿತಿನ್, ರವಿ, ಕಿರಣ್, ಮಹದೇವಪ್ರಸಾದ್, ಅನಂತ್, ಆನಂದ್ ಬಿ.ನಾಯರ್, ರವಿಶಾಸ್ತ್ರಿ, ಉಮೇಶ್ ಮೋದಿ ಸೇರಿದಂತೆ ಹಲವರು ಭಾಗವಹಿಸಿದ್ದರು.

ಪೊಲೀಸರು – ಭಕ್ತರ ನಡುವೆ ಮಾತಿನ ಚಕಮಕಿ

ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಎಎಸ್ಪಿ ಡಾ.ನಂದಿನಿ ಅವರೊಂದಿಗೆ ಭಕ್ತರು ಪೊಲೀಸರ ವೈಫಲ್ಯದ ಬಗ್ಗೆ ಮಾತನಾಡುತ್ತಿದ್ದಂತೆ ಭಕ್ತರು ವಾಗ್ವಾದಕ್ಕಿಳಿದರು. ಈ ವೇಳೆ ಪೊಲೀಸರು ಪ್ರತಿಭಟನಕಾರರ ಮೇಲೆ ಹರಿಹಾಯ್ದರು. ಇದರಿಂದ ಕೆಲಕ್ಷಣ ಬಿಗುವಿನ ವಾತಾವರಣ ನಿರ್ಮಾಣವಾಯಿತು. ಪೊಲೀಸರು ನಮ್ಮನ್ನು ಕೆರಳುವಂತೆ ಮಾಡಿ ಕಾನೂನು ಉಲ್ಲಂಘನೆ ಆಪಾದನೆಯಲ್ಲಿ ಬಂಧಿಸುವ ಹುನ್ನಾರದಿಂದ ನಮ್ಮನ್ನು ಪ್ರಚೋದಿಸಿದರು ಎಂದು ಭಕ್ತರು ಆಪಾದಿಸಿದ್ದಾರೆ. ಪೊಲೀಸರನ್ನು ನಮ್ಮೊಳಗಿನ ಯೋಧರು ಎಂಬುದಾಗಿ ಭಾವಿಸಿದ್ದೇವೆ. ನಮ್ಮ ಧಾರ್ಮಿಕ ಭಾವನೆಗೆ ಧಕ್ಕೆ ಉಂಟಾಗಿದೆ. ಅದಕ್ಕೆ ಮಾತ್ರ ನಾವು ನ್ಯಾಯ ಕೇಳುತ್ತಿದ್ದೇವೆ. ಪೊಲೀಸರೊಂದಿಗೆ ಅನುಚಿತವಾಗಿ ವರ್ತಿಸುವ ಅಗತ್ಯ ನಮಗಿಲ್ಲ ಎಂದು ಭಕ್ತರು ಪೊಲೀಸರಿಗೇ ತಿಳಿ ಹೇಳಿದರು.

ಅಂಧಕಾಸುರನ ವಧೆಯಲ್ಲ, ಮಹಿಷಾ ಸಂಹಾರ

ಪ್ರಗತಿಪರರ ಮೇಲಿನ ಎಫ್‌ಐಆರ್ ರದ್ದತಿಗೆ ದಸಂಸ ಆಗ್ರಹ



ನಂಜನಗೂಡು: ಶ್ರೀಕಂಠೇಶ್ವರ ದೇವಾಲಯದ ವತಿಯಿಂದ ನಡೆದಿದ್ದು ಅಂಧಕಾಸುರನ ವಧೆಯಲ್ಲ. ಬದಲಾಗಿ ಮಹಿಷಾಸುರನ ರಂಗೋಲಿ ಮತ್ತು ಫ್ಲೆಕ್ಸ್ ಹಾಕಿ ಮಹಿಷಾ ಸಂಹಾರ ನಡೆಸಿ ನಮ್ಮ ಧಾರ್ಮಿಕ ಭಾವನೆಗೆ ಧಕ್ಕೆಯನ್ನುಂಟು ಮಾಡಿದ್ದಾರೆ. ಇದನ್ನು ವಿರೋಧಿಸಿದ ನಮ್ಮ ಮೇಲೆಯೇ ದೇವರಿಗೆ ಅಪಚಾರ ನಡೆಸಿದ್ದಾರೆ ಎಂದು ಪೂರ್ವನಿಯೋಜಿತವಾಗಿ ಎಫ್‌ಐಆರ್ ದಾಖಲಿಸಿದ್ದಾರೆ. ಪ್ರಗತಿಪರರ ಮೇಲೆ ದಾಖಲಾಗಿರುವ ಎಫ್‌ಐಆರ್ ರದ್ದುಗೊಳಿಸಿ ಕಿಡಿಗೇಡಿಗಳಿಗೆ ಶಿಕ್ಷೆ ವಿಧಿಸಬೇಕು ಎಂದು ದಸಂಸ ಸಂಚಾಲಕ ಚುಂಚನಹಳ್ಳಿ ಮಲ್ಲೇಶ್ ಒತ್ತಾಯಿಸಿದ್ದಾರೆ.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಘಟನೆಯ ಕಾರ್ಯಕರ್ತರು ಪೂರ್ವನಿಯೋಜಿತವಾಗಿ ಅವರ ಕಾರ್ಯಕ್ರಮ ನಿಲ್ಲಿಸಲು ಹೋಗಿರಲಿಲ್ಲ. ನಮ್ಮ ಹೋರಾಟ ನಂಜುಂಡೇಶ್ವರ ದೇವಾಲಯದ ಧಾರ್ಮಿಕ ದತ್ತಿ ಇಲಾಖೆಯ ಅಧಿಕಾರಿಗಳ ವಿರುದ್ಧವೇ ಹೊರತು ಭಕ್ತರ ವಿರುದ್ಧ ಆಗಿರಲಿಲ್ಲ ಎಂದರು.

ಮಹಿಷಾಸುರನ ವಧೆ ಕಾರ್ಯಕ್ರಮವನ್ನು ಆಯೋಜಿಸಿರುವ ಬಗ್ಗೆ ಮಾಹಿತಿ ತಿಳಿದು ಈ ಮೌಢ್ಯವನ್ನು ನಿಲ್ಲಿಸಿ ಎಂದು ನಮ್ಮ ನೋವನ್ನು ಸರ್ಕಾರಿ ಅಧಿಕಾರಿಗಳ ಬಳಿ ತೋಡಿಕೊಳ್ಳುತ್ತಿದ್ದೆವು. ಆಗ 3ನೇ ವ್ಯಕ್ತಿಗಳು ನಮ್ಮ ಮೇಲೆ ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆಗೆ ಮುಂದಾದರು. ಯಾವುದೇ ಒಂದು ಆಚರಣೆ ಸಮಾಜಕ್ಕೆ ಸತ್ಯಾಸತ್ಯತೆ ತಿಳಿದ ಮೇಲೆ ನಿಂತು ಹೋಗುತ್ತದೆ. ದೇವದಾಸಿ ಪದ್ಧತಿ, ಸತಿಸಹಗಮನ ಪದ್ದತಿ ನಿಷೇಧ, ಇದಕ್ಕೆ ಸ್ಪಷ್ಟ ಉದಾಹರಣೆ. ನಮ್ಮ ಭಾವನೆಗಳಿಗೆ ಧಕ್ಕೆಯಾಗುತ್ತದೆ ಎಂದು ಹೇಳುವ ಇವರು ಬೇರೆಯವರ ಧಾರ್ಮಿಕ ಭಾವನೆಗಳಿಗೂ ಧಕ್ಕೆಯಾಗುತ್ತದೆ ಎಂಬ ಅರಿವು ಇರಬೇಕು ಎಂದು ಅವರು ದೂರಿದರು.

ಸರ್ಕಾರ ಮಧ್ಯೆ ಪ್ರವೇಶ ಮಾಡಿ ಸಂಪ್ರದಾಯದ ಹೆಸರೇಳಿಕೊಂಡು ಹೊಸ ಪ್ರಯೋಗಕ್ಕೆ ಅನುವು ಮಾಡಿಕೊಡುತ್ತಿರುವ ಪೂಜಾರಿಗಳನ್ನು ಸಾಮೂಹಿಕವಾಗಿ ಬೇರೆ ದೇವಾಲಯಕ್ಕೆ ವರ್ಗಾಣೆಗೊಳಿಸಬೇಕು. ಮತ್ತು ಪ್ರಗತಿಪರರ ಮೇಲೆ ದಾಖಲಾಗಿರುವ ಎಫ್‌ಐಆರ್ ರದ್ದುಗೊಳಿಸಬೇಕು, ಮತ್ತು ಘಟನೆಗೆ ಕಾರಣರಾದ ಕಿಡಿಗೇಡಿಗಳ ಮೇಲೆ ಕಾನೂನು ಕ್ರಮಜರುಗಿಸಬೇಕು ಇಲ್ಲವಾದಲ್ಲಿ ಉಗ್ರ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಮಲ್ಲಹಳ್ಳಿ ನಾರಾಯಣ, ಕಾರ್ಯಬಸವಣ್ಣ, ನಗರ್ಲೆ ವಿಜಯ್‌ಕುಮಾರ್, ಇಮ್ಮಾವು ರಘು, ತ್ರಿಣೇಶ್, ಅಭಿನಾಗಭೂಷಣ ಇದ್ದರು.

ಕುರಿ ಮಂದೆ ಮೇಲೆ ಹರಿದ ಟಿಪ್ಪರ್: 18 ಕುರಿಗಳ ಸಾವು, 40 ಕುರಿಗಳಿಗೆ ಗಾಯ

ಕುರಿಗಾಹಿಗೂ ಗಂಭೀರ ಗಾಯ, ಆಸ್ಪತ್ರೆಗೆ ದಾಖಲು



ನಂಜನಗೂಡು, ಮಲ್ಲುಂಡಿ: ವೇಗವಾಗಿ ಬಂದ ಎಂಸ್ಯಾಂಡ್ ತುಂಬಿದ್ದ ಟಿಪ್ಪರ್ ಲಾರಿಯೊಂದು ಕುರಿ ಮಂದೆಯ ಮೇಲೆ ಹರಿದ ಪರಿಣಾಮ 18 ಕುರಿಗಳು ಸ್ಥಳದಲ್ಲೇ ಸಾವಿಗೀಡಾಗಿದ್ದು 40ಕ್ಕೂ ಹೆಚ್ಚು ಕುರಿಗಳು ಗಂಭೀರವಾಗಿ ಗಾಯಗೊಂಡಿರುವ ಧಾರುಣ ಘಟನೆ ಗುರುವಾರ ತಾಲೂಕಿನ ಹೆಡಿಯಾಲ ಬೇಗೂರು ಮುಖ್ಯರಸ್ತೆಯ ಇಂದಿರಾನಗರ ಸಮೀಪ ನಡೆದಿದೆ.

ಚಿತ್ರದುರ್ಗ ಜಿಲ್ಲೆಯ ಹಿರಿಯೂರು ಮೂಲದ ಮುರುಳಿ ಎಂಬುವರಿಗೆ ಸೇರಿದ ಮಂದೆ ಕುರಿಗಳನ್ನು ಮೇಯಿಸುತ್ತಿದ್ದ ಮೂವರು ಕಾಲಕಾಲಕ್ಕೆ ಮೇವಿಗೆ ಸೂಕ್ತವಾದ ಸ್ಥಳವನ್ನು ಅರಸಿಕೊಂಡು ತೆರಳುತ್ತಿದ್ದರು. ಗುರುವಾರ ಬೆಳಗ್ಗೆ ಕುರಿಗಳನ್ನು ಮೇಯಲು ಕರೆದೊಯ್ಯುತ್ತಿದ್ದ ವೇಳೆ ಗುಂಡ್ಲುಪೇಟೆಯಿಂದ ಹೆಡಿಯಾಲ ಕಡೆಗೆ ತೆರಳುತ್ತಿದ್ದ ಎಂ. ಸ್ಯಾಂಡ್ ತುಂಬಿದ್ದ ಟಿಪ್ಪರ್ ಲಾರಿಯೊಂದು ವೇಗವಾಗಿ ಕುರಿ ಮಂದೆ ಮೇಲೆ ನುಗ್ಗಿದ್ದರಿಂದ 18 ಕುರಿಗಳು ಸ್ಥಳದಲ್ಲೇ ಸಾವಿಗೀಡಾದರೆ 40ಕ್ಕೂ ಹೆಚ್ಚು ಗಂಭೀರವಾಗಿ ಗಾಯಗೊಂಡಿವೆ. ಇನ್ನು ಈ ಸಂದರ್ಭ ಕುರಿಗಳನ್ನು ಕರೆದೊಯ್ಯುತ್ತಿದ್ದ ಕುರಿಗಾಹಿ ಬೊಮ್ಮಣ್ಣ ಎಂಬುವರಿಗೂ ಗಂಭೀರ ಗಾಯಗಳಾಗಿದ್ದು ಆತನನ್ನು ನಂಜನಗೂಡಿನ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ದು ಪ್ರಾಥಮಿಕ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಕೆ.ಆರ್.ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಅಪಘಾತ ಸಂಭವಿಸಿದ ಬಳಿಕ ಲಾರಿ ಚಾಲಕ ಘಟನಾ ಸ್ಥಳದಿಂದ ಪರಾರಿಯಾಗಿದ್ದಾನೆ. ಚಾಲಕನ ನಿರ್ಲಕ್ಷ್ಯವೇ ಅಪಘಾತಕ್ಕೆ ಕಾರಣ ಎಂದು ಸ್ಥಳೀಯರು ದೂರಿದ್ದಾರೆ. ಈ ಸಂಬಂಧ ಹುಲ್ಲಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ದೂರು ದಾಖಲಿಸಿಕೊಂಡಿರುವ ಹುಲ್ಲಹಳ್ಳಿ ಠಾಣೆಯ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಹನುಮ ಜಯಂತಿ : ಮದ್ಯದ ಅಂಗಡಿ ಮುಚ್ಚಲು ಆದೇಶ

ಮೈಸೂರು,ಡಿ.28– ಕೆ.ಆರ್.ನಗರ ಪಟ್ಟಣದಲ್ಲಿ ಡಿಸೆಂಬರ್ 24 ರಿಂದ ಡಿ.30 ರವರೆಗೆ ಹನುಮ ಜಯಂತಿ ಕಾರ್ಯಕ್ರಮ ನಡೆಯಲಿರುವ ಹಿನ್ನೆಲೆಯಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ಮುನ್ನೆಚ್ಚರಿಕೆ ಕ್ರಮವಾಗಿ ಕರ್ನಾಟಕ ಅಬಕಾರಿ ಅಧಿನಿಯಮ 1965 ಕಲಂ 21 ರಡಿಯಲ್ಲಿ ಡಿ.29ರ ಸಂಜೆ 6 ಗಂಟೆಯಿಂದ ಡಿ.30 ರ ಮಧ್ಯೆ ರಾತ್ರಿ 12 ಗಂಟೆಯವರೆಗೆ ಕೆ.ಆರ್.ನಗರ ಟೌನ್ ವ್ಯಾಪ್ತಿಯಲ್ಲಿನ ಎಲ್ಲಾ ಮದ್ಯದ ಅಂಗಡಿಯನ್ನು ಮುಚ್ಚುವಂತೆ ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ ಆದೇಶಿಸಿದ್ದಾರೆ.

ತಹಶೀಲ್ದಾರ್‌ರಿಂದ ನಿಯಮ ಉಲ್ಲಂಘಿಸಿ ಅಕ್ರಮ ನೇಮಕ

6 ಮಂದಿ ಗ್ರಾಮ ಸಹಾಯಕರ ನೇಮಕಾತಿ ರದ್ದು

ತಿ.ನರಸೀಪುರ ಡಿ.28– ಕಂದಾಯ ಇಲಾಖೆಯ ನಿಯಮ ಉಲ್ಲಂಘಿಸಿ ಹಿಂದಿನ ತಹಶೀಲ್ದಾರ್ ಸಿ.ಜಿ.ಗೀತಾ ಅವರು ನೇಮಕ ಮಾಡಿದ್ದ ತಾಲೂಕಿನ ವಿವಿಧ ವೃತ್ತಗಳ 6 ಮಂದಿ ಗ್ರಾಮ ಸಹಾಯಕರ ನೇಮಕಾತಿಯನ್ನು ಜಿಲ್ಲಾಧಿಕಾರಿಗಳು ರದ್ದುಗೊಳಿಸಿದ್ದಾರೆ.

ತಹಶೀಲ್ದಾರರ ಅಕ್ರಮ ನೇಮಕಾತಿಯ ವಿರುದ್ಧ ನಿರಂತರವಾಗಿ ಹೋರಾಟ ನಡೆಸಿದ ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತರು ಹಾಗೂ ಮುಖಂಡರ ಹೋರಾಟಕ್ಕೆ ಕೊನೆಗೂ ಜಯ ಸಿಕ್ಕಂತಾಗಿದೆ.

ತಾಲೂಕಿನ ಚಾಮನಹಳ್ಳಿ ವೃತ್ತ ಬನ್ನೂರು, ತುರುಗನೂರು ಹಾಗೂ ತಲಕಾಡು ವೃತ್ತಗಳಿಗೆ ಕಳೆದ 2022ರ ಡಿ.23 ರಂದು ಅಧಿಕೃತ ಪ್ರಕಟಣೆ ಹೊರಡಿಸಿದ್ದ ಅಂದಿನ ತಹಶೀಲ್ದಾರ್ ಸಿ.ಜಿ.ಗೀತಾ ಇಲಾಖೆಯ ನಿಯಮ ಮೀರಿ ಆರು ಮಂದಿ ಗ್ರಾಮ ಸಹಾಯಕರ ನೇಮಕವನ್ನು ಅಕ್ರಮವಾಗಿ ಮಾಡಿಕೊಂಡಿದ್ದರು. ತಹಶೀಲ್ದಾರರ ಅಕ್ರಮದ ವಿರುದ್ಧ ಧ್ವನಿಯೆತ್ತಿದ್ದ ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್ ಅವರು ಹೋರಾಟವನ್ನು ಹಮ್ಮಿಕೊಂಡು ಅಕ್ರಮ ನೇಮಕಾತಿಯ ಬಗ್ಗೆ ಜಿಲ್ಲಾಡಳಿತಕ್ಕೆ ಲಿಖಿತ ದೂರನ್ನೂ ನೀಡಿದ್ದರು.

ಗ್ರಾಮ ಸಹಾಯಕರ ನೇಮಕಾತಿ ಪ್ರಕ್ರಿಯೆಯಲ್ಲಿ ನಿಯಮಬಾಹಿರವಾಗಿ ಆಯ್ಕೆಯಾಗಿರುವುದನ್ನು ಜಿಲ್ಲಾಧಿಕಾರಿಗಳ ಸೂಚನೆ ಮೇರೆಗೆ ಅಪರ ಜಿಲ್ಲಾಧಿಕಾರಿಗಳು ಕಳೆದ 2023ರ ಜು.13 ರಂದು ತಾಲೂಕು ಕಚೇರಿಯಲ್ಲಿ ದೂರುದಾರರು ಹಾಗೂ ತಹಶೀಲ್ದಾರರ ಸಮ್ಮುಖದಲ್ಲಿ ಕಡತಗಳನ್ನು ಪರಿಶೀಲಿಸಿದರು. ಅಲ್ಲದೆ 2023ರ ನ.6ರ ಅಪರ ಜಿಲ್ಲಾಧಿಕಾರಿಗಳ ವಿಚಾರಣೆ ಮತ್ತು ಉಪ ವಿಭಾಗಾಧಿಕಾರಿಯವರ ವರದಿ ಆಧಾರದ ಮೇಲೆ ತಹಶೀಲ್ದಾರು ನಡೆಸಿದ್ದ ಗ್ರಾಮ ಸಹಾಯಕರ ಅಕ್ರಮ ನೇಮಕಾತಿಯ ಆದೇಶವನ್ನು ಡಿಸಿ ಡಾ.ಕೆ.ವಿ. ರಾಜೇಂದ್ರ ರದ್ದುಗೊಳಿಸಿದ್ದಾರೆ.

ಗೀತಾ ಮೇಲೆ ಕಾನೂನು ಕ್ರಮವಾಗಲಿ: ಅಕ್ರಮ ನೇಮಕಾತಿಯನ್ನು ರದ್ದುಗೊಳಿಸಿರುವ ಜಿಲ್ಲಾಡಳಿತದ ಆದೇಶವನ್ನು ಸ್ವಾಗತಿಸಿರುವ ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್ ಕಂದಾಯ ಇಲಾಖೆಯ ನಿಯಮಗಳನ್ನ ಗಾಳಿಗೆ ತೂರಿ ಗ್ರಾಮ ಸಹಾಯಕರ ನೇಮಕಾತಿಯನ್ನು ಅಕ್ರಮವಾಗಿ ನಡೆಸಿರುವ ಹಿಂದಿನ ತಹಶೀಲ್ದಾರ್ ಸಿ.ಜಿ.ಗೀತಾ ಅವರ ಮೇಲೆ ಜಿಲ್ಲಾಧಿಕಾರಿಗಳು ಕಾನೂನು ಕ್ರಮವನ್ನು ಜರುಗಿಸಬೇಕು. ನೇಮಕಾತಿಯಿಂದ ಅನ್ಯಾಯಕ್ಕೊಳಗಾದವರಿಗೆ ಸದರಿ ಹುದ್ದೆಗಳನ್ನು ಕಾನೂನುಬದ್ಧವಾಗಿ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ಶೀಘ್ರದಲ್ಲೇ ಗ್ರಾಮದ ಸ್ಮಶಾನದ ಸಮಸ್ಯೆ ನಿವಾರಣೆ

ರಸ್ತೆ ಡಾಂಬರೀಕರಣಕ್ಕೆ ಚಾಲನೆ ನೀಡಿದ ಶಾಸಕ ಅನಿಲ್ ಚಿಕ್ಕಮಾದು ಭರವಸೆ



ಸರಗೂರು: ಚಾಮೇಗೌಡನಹುಂಡಿ ಗ್ರಾಮದಲ್ಲಿ ಸ್ಮಶಾನದ ಜಾಗದ ವಿಚಾರದಲ್ಲಿ ತಲೆದೋರಿರುವ ಸಮಸ್ಯೆಯನ್ನು ಶೀಘ್ರದಲ್ಲೇ ಬಗೆಹರಿಸಲು ತಹಶೀಲ್ದಾರ್ ಅವರಿಗೆ ಸೂಚನೆ ನೀಡಲಾಗುವುದು ಎಂದು ಶಾಸಕ ಅನಿಲ್ ಚಿಕ್ಕಮಾದು ಭರವಸೆ ನೀಡಿದ್ದಾರೆ.

ತಾಲೂಕಿನ ಚಾಮೇಗೌಡನಹುಂಡಿ ಗ್ರಾಮದಲ್ಲಿ 83 ಲಕ್ಷ ರೂ. ವೆಚ್ಚದಲ್ಲಿ ಕಬಿನಿ ಬಲದಂಡೆ ನಾಲೆ ಏರಿಯ ಚಾಮೇಗೌಡನಹುಂಡಿ– ಮರದಕಟ್ಟೆ ಗ್ರಾಮದ ಸಂಪರ್ಕ ರಸ್ತೆ ಡಾಂಬರೀಕರಣಕ್ಕೆ ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಹಂತ–ಹಂತವಾಗಿ ಗ್ರಾಮದ ಅಭಿವೃದ್ಧಿಗೆ ಶ್ರಮಿಸಲಾಗುವುದು. ಕೊತ್ತೇಗಾಲ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಗ್ರಾಮಗಳಲ್ಲಿನ ಸ್ಮಶಾನ ಜಾಗವನ್ನು ಕಾನೂನಿನಡಿ ಬಿಡಿಸಲು ಕ್ರಮವಹಿಸಲಾಗುವುದು. ಗ್ರಾಮಗಳಲ್ಲಿನ ಹತ್ತಾರು ಸಮಸ್ಯೆಗಳಿಗೆ ಪರಿಹಾರ ಒದಗಿಸಲು ಅಧಿಕಾರಿಗಳಿಗೆ ಸೂಚಿಸಲಾಗುವುದು ಎಂದರು.

ಇದೇ ಸಂದರ್ಭದಲ್ಲಿ ಗ್ರಾಮಸ್ಥರು ಸ್ಮಶಾನ ಜಾಗದ ಸಮಸ್ಯೆಯನ್ನು ಬಗೆಹರಿಸಬೇಕು ಎಂದು ಶಾಸಕರಲ್ಲಿ ಮನವಿ ಮಾಡಿದರು. ಜಿಪಂ ಮಾಜಿ ಸದಸ್ಯ ಪಿ.ರವಿ ಮಾತನಾಡಿದರು. ಜಿಪಂ ಮಾಜಿ ಉಪಾಧ್ಯಕ್ಷೆ ಭಾಗ್ಯಲಕ್ಷ್ಮಿ, ಗ್ರಾಪಂ ಸದಸ್ಯರಾದ ಮಹದೇವ್, ನಾಗರಾಜು, ಮುಖಂಡರಾದ ಶಂಭುಲಿಂಗನಾಯಕ, ಕಂದೇಗಾಲ ಶಿವರಾಜು, ಅಗತ್ತೂರು ಅಂಕಪ್ಪ, ನಿಲವಾಗಿಲು ಚಾಮರಾಜು, ಪಿಎಸ್‌ಐ ನುದೀಶ್ ಕುಮಾರ್, ನಾಗರಾಜು, ತೆರಣಿಮುಂಟಿ ಗಿರೀಶ್, ಪಿಡಿಒ ನಾಗೇಂದ್ರ, ಎಂಜಿನಿಯರ್ ಉಷಾ, ಅವಿನಾಶ್, ಮಂಜುನಾಥ್ ಹಾಜರಿದ್ದರು.

ಹೆಚ್.ಡಿ.ಕೋಟೆ, ಸರಗೂರಲ್ಲಿ ಕೋವಿಡ್ ಎದುರಿಸಲು ಸಕಲ ಸಿದ್ಧತೆ

ಟಾಸ್ಕ್‌ಫೋರ್ಸ್ ಸಭೆಯಲ್ಲಿ ಅಧಿಕಾರಿಗಳೊಂದಿಗೆ ತಹಸೀಲ್ದಾರ್ ಚರ್ಚೆ



ಹೆಚ್.ಡಿ.ಕೋಟೆ, ಡಿ.28– ಕೋವಿಡ್ ಮತ್ತು ಜೆಎನ್.1 ಹಿನ್ನೆಲೆಯಲ್ಲಿ 60 ವರ್ಷ ಮೇಲ್ಪಟ್ಟವರು ಮತ್ತು ಅನಾರೋಗ್ಯ ಪೀಡಿತರು ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು ಎಂದು ಸೂಚಿಸಿದ ತಹಸೀಲ್ದಾರ್ ಶ್ರೀನಿವಾಸ್, ಮುನ್ನೆಚ್ಚರಿಕಾ ಕ್ರಮವಾಗಿ ತಾಲೂಕಿನ ಆಸ್ಪತ್ರೆಗಳಲ್ಲಿ ಸಕಲ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಪಟ್ಟಣದ ತಹಸೀಲ್ದಾರ್ ಕಚೇರಿ ಸಭಾಂಗಣದಲ್ಲಿ ನಡೆದ ಹೆಚ್.ಡಿ.ಕೋಟೆ, ಸರಗೂರು ತಾಲೂಕು ಟಾಸ್ಕ್‌ಫೋರ್ಸ್ ಸಮಿತಿ ಸಭೆಯಲ್ಲಿ ಕೋವಿಡ್ ಮತ್ತು ಜೆಎನ್.1 ಕುರಿತು ಚರ್ಚಿಸಲಾಯಿತು.

ನಂತರ ಮಾತನಾಡಿದ ತಹಸಿಲ್ದಾರ್ ಶ್ರೀನಿವಾಸ್, ಸರ್ಕಾರದ ಸುತ್ತೋಲೆಯಲ್ಲಿ ಸೂಚಿಸಿರುವಂತೆ 60 ವರ್ಷ ಮೇಲ್ಪಟ್ಟವರು ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು ಮತ್ತು ಜನನಿಬಿಡ ಸ್ಥಳಗಳಲ್ಲಿ ಹೆಚ್ಚು ಓಡಾಡದಂತೆ ಜಾಗೃತಿ ಮೂಡಿಸಬೇಕು ಎಂದರು.

ಜನರಲ್ಲಿ ಜ್ವರ, ಕೆಮ್ಮು, ಗಂಟಲು ನೋವು, ನೆಗಡಿ, ಉಸಿರಾಟದ ತೊಂದರೆ ಕಂಡು ಬಂದಲ್ಲಿ ಪರೀಕ್ಷೆಗೆ ಒಳಪಡಿಸಬೇಕು. ಸ್ವಚ್ಛತೆ ಬಗ್ಗೆ ಹೆಚ್ಚು ಗಮನ ಹರಿಸಬೇಕು, ದೈಹಿಕ ಅಂತರ ಕಾಪಾಡಿಕೊಳ್ಳಬೇಕು, ಕೋವಿಡ್ ವಿಚಾರವಾಗಿ ಟಾಸ್ಕ್‌ಫೋರ್ಸ್ ಸಮಿತಿಯಲ್ಲಿ ಇರುವ ಎಲ್ಲಾ ಅಧಿಕಾರಿ ವರ್ಗದವರು ಬಹಳ ಎಚ್ಚರಿಕೆಯಿಂದ ಕೆಲಸ ನಿರ್ವಹಿಸುವುದರ ಜೊತೆಗೆ ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯದಲ್ಲಿ ತೊಡಗಬೇಕು ಎಂದು ಮನವಿ ಮಾಡಿದರು.

ತಾಲೂಕು ಆರೋಗ್ಯಾಧಿಕಾರಿ ಡಾ. ರವಿಕುಮಾರ್ ಮಾತನಾಡಿ, ಸರ್ಕಾರದ ಮಾರ್ಗಸೂಚಿಯಂತೆ ಇಂದು ಟಾಸ್ಕ್‌ಫೋರ್ಸ್ ಸಮಿತಿಯ ಸಭೆ ಕರೆದು, ಸಭೆಯಲ್ಲಿ ಅಧಿಕಾರಿಗಳೊಂದಿಗೆ ಸಮರ್ಪಕವಾಗಿ ಚರ್ಚಿಸಲಾಗಿದೆ. ಸೋಂಕಿತ ವ್ಯಕ್ತಿಯ ಸಂಪರ್ಕದಲ್ಲಿದ್ದರೆ, ಅಂತಹವರು 7 ದಿನ ಈ ರೋಗ ಲಕ್ಷಣಗಳು ಇರಲಿ ಅಥವಾ ಇಲ್ಲದಿರಲಿ ಪ್ರತ್ಯೇಕವಾಗಿ ಮನೆಯಲ್ಲಿ ಇರಬೇಕು ಎಂದರು.

ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕಿನ ಎಲ್ಲಾ ಆಸ್ಪತ್ರೆಗಳಲ್ಲಿ, ತುರ್ತು ಅಗತ್ಯ ಔಷಧಿಗಳನ್ನು ಇಟ್ಟಿಕೊಳ್ಳುವುದರ ಜೊತೆಗೆ, ಆಕ್ಸಿಜನ್ ಇರುವ 50 ಹಾಸಿಗೆ ವ್ಯವಸ್ಥೆ ಮಾಡಲಾಗಿದೆ. ಮೂರು ಜಂಬೂ ಸಿಲಿಂಡರ್ ಉಳ್ಳ 10 ಐಸಿಯು ಹಾಸಿಗೆಗಳನ್ನು ಸಿದ್ಧಗೊಳಿಸಲಾಗಿದೆ. ಮೂರು ವೆಂಟಿಲೇಟರ್‌ಗಳು, ಜೊತೆಗೆ ಹೆಚ್.ಡಿ.ಕೋಟೆ ಸರಗೂರು ಸೇರಿದಂತೆ ಪ್ರತಿದಿನ 30 ಮಂದಿಗೆ ಕೋವಿಡ್ ಪರೀಕ್ಷೆ ಮಾಡುವ ವ್ಯವಸ್ಥೆಗಳನ್ನು ಮಾಡಲಾಗಿದೆ ಎಂದರು. ಆಶಾ ಕಾರ್ಯಕರ್ತರು, ಅಂಗನವಾಡಿ ಕಾರ್ಯಕರ್ತರು, ಕೋವಿಡ್ ಕುರಿತು ಕರಪತ್ರಗಳನ್ನು, ಸಾರ್ವಜನಿಕರಿಗೆ ನೀಡಿ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಲು ಸೂಚಿಸಲಾಗಿದೆ ಎಂದರು.

ಕೋವಿಡ್ ವಿಚಾರವಾಗಿ ತಾಲೂಕಿನ ಜನತೆ ಯಾವುದೇ ಆತಂಕ ಪಡುವ ಅಗತ್ಯವಿಲ್ಲ ಎಂದ ಅವರು, ತಾಲೂಕಿನ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಹಾಗೂ ಸಾರ್ವಜನಿಕ ಆಸ್ಪತ್ರೆಯಲ್ಲಿ ಆಕ್ಸಿಜನ್, ಅಗತ್ಯ ತುರ್ತು ಔಷಧಿಗಳನ್ನು ದಾಸ್ತಾನು ಇಟ್ಟುಕೊಳ್ಳುವಂತೆ, ಕೋವಿಡ್ ಸಂಬಂಧ, ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳಿಗೆ ಸಿಬ್ಬಂದಿ ವರ್ಗದವರಿಗೆ ಹಾಗೂ ಆಶಾ ಕಾರ್ಯಕರ್ತೆಯರಿಗೆ ತುರ್ತು ಸಭೆ ನಡೆಸಿ ಕ್ರಮ ಕೈಗೊಳ್ಳುವಂತೆ ತಿಳಿಸಿದರು.

ಸಭೆಯಲ್ಲಿ ತಾಲೂಕು ಪಂಚಾಯತಿ ಕಾರ್ಯನಿರ್ವಹಣಾಧಿಕಾರಿ ಧರಣೇಶ್, ಪುರಸಭಾ ಮುಖ್ಯಾಧಿಕಾರಿ ಸುರೇಶ್, ಸಿಡಿಪಿಓ ಆಶಾ, ಪರಿಶಿಷ್ಟ ಕಲ್ಯಾಣ ವರ್ಗಗಳ ಅಧಿಕಾರಿ ನಾರಾಯಣಸ್ವಾಮಿ, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಶಶಿಕಲಾ, ಜಗನ್ನಾಥ್, ಕೆಇಬಿ ಎಇಇ ಚಂದ್ರಕುಮಾರ್, ಕೃಷ್ಣಮೂರ್ತಿ, ಇನ್ನು ಹಲವಾರು ಅಧಿಕಾರಿಗಳು ಭಾಗವಹಿಸಿದ್ದರು ಹಾಗೂ ತಾಲೂಕು ಮಟ್ಟದ ಎಲ್ಲಾ ಅಧಿಕಾರಿಗಳು ಹಾಜರಿದ್ದರು.

> ಟಾಸ್ಕ್‌ಫೋರ್ಸ್ ಸಮಿತಿ ಸಭೆ ವಿಚಾರವಾಗಿ ಸಂಬಂಧಪಟ್ಟ ಎಲ್ಲ ಅಧಿಕಾರಿಗಳಿಗೆ ಪತ್ರ ರವಾನೆ ಮಾಡಲಾಗಿದ್ದು ಕೆಲವು ಅಧಿಕಾರಿಗಳು ಸಭೆಗೆ ಗೈರು ಹಾಜರಾಗಿದ್ದಾರೆ ಅಂತ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಂಡು ನೋಟಿಸ್ ಜಾರಿ ಮಾಡಲಾಗುತ್ತದೆ.
> –ಶ್ರೀನಿವಾಸ್, ತಹಸೀಲ್ದಾರ್.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಡೆವಿಲ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬ್ಯಾಡ್ ಮ್ಯಾನರ್ಸ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಅನಿಮಲ್ (ಹಿಂ)	2 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕಾಟೇರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಸಲಾರ್ (ತೆ)	4 ಪ್ರದರ್ಶನಗಳು
ರಾಜಕಮಲ್	
ಕಾಟೇರ (ಕ)	4 ಪ್ರದರ್ಶನಗಳು
ಸಂಗಂ	
ಸಲಾರ್ (ಕ) 3 ಪ್ರದರ್ಶನಗಳು ಸಲಾರ್ (ಹಿಂ)	1 ಪ್ರದರ್ಶನಗಳು
ಲಿಡೋ	
ಕೈವಾ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಸಲಾರ್ (ಹಿಂ)	4 ಪ್ರದರ್ಶನಗಳು
ಪ್ರಭಾ	
ಬ್ಯಾಡ್ ಮ್ಯಾನರ್ಸ್ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಸಲಾರ್– 1 (ತೆ): ಬೆ.9.15ಕ್ಕೆ, ಮ.3.50ಕ್ಕೆ, ರಾ.10.20ಕ್ಕೆ, ಡಂಕಿ (ಹಿಂ): ಮ.12.50ಕ್ಕೆ, ರಾ.7.14ಕ್ಕೆ.
ಸ್ಕ್ರೀನ್ 2	ಸಲಾರ್–1 (ಕ): ಬೆ.9ಕ್ಕೆ, ಸಂ.6.50ಕ್ಕೆ, ಅನಿಮಲ್ (ಹಿಂ): ಮ.12.20ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಸಂ.4.05ಕ್ಕೆ, ನೆರು (ಮ): ರಾ.10.15ಕ್ಕೆ,
ಸ್ಕ್ರೀನ್ 3	ಸಲಾರ್–1 (ತೆ): ಬೆ.7ಕ್ಕೆ, ಡಂಕಿ (ಹಿಂ): ಬೆ.10.30ಕ್ಕೆ, ಅಕ್ವಾಮ್ಯಾನ್ ಅಂಡ್ ಲಾಸ್ಟ್ ಕಿಂಗ್‌ಡಮ್ (3ಡಿ)(ಇಂ): ಮ.1.45ಕ್ಕೆ, ಸಂ.4.50ಕ್ಕೆ, ರಾ.7.15ಕ್ಕೆ, ಸಲಾರ್ (ಕ): ರಾ.9.55ಕ್ಕೆ
ಸ್ಕ್ರೀನ್ 4	ಸಲಾರ್–1(ತೆ): ಬೆ.7.15ಕ್ಕೆ, ಮ.12.30ಕ್ಕೆ, ರಾ.7ಕ್ಕೆ, ಡಂಕಿ (ಹಿಂ): ಮ.3.55ಕ್ಕೆ, ರಾ.10.25ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಡಂಕಿ (ಹಿಂ): ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಸಲಾರ್ –1 (ತೆ): ಬೆ.8.10ಕ್ಕೆ, ಬೆ.11.45ಕ್ಕೆ, ಮ.3.20ಕ್ಕೆ, ಸಂ.6.55ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 3	ಡಂಕಿ (ಹಿಂ): ಬೆ.11.30ಕ್ಕೆ, ಸಂ.6.25ಕ್ಕೆ, ಸಲಾರ್–1 (ಹಿಂ): ಮ.2.50ಕ್ಕೆ, ಸಲಾರ್ –1 (ಕ): ರಾ.9.45ಕ್ಕೆ.
ಸ್ಕ್ರೀನ್ 4	ಸಲಾರ್–1 (ತೆ): ಬೆ.8.40ಕ್ಕೆ, ಸಲಾರ್–1 (ಕ): ಮ.12.15ಕ್ಕೆ, ಸಂ.6.35ಕ್ಕೆ, ಅಕ್ವಾಮ್ಯಾನ್ ಅಂಡ್ ಲಾಸ್ಟ್ ಕಿಂಗ್‌ಡಮ್ (3ಡಿ)(ಇಂ): ಮ.3.50ಕ್ಕೆ, ರಾ.10.10ಕ್ಕೆ

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮ ಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಅಕ್ವಾಮ್ಯಾನ್ ಅಂಡ್ ಲಾಸ್ಟ್ ಕಿಂಗ್‌ಡಮ್ (3ಡಿ)(ಇಂ): ಬೆ.9.35ಕ್ಕೆ, ಮ.3.55ಕ್ಕೆ, ರಾ.10ಕ್ಕೆ, ಡಂಕಿ (ಹಿಂ): ಬೆ.9ಕ್ಕೆ, ಬೆ.11.40ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ಸಂ.6.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ, ನೆರು (ಮ): ರಾ.10.10ಕ್ಕೆ, ಸಲಾರ್ –1 (ಮ): ಸಂ.6.35ಕ್ಕೆ, ಸಲಾರ್–1 (ಹಿಂ): ಮ.2.50ಕ್ಕೆ, ಸಂ.5.55ಕ್ಕೆ, ರಾ.10ಕ್ಕೆ, ಸಲಾರ್–1 (ಕ): ಬೆ.8.05ಕ್ಕೆ, ಬೆ.11.15ಕ್ಕೆ, ಮ.3ಕ್ಕೆ, ಸಂ.6.25ಕ್ಕೆ, ಸಲಾರ್– 1(ತೆ): ಬೆ.7.10ಕ್ಕೆ, ಬೆ.7.40ಕ್ಕೆ, ಬೆ.8.10ಕ್ಕೆ, ರಾ.10.45ಕ್ಕೆ, ಬೆ.11.45ಕ್ಕೆ, ಮ.12.20ಕ್ಕೆ, ಮ.3.20ಕ್ಕೆ, ಮ.2.20ಕ್ಕೆ, ಸಂ.6.55ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪ ಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಗೋವಿಂದೇಗೌಡ ನಿಧನ



ಕೆ.ಆರ್.ನಗರ: ತಾಲೂಕಿನ ಕನುಗನಹಳ್ಳಿ ಗ್ರಾಮದ ಮಾಜಿ ಯೋಧ ಕೆ.ಜಿ.ಅಚ್ಚುತ ಅವರ ತಂದೆ ಗೋವಿಂದೇಗೌಡ (72) ಅನಾರೋಗ್ಯದಿಂದ ಗುರುವಾರ ಮಧ್ಯಾಹ್ನ ನಿಧನರಾದರು.ಮೃತರು ಪತ್ನಿ, ಇಬ್ಬರು ಪುತ್ರರನ್ನು ಅಗಲಿದ್ದಾರೆ. ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ಸ್ವಗ್ರಾಮ ಕನುಗನಹಳ್ಳಿಯ ಮೃತರ ಜಮೀನಿನಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಿಜಯೇಂದ್ರ ನೇತೃತ್ವದಲ್ಲಿ ಮಹತ್ವದ ಸಭೆ; ಲೋಕಸಭೆ ಚುನಾವಣೆಗೆ ಹಿರಿಯರ ತಾಲೀಮು;

ಯತ್ನಾಳ್ ವಿರುದ್ಧ ಕ್ರಮಕ್ಕೆ ಕೇಂದ್ರಕ್ಕೆ ಶಿಫಾರಸ್ಸು



ಬೆಂಗಳೂರು, ಡಿ.28– ಮುಂಬರುವ ಲೋಕಸಭಾ ಚುನಾವಣೆಗೆ ಪಕ್ಷವನ್ನು ಸರ್ವ ಸಜ್ಜುಗೊಳಿಸುವುದು ಮತ್ತು ಪಕ್ಷದ ಶಿಸ್ತು ಉಲ್ಲಂಘಿಸುತ್ತಿರುವ ಬಸನಗೌಡ ಪಾಟೀಲ್ ಯತ್ನಾಳ್ ವಿರುದ್ಧ ಕೂಡಲೇ ಕ್ರಮಕ್ಕಾಗಿ ಹೈಕಮಾಂಡ್‌ಗೆ ಒತ್ತಾಯಿಸಲು ಬಿಜೆಪಿ ಹಿರಿಯ ಮುಖಂಡರ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಪಕ್ಷದ ಕಚೇರಿಯಲ್ಲಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರ ಅಧ್ಯಕ್ಷತೆಯಲ್ಲಿ ನಡೆದ ಹಿರಿಯ ಮುಖಂಡರ ಸಭೆಯಲ್ಲಿ ಜೆಡಿಎಸ್ ಜೊತೆಗೆ ಹೊಂದಾಣಿಕೆಯಿಂದ 28 ಕ್ಷೇತ್ರಗಳಲ್ಲಿಯೂ ಜಯಗಳಿಸಲು ಒಗ್ಗಟ್ಟಿನ ಹೋರಾಟ ಮಾಡಬೇಕು ಎಂದು ನಿರ್ಣಯಿಸಲಾಗಿದೆ.

ವಿಧಾನಸಭೆ ಚುನಾವಣೆಯಲ್ಲಿ ನಿರೀಕ್ಷಿತ ಸ್ಥಾನಗಳನ್ನು ಪಡೆಯಲು ಬಿಜೆಪಿಗೆ ಸಾಧ್ಯವಾಗದೆ ಇರುವುದಕ್ಕೆ ನಾನಾ ಕಾರಣಗಳಿವೆ. ಅವುಗಳ ಬಗ್ಗೆಯೂ ಪರಾಮರ್ಶೆ ಮಾಡಿಕೊಂಡು ಪಕ್ಷ ಸಂಘಟನೆಗೆ ಆದ್ಯತೆ ನೀಡಬೇಕು ಎನ್ನುವ ಅಭಿಪ್ರಾಯಕ್ಕೆ ಸಭೆ ಸಹಮತ ನೀಡಿದೆ.

ಪಕ್ಷಕ್ಕೆ ಹಿರಿಯರು ಮುಖ್ಯ. ಕಿರಿಯರ ಉತ್ಸಾಹ, ಹಿರಿಯರ ಅನುಭವ ಸಮ್ಮಿಲನಗೊಂಡರೆ ಮಾತ್ರ ಸಂಘಟನೆಗೆ ಶಕ್ತಿ ಮತ್ತು ಹೊಸ ರೂಪ ಬರಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಬೂತ್ ಮಟ್ಟದಿಂದ ರಾಜ್ಯಮಟ್ಟದ ತನಕ ವ್ಯವಸ್ಥಿತ ಪ್ರಯತ್ನ ಮಾಡಲು ನಿರ್ಧರಿಸಲಾಗಿದೆ ಬಿಜೆಪಿ ಮತ್ತು ಜೆಡಿಎಸ್ ಹೊಂದಾಣಿಕೆ ಬಗ್ಗೆ ಹೈಕಮಾಂಡ್ ತೀರ್ಮಾನ ತೆಗೆದುಕೊಂಡಿದೆ. ನಮ್ಮ ಹಂತದಲ್ಲಿ ಈ ಬಗ್ಗೆ ಸಾಧಕ ಬಾಧಕ ಚರ್ಚೆ ಬೇಡ. ಎರಡೂ ಪಕ್ಷಗಳು ಒಟ್ಟಾಗಿ ಎಲ್ಲಾ ಸ್ಥಾನಗಳನ್ನು ಗೆಲ್ಲಿಸಿಕೊಂಡು ಬರಲು ಹೋರಾಟ ಮಾಡಲು ನಿರ್ಣಯಿಸಲಾಗಿದೆ.

ವೀಡಿಯೋ ಕ್ಲಿಪ್ಪಿಂಗ್ ಸಹಿತ ಶಿಫಾರಸ್ಸು: ಶಾಸಕ ಬಸನಗೌಡ ಯತ್ನಾಳ್ ಆಗಿಂದಾಗ್ಗೆ ನೀಡುತ್ತಿರುವ ಬಹಿರಂಗ ಹೇಳಿಕೆಗಳು ಪಕ್ಷಕ್ಕೆ ಮುಜುಗರ ತರುತ್ತಿರುವುದು ಅಷ್ಟೆ ಅಲ್ಲ, ಸಂಘಟನೆಗೆ ಹಿನ್ನಡೆಯಾಗುತ್ತಿವೆ. ಈ ಬಗ್ಗೆ ತುರ್ತು ಕ್ರಮ ಆಗಲೇಬೇಕು ಎಂದು ಸಭೆಯಲ್ಲಿ ಪ್ರತಿಪಾದಿಸಲಾಗಿದೆ. ಯತ್ನಾಳ್ ವಿಷಯಕ್ಕೆ ಎಲ್ಲಾ ಸಭೆಯಲ್ಲಿ ಆದ್ಯತೆ ನೀಡಿದರೆ ಅವರಿಗೆ ದೊಡ್ಡ ಮನ್ನಣೆ ದೊರೆಯುತ್ತದೆ. ಈ ಬಗ್ಗೆ ಚರ್ಚೆ ಮಾಡುವುದು ಬೇಡ ಎನ್ನುವ ಅಭಿಪ್ರಾಯವೂ ಕೇಳಿ ಬಂದಿದೆ.

ಕೇಂದ್ರದ ನಾಯಕರು ಎಲ್ಲವನ್ನು ಗಮನಿಸುತ್ತಿದ್ದಾರೆ. ಅವರಿಗೆ ಗೊತ್ತಿಲ್ಲದ ಸಂಗತಿಗಳೇನಿಲ್ಲ. ಆದ್ದರಿಂದ ಯತ್ನಾಳ್ ಎಲ್ಲೆಲ್ಲಿ ಏನೇನು ಮಾತನಾಡಿದ್ದಾರೆ ಎನ್ನುವುದನ್ನು ಆಡಿಯೊ, ವಿಡಿಯೊ ಕ್ಲಿಪ್ಪಿಂಗ್ ಸಹಿತ ಹೈಕಮಾಂಡ್‌ಗೆ ಕಳುಹಿಸಿ ಕ್ರಮಕ್ಕೆ ಒತ್ತಾಯಿಸಲು ತೀರ್ಮಾನಿಸಲಾಗಿದೆ. ಯತ್ನಾಳ್ ಮೇಲೆ ಕೇಂದ್ರ ವರಿಷ್ಠರು ತೆಗೆದುಕೊಳ್ಳುವ ತೀರ್ಮಾನಕ್ಕೆ ನಾವೆಲ್ಲರೂ ಬದ್ಧರಾಗೋಣ ಎನ್ನುವ ಸಹಮತಕ್ಕೂ ಸಭೆಯಲ್ಲಿ ಬರಲಾಗಿದೆ.

ಹೋರಾಟಕ್ಕೆ ತೀರ್ಮಾನ: ರಾಜ್ಯ ಸರ್ಕಾರದ ವೈಫಲ್ಯಗಳನ್ನು ಎತ್ತಿ ಹಿಡಿದು ಬೂತ್ ಮಟ್ಟದಿಂದ ರಾಜ್ಯ ಮಟ್ಟದ ತನಕ ಹೋರಾಟ ನಡೆಸುವುದು ಬಹಳ ಮುಖ್ಯ. ಆ ಮೂಲಕವೂ ಜನರ ಸಂಘಟನೆಗೆ ಮತ್ತು ಜಾಗೃತಿಗೆ ಆದ್ಯತೆ ನೀಡಬೇಕು ಎಂದು ನಿರ್ಣಯಿಸಲಾಗಿದೆ.

ಸಭೆಯಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ, ಡಿ.ವಿ. ಸದಾನಂದಗೌಡ, ವಿರೋಧ ಪಕ್ಷದ ನಾಯಕರಾದ ಆರ್.ಅಶೋಕ್, ಮೇಲ್ಮನೆ ವಿರೋಧ ಪಕ್ಷದ ನಾಯಕರಾದ ಕೋಟ ಶ್ರೀನಿವಾಸ ಪೂಜಾರಿ, ಮಾಜಿ ಸಚಿವರಾದ ಕೆ.ಎಸ್.ಈಶ್ವರಪ್ಪ, ಗೋವಿಂದ ಕಾರಜೋಳ, ಡಾ.ಅಶ್ವತ್ಥನಾರಾಯಣ, ಸಿ.ಟಿ.ರವಿ ಮತ್ತಿತರರು ಹಾಜರಿದ್ದರು. ಕೇಂದ್ರ ಸಚಿವ ಪ್ರಹ್ಲಾದಜೋಷಿ, ನಿಕಟಪೂರ್ವ ಬಿಜೆಪಿ ಮಾಜಿ ಅಧ್ಯಕ್ಷರು ಸಭೆಗೆ ಗೈರಾಗಿದ್ದರು.

ನಾಳೆ ಉಪನ್ಯಾಸ

ಮೈಸೂರು, ಡಿ. 28– ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚ್ಯ ವಿದ್ಯಾ ಸಂಶೋಧನಾಲಯ ಮತ್ತು ಐಜಿಎನ್‌ಸಿಎ, ಪ್ರಾದೇಶಿಕ ಕಚೇರಿ, ಬೆಂಗಳೂರು ಸಹಯೋಗದಲ್ಲಿ ಡಿ. 30 ರಂದು ಮೈಸೂರು ವಿಶ್ವವಿದ್ಯಾನಿಲಯದ ವಿಜ್ಞಾನ ಭವನದ ಸೆಮಿನಾರ್ ಹಾಲ್‌ನಲ್ಲಿ ಪುರಾಣದಲ್ಲಿ ಪ್ರಕೃತಿಯ ಮಹತ್ವ ಕುರಿತು ಉಪನ್ಯಾಸ ಆಯೋಜಿಸಲಾಗಿದೆ. ಬೆಂಗಳೂರಿನ ಶ್ರೀ ವಿಶ್ವೇಶತೀರ್ಥ ಸಂಶೋಧನಾ ಪ್ರತಿಷ್ಠಾನದ ಗೌರವ ನಿರ್ದೇಶಕ ಡಾ. ಆನಂದತೀರ್ಥ ವಿ. ನಾಗಸಂಪಿಗೆ ಅವರು ವಿಶೇಷ ಉಪನ್ಯಾಸ ನೀಡಲಿದ್ದಾರೆ. ಉಭಯ ಸಂಸ್ಥೆಗಳ ನಿರ್ದೇಶಕರಾದ ಡಾ. ಡಿ.ಪಿ. ಮಧುಸೂದನಾಚಾರ್ಯ ಮತ್ತು ಡಿ. ಮಹೇಂದ್ರ ಉಪಸ್ಥಿತರಿರುವರು.

ಮೈಸೂರು ಮಿತ್ರ — ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು

ವಿದೇಶ ಪ್ರವಾಸ



ಅಮೂಲ್ಯ.ಹೆಚ್

ಉನ್ನತ ವ್ಯಾಸಂಗಕ್ಕೆ ಲಂಡನ್ (UK)ಗೆ ತೆರಳುತ್ತಿರುವ ಅಮೂಲ್ಯ ಹೆಚ್. ಅವರಿಗೆ

ಶುಭಕೋರುವವರು: ಚಿಕ್ಕಮ್ಮ ಸರಸ್ವತಿ, ಚಿಕ್ಕಪ್ಪ ಭೈರೇಗೌಡ, ದಿವ್ಯ, ಯಶಸ್‌ಗೌಡ, ಮೈಸೂರು

ಮೊ.9945614665

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯ ಪಡಿಸುವುದೇನೆಂದರೆ, ಲೇಟ್ ಪ್ರಮಂದಾಸ್ ಎಚ್. ಹಿಂದುಜಾ ರವರ ಮಕ್ಕಳಾದ 1] ಮದನಲಾಲ್ ಜೆ ಹಿಂದುಜ 2] [illegible] ಜೆ ಹಿಂದುಜಾ ಮತ್ತು 3] [illegible] ಜೆ ಹಿಂದುಜಾ, ರವರು [illegible] ಕೆಳಗೆ ನಮೂದಿಸಿರುವ ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು [illegible] ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಬ್ಯಾಂಕ್ ಮತ್ತು ಇನ್ನಿತರ ಆರ್ಥಿಕ ಸಂಸ್ಥೆಗಳನ್ನು ಒಳಗೊಂಡಂತೆ, ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ–ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 7 (ಏಳು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತರೂಪದಲ್ಲಿ ಅಥವಾ [illegible] ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದ್ದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ–ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ನಾಡನಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂ. 25/1 ಮತ್ತು 25/2 ರಲ್ಲಿ, ಒಟ್ಟು ವಿಸ್ತೀರ್ಣ 05 ಎಕರೆ 04 ಗುಂಟೆ ಜಮೀನು ವಸತಿ ಉದ್ದೇಶಕ್ಕಾಗಿ ಅನ್ಯಕ್ರಾಂತವಾಗಿರುವ ಸ್ವತ್ತಿನ ಸಂಖ್ಯೆ 114/86, [illegible]ಹಳ್ಳಿ ಗ್ರಾಮಪಂಚಾಯಿತಿ ನಮೂನೆ 11ಬಿ ರಂತೆ ಆರ್‌ಡಿಪಿಆರ್ ನಂ.152200433035000239 ಸ್ವತ್ತು ಮತ್ತು ಇದರಲ್ಲಿರತಕ್ಕ ಕಟ್ಟಡವನ್ನೊಳಗೊಂಡ ಸ್ವತ್ತಿಗೆ ಚಕ್ಕುಬಂದಿ: ಪೂರ್ವಕ್ಕೆ: ಸರ್ವೆ ನಂ. 26 ರ ಜಮೀನು, ಪಶ್ಚಿಮಕ್ಕೆ ಸರ್ವೆ ನಂ. 25/1 ಬಾಕಿ ಭಾಗ ಮತ್ತು ಸರ್ವೆ ನಂ. 24, ಉತ್ತರಕ್ಕೆ ಸರ್ಕಾರಿ ಹಳ್ಳ ಮತ್ತು ಸರ್ವೆ ನಂ.28 ಮತ್ತು ದಕ್ಷಿಣಕ್ಕೆ ಮೈಸೂರು–ಬನ್ನೂರು ರಸ್ತೆ

ಎಸ್ ಎಲ್ ಡಿ ಲಾ ಫರ್ಮ್
ಸಹಿ/- **ಶ್ರೀಲತಾ ದೀಕ್ಷಿತ್,** ವಕೀಲರು
ನಂ.1458/ಎ, ನಾರಾಯಣಶಾಸ್ತ್ರಿ ರಸ್ತೆ, ಸಪ್ನ ಬುಕ್ ಹೌಸ್ ಸಮೀಪ, ಮೈಸೂರು.
ಮೊ: 9844640641
email sldlawfirm2021@gmail.com
<mailto:sldlawfirm2021@gmail.com>

ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ಶ್ರೀ ಎನ್.ಜಯರಾಮ್

ಇವರು ದಿನಾಂಕ 20-12-2023ನೇ ಬುಧವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ಉತ್ತರ ಕ್ರಿಯಾದಿ ಕಾರ್ಯವನ್ನು ದಿನಾಂಕ 30-12-2023, ಶನಿವಾರ ಬೆಳಗ್ಗೆ 12.30 ಗಂಟೆಗೆ ನಮ್ಮ ಸ್ವಗೃಹ #609, 3ನೇ ಮುಖ್ಯ ರಸ್ತೆ, ಲಲಿತಮಹಲ್‌ನಗರ, ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರ ಶಾಂತಿಯನ್ನು ಕೋರಬೇಕೆಂದು ವಿನಂತಿಸಿಕೊಳ್ಳುತ್ತೇವೆ.

ದುಃಖತಪ್ತರು: ಮೃತರ ಪತ್ನಿ ಸುಶೀಲ, ಮಕ್ಕಳಾದ ಶಾಲಿನಿ, ದೀಪು, ಸವಿತಾ, ಚೈತ್ರಾ, ಅಳಿಯಂದಿರು, ಮೊಮ್ಮಕ್ಕಳು ಕುಟುಂಬವರ್ಗದವರು ಹಾಗೂ ಬಂಧು ಮಿತ್ರರು